ಮಂಗಳವಾರ, ಅಕ್ಟೋಬರ್ 4, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಹಿರಿಯರಿಗೆ ಶಸ್ತ್ರಚಿಕಿತ್ಸೆಯಾದಾಗ ಅವರಿಗೆ ಇನ್ನೊಬ್ಬರ ನೆರವು ಅನಿವಾರ್ಯ. ಆಪ್ತರು ಸರಿಯಾಗಿ ಸಿದ್ಧತೆ ಮಾಡಿಕೊಂಡರೆ ಈ ಹೊಣೆಗಾರಿಕೆಯನ್ನು ಚೆನ್ನಾಗಿ ನಿರ್ವಹಿಸಬಹುದು.



ಕ್ಷೇಮ ಕುಶಲ



ಆಪ್ತರಿಗೆ ಆಪರೇಷನ್

ಆರೈಕೆಯಲ್ಲಿರಲಿ ಪ್ರಿಪರೇಷನ್



ಮನೆಯಲ್ಲಿ ಹಿರಿಯರಿಗೆ ಶಸ್ತ್ರಚಿಕಿತ್ಸೆಯಾದಾಗ ಅವರಿಗೆ ಇನ್ನೊಬ್ಬರ ನೆರವು ಅನಿವಾರ್ಯ. ಆಪ್ತರು ಸರಿಯಾಗಿ ಸಿದ್ಧತೆ ಮಾಡಿಕೊಂಡರೆ ಈ ಹೊಣೆಗಾರಿಕೆಯನ್ನು ಚೆನ್ನಾಗಿ ನಿರ್ವಹಿಸಬಹುದು.



ಡಾ. ವಿನಯ ಶ್ರೀನಿವಾಸ್

ವಯಸ್ಸಾದಂತೆ ಶರೀರದ ಅಂಗಾಂಗಗಳ ಕಾರ್ಯಕ್ಷಮತೆ ಕುಗ್ಗುವುದು ಸಹಜ. ನಮ್ಮ ಉತ್ತಮ ಜೀವನಶೈಲಿಯಿಂದ ನಾವು ಅದನ್ನು ಸ್ವಲ್ಪ ಮಟ್ಟಿಗೆ ಮುಂದೂಡಬಹುದಾದರೂ ನಮ್ಮ ನಿಯಂತ್ರಣಕ್ಕೆ ಬಾರದ ಕಾರಣಗಳಿಂದಾಗಿ ನಾವು ಕೆಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಒಂದಿಷ್ಟು ಸಮಸ್ಯೆಗಳು ಔಷಧೋಪಚಾರದಿಂದ ಶಮನಗೊಂಡರೆ, ಇನ್ನು ಕೆಲವಕ್ಕೆ ಶಸ್ತ್ರಚಿಕಿತ್ಸೆಯೇ ಪರಿಹಾರ. ಕೆಲವು ಉದಾಹರಣೆಗಳನ್ನು ನೋಡುವುದಾದರೆ, ಕಣ್ಣಿನ ಪೊರೆಯ ಸಮಸ್ಯೆ ವಯೋಸಹಜವಾದದ್ದು. ಅದನ್ನು ಕನ್ನಡಕ ಧರಿಸುವುದರಿಂದಾಗಲಿ ಅಥವಾ ಕಣ್ಣಿಗೆ ಔಷಧದ ಹನಿಗಳನ್ನು ಹಾಕುವುದರಿಂದಾಗಲಿ ಸಹಜ ಸ್ಥಿತಿಗೆ ತರಲಾಗದು. ಕೇವಲ ಶಸ್ತ್ರಚಿಕಿತ್ಸೆಯ ಮೂಲಕ ಕಣ್ಣಿನೊಳಗೆ ಮಸೂರವನ್ನು ಅಳವಡಿಸುವುದರಿಂದ ದೃಷ್ಟಿಯನ್ನು ಸರಿಪಡಿಸಬಹುದು. ನಂತರ ಸುಮಾರು ಒಂದು ತಿಂಗಳವರೆಗೂ ಕಣ್ಣಿಗೆ ಹನಿಗಳನ್ನು ಹಾಕಿಕೊಂಡು ಆರೈಕೆ ಮಾಡಿಕೊಳ್ಳಬೇಕು.

ಮಹಿಳೆಯರಲ್ಲಿ ವಿವಿಧ ಕಾರಣಗಳಿಗಾಗಿ ಗರ್ಭಕೋಶದ ಶಸ್ತ್ರಚಿಕಿತ್ಸೆಯೂ ನಲವತ್ತೈದು-ಐವತ್ತು ವರ್ಷಗಳ ಬಳಿಕವೇ ಬೇಕಾಗಬಹುದು. ಇನ್ನು ಪುರುಷರಲ್ಲಿ ಪ್ರೊಸ್ಟೇಟ್ ಸಮಸ್ಯೆ ಕೂಡ ವಯೋಸಹಜವಾದದ್ದೇ. ಅರವತ್ತರ ಆಸುಪಾಸಿನಲ್ಲಿ ಈ ಗ್ರಂಥಿಯು ಗಾತ್ರದಲ್ಲಿ ದೊಡ್ಡದಾಗಿ ಮೂತ್ರವಿಸರ್ಜನಾ ನಾಳದ ಸುತ್ತಲೂ ಒತ್ತಡ ಹೇರುವುದರಿಂದ ಮೂತ್ರವಿಸರ್ಜನೆಗೆ ತೊಡಕನ್ನು ಉಂಟುಮಾಡಬಹುದು. ಸೌಮ್ಯಸ್ವರೂಪದ್ದಾದರೆ ಔಷಧೋಪಚಾರದಿಂದಲೇ ಗುಣಪಡಿಸಬಹುದು. ತೀವ್ರವಾದಾಗ ಅದನ್ನು ಸರಿಪಡಿಸಲು ಶಸ್ತ್ರಚಿಕಿತ್ಸೆ ಅತ್ಯಗತ್ಯ. ಈ ವಯೋಸಹಜ ಸಮಸ್ಯೆಗಳಲ್ಲದೆ, ಕೆಲವೊಮ್ಮೆ ಸುಧಾರಿತ ಜೀವನಕ್ಕಾಗಿ ಹೃದಯ, ಬೆನ್ನುಮೂಳೆ, ಮಂಡಿ ಚಿಪ್ಪು, ಸೊಂಟದ ಮೂಳೆ – ಇವುಗಳ ಶಸ್ತ್ರಚಿಕಿತ್ಸೆ ಕೂಡ ಅರವತ್ತರ ನಂತರ ಅವಶ್ಯವೆನಿಸುತ್ತವೆ. ಹಿರಿಯರಲ್ಲಿ ಮೂಳೆಗಳು ಟೊಳ್ಳಾಗುವ ಕಾರಣದಿಂದಾಗಿ ಮನೆಯಲ್ಲಿ ಅಥವಾ ರಸ್ತೆಯಲ್ಲಿ ಬಿದ್ದಾಗ ಸಣ್ಣ ಪೆಟ್ಟುಗಳು ಕೂಡ ಮೂಳೆ ಮುರಿತಕ್ಕೆ ಕಾರಣವಾಗಬಹುದು. ಕೆಲವು ಬಗೆಯ ಮೂಳೆಮುರಿತಗಳನ್ನು ಶಸ್ತ್ರಚಿಕಿತ್ಸೆಯಿಂದ ಮಾತ್ರ ಸರಿಪಡಿಸುವುದು ಸಾಧ್ಯ.

ಯಾವುದೇ ವ್ಯಕ್ತಿ ಶಸ್ತ್ರಚಿಕಿತ್ಸೆಗೆ ಒಳಗಾದಾಗ ಅವನು/ಅವಳು ಸ್ವಲ್ಪ ಕಾಲ ನಿತ್ಯಕಾರ್ಯಗಳಿಗೆ ಇನ್ನೊಬ್ಬರನ್ನು ಅವಲಂಬಿಸಬೇಕಾಗುತ್ತದೆ. ಹಿರಿಯರಲ್ಲಿ ಇದು ಸ್ವಲ್ಪ ಹೆಚ್ಚೇ ಎನ್ನಬಹುದು. ಶಸ್ತ್ರಚಿಕಿತ್ಸೆಗೆ ಮೊದಲು ಹಾಗೂ ನಂತರ ಕೆಲ ದಿನಗಳು ಆಸ್ಪತ್ರೆಯಲ್ಲಿ ಇರಬೇಕಾದ ಪರಿಸ್ಥಿತಿ ಇರುತ್ತದೆ. ಈ ದಿನಗಳಲ್ಲಿ ಅವರಿಗೆ ಊಟ-ಉಪಹಾರದ ಪೂರೈಕೆಯನ್ನು ಮನೆಯಿಂದಲೇ ಮಾಡಬೇಕಾಗುತ್ತದೆ. (ದೊಡ್ಡ ನಗರಗಳ ಆಸ್ಪತ್ರೆಗಳಲ್ಲಿ ರೋಗಿಗೆ ಊಟವನ್ನು ಆಸ್ಪತ್ರೆಯ ವತಿಯಿಂದಲೇ ಕೊಡುತ್ತಾರೆ, ಆದರೆ ಸಣ್ಣ ಪಟ್ಟಣಗಳಲ್ಲಿ ಈ ಪದ್ಧತಿ ಇನ್ನೂ ಚಾಲ್ತಿಯಲ್ಲಿಲ್ಲ). ಆಸ್ಪತ್ರೆಯಲ್ಲಿ ಹಗಲು-ರಾತ್ರಿ ಅವರ ಜೊತೆಯಲ್ಲಿರಲು ಒಬ್ಬಿಬ್ಬರು ಬೇಕಾಗುತ್ತದೆ. ಆ ಸಮಯದಲ್ಲಿ ಶಸ್ತ್ರಚಿಕಿತ್ಸೆಗೆ ಅನುಗುಣವಾಗಿ ಅವರನ್ನು ಹಾಸಿಗೆಯಿಂದ ಎಬ್ಬಿಸಲು, ನಡೆದಾಡಿಸಲು, ಶೌಚಾಲಯಕ್ಕೆ ಕರೆದೊಯ್ಯಲು ಇನ್ನೂ ಮೊದಲಾದ ಚಟುವಟಿಕೆಗಳಿಗೆ ಇನ್ನೊಬ್ಬರ ನೆರವು ಅತ್ಯಗತ್ಯ. ಔಷಧೋಪಚಾರವನ್ನು ಅಲ್ಲಿನ ಶುಶ್ರೂಷಕರೇ ಮಾಡಿದರೂ ಇವರ ಯಾವುದೇ ಸಮಸ್ಯೆಗಳನ್ನು ಶುಶ್ರೂಷಕರಿಗೆ ತಿಳಿಸಲು, ಔಷಧಗಳನ್ನು ತಂದುಕೊಡಲು, ವೈದ್ಯರು ಭೇಟಿಗೆ ಬಂದಾಗ ಅವರು ಕೊಡುವ ಮುಂದಿನ ಆದೇಶಗಳನ್ನು ಪಾಲಿಸಲು ಅವರ ಸಹಾಯಕ್ಕೊಬ್ಬರು ಅತ್ಯವಶ್ಯ.

ಆದರೆ ಇತ್ತೀಚಿನ ದಿನಗಳಲ್ಲಿ ಒಬ್ಬ ಅಥವಾ ಇಬ್ಬರೇ ಹಿರಿಯರು ಇರುವ ಮನೆಗಳು ಹೆಚ್ಚಾಗುತ್ತಿವೆ. ಮಕ್ಕಳು ಉದ್ಯೋಗಕ್ಕಾಗಿ ಅಥವಾ ಹೆಚ್ಚಿನ ಅಧ್ಯಯನಕ್ಕಾಗಿ ದೂರದ ಊರುಗಳಲ್ಲಿ ನೆಲೆಸಿರುವುದು ಸರ್ವೇಸಾಮಾನ್ಯ. ಹತ್ತಿರದ ಆಪ್ತಸಂಬಂಧಿಗಳೂ ದೂರದ ಊರುಗಳಲ್ಲಿ ನೆಲೆಸಿರಬಹುದು. ಇಂತಹ ಪರಿಸ್ಥಿತಿಯಲ್ಲಿ ಕುಟುಂಬದ ಹಿರಿಯರಿಗೆ ಶಸ್ತ್ರಚಿಕಿತ್ಸೆ ಎಂದು ಗೊತ್ತಾದಾಗ ಮಕ್ಕಳು, ಮೊಮ್ಮಕ್ಕಳು ಊರಿಗೆ ದೌಡಾಯಿಸುತ್ತಾರೆ. ಇದರ ಜೊತೆಯಲ್ಲಿಯೇ ಹತ್ತಿರದ ಸಂಬಂಧಿಗಳು ಸಹ ಸೌಜನ್ಯಕ್ಕಾಗಿಯೋ ಅಥವಾ ನಿಜವಾದ ಕಾಳಜಿಯಿಂದಲೋ ರೋಗಿಯ ಭೇಟಿಗೆಂದು ಬರುವುದಿದೆ. ಈ ರೀತಿಯ ಭೇಟಿಯನ್ನು ಎಲ್ಲರೂ ಪರಸ್ಪರ ಚರ್ಚಿಸಿ, ಪೂರ್ವ ಯೋಜನೆಯನುಸಾರ ಮಾಡಿದರೆ ಒಳ್ಳೆಯದು. ಭೇಟಿ ಮಾಡಲೆಂದು ಬರುವ ಎಲ್ಲ ನೆಂಟರು ರೋಗಿಯು ಆಸ್ಪತ್ರೆಯಲ್ಲಿ ಇರುವಾಗಲೇ ಬಂದರೆ ಆಸ್ಪತ್ರೆಯ ಸಿಬ್ಬಂದಿಗಳು ಅಲ್ಲಿನ ನಿಯಮದ ಪ್ರಕಾರ ಎಲ್ಲರಿಗೂ ಅನುಮತಿ ಕೊಡದೇ ಇರಬಹುದು. ಹಾಗಾದಾಗ ಭೇಟಿ ಮಾಡಲು ಬಂದೂ ಉದ್ದೇಶ ಈಡೇರದಂತಾಗಬಹುದು. ಅಲ್ಲದೆ, ಶಸ್ತ್ರಚಿಕಿತ್ಸೆಯ ಬಳಿಕ ರೋಗಿಯ ಬಳಿ ಬಹಳ ಜನರು ಸುಳಿಯುವುದೂ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ; ಸೋಂಕು ತಗಲುವ ಸಂಭವ ಹೆಚ್ಚಾಗಬಹುದು. ಆದ್ದರಿಂದ ಅವರು ಆಸ್ಪತ್ರೆಯಲ್ಲಿರುವಾಗ ಯಾರೆಲ್ಲ ಭೇಟಿ ಮಾಡಬೇಕು, ಎಷ್ಟು ದಿನದವರೆಗೆ ಇರಬೇಕು ಎಂಬುದನ್ನು ಮೊದಲೇ ತೀರ್ಮಾನಿಸಿಕೊಂಡಿದ್ದರೆ ಒಬ್ಬರಾದ ಮೇಲೆ ಮತ್ತೊಬ್ಬರಂತೆ ಬಂದು ಹೋಗಬಹುದು. ಇಬ್ಬರು ಸಂಬಂಧಿಗಳು ಅವರವರ ಉದ್ಯೋಗ ಮತ್ತು ದಿನಚರಿಗೆ ತೊಂದರೆಯಾಗದಂತೆ ಎರಡು ದಿನ ಬಿಡುವು ಮಾಡಿಕೊಂಡು ರೋಗಿಯ ಸಹಾಯಕ್ಕೆ ಬಂದು ನಿಂತರೆ, ಮುಂದಿನ ಎರಡು ದಿನಗಳಿಗೆ ಇನ್ನಿಬ್ಬರು ಸಂಬಂಧಿಗಳು ತಯಾರಾಗಬಹುದು. ಇದರಿಂದ ಇಬ್ಬರಿಗೂ, ಅಂದರೆ ರೋಗಿಗೂ ಮತ್ತು ಭೇಟಿ ಮಾಡ ಬಂದವರಿಗೂ ಒಳ್ಳೆಯದೇ. ಆಸ್ಪತ್ರೆಯ ಸಿಬ್ಬಂದಿಗಳೊಡನೆ ಗದ್ದಲ-ಗಲಾಟೆಗಳೂ ಇರುವುದಿಲ್ಲ. ರೋಗಿಗೂ ಎಲ್ಲಾ ಸಮಯದಲ್ಲಿಯೂ ಒಬ್ಬರು ಜೊತೆಯಲ್ಲಿದ್ದಂತಾಗುತ್ತದೆ.

ಇನ್ನು ಆಸ್ಪತ್ರೆಯಿಂದ ಮನೆಗೆ ತೆರಳಿದ ಬಳಿಕವೂ ಒಂದಿಷ್ಟು ದಿನಗಳವರೆಗೆ ಆ ಹಿರಿಯರಿಗೆ ಮತ್ತೊಬ್ಬರ ನೆರವು ಬೇಕಾಗಿರುತ್ತದೆ. ಆ ದಿನಗಳಲ್ಲಿಯೂ ಆಪ್ತ ಸಂಬಂಧಿಕರು ಯಾರು ಯಾರು, ಯಾವ ದಿನಗಳಲ್ಲಿ ಮತ್ತು ಎಷ್ಟು ದಿನಗಳವರೆಗೆ ಬಂದು ಅವರೊಡನಿದ್ದು ಅವರಿಗೆ ನೆರವಾಗಬಹುದು ಎಂಬುದನ್ನು ಮೊದಲೇ ನಿರ್ಧರಿಸಿಕೊಂಡರೆ ಆರೈಕೆ ಸುಗಮವಾಗುತ್ತದೆ. ಮನೆಯಲ್ಲಿಯೂ ಎಲ್ಲರೂ ಒಟ್ಟೊಟ್ಟಿಗೇ ಬಂದರೆ ಅದು ಒಂದಿಷ್ಟು ಇರಿಸು ಮುರುಸು ಗೊಂದಲಕ್ಕೆ ಕಾರಣವಾಗಬಹುದು. ಅಲ್ಲದೆ, ಈ ದಿನಗಳಲ್ಲಿ ಪ್ರತಿಯೊಬ್ಬರೂ ಬಿಡುವಿಲ್ಲದ ಕೆಲಸ ಕಾರ್ಯಗಳಲ್ಲಿ ತೊಡಗಿರುವುದರಿಂದ ಅವರ ನಿತ್ಯದ ಕೆಲಸಗಳಿಗೂ ತೊಡಕಾಗದಂತೆ ಎರಡು ಅಥವಾ ಮೂರು ದಿನಗಳಿಗಾಗಿ ಈ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಬಹುದು. ಈಗ ಎಲ್ಲರ ಬಳಿಯೂ ಮೊಬೈಲ್ ಫೋನ್ ಇರುವುದರಿಂದ ಪರಸ್ಪರ ಮಾತನಾಡಿಕೊಂಡು ಪೂರ್ವ ಯೋಜನೆ ಮಾಡುವುದು ಸುಲಭ ಸಾಧ್ಯವೂ ಹೌದು. ಇದರಿಂದ ಎಲ್ಲರ ಸಮಯವೂ ಸದುಪಯೋಗವಾಗುತ್ತದೆ; ರೋಗಿಗೆ ಗರಿಷ್ಠ ಬೆಂಬಲ ಮತ್ತು ಆರೈಕೆಗಳೂ ದೊರೆತಂತಾಗುತ್ತದೆ.



ಸೋತು ಗೆಲ್ಲುವ ಜಗಳಗಳು

ರಮ್ಯಾ ಶ್ರೀಹರಿ

ಮನೆಯ ಸದಸ್ಯರೊಡನೆಯ ಸೌಹಾರ್ದ ಸಂಬಂಧ ನಮ್ಮ ದೈಹಿಕ, ಮಾನಸಿಕ, ಸಾಮಾಜಿಕ ಆರೋಗ್ಯವನ್ನು ಪ್ರಭಾವಿಸುತ್ತದೆ. ಮನೆಯಲ್ಲಿಯ ವಾತಾವರಣ ಮನಸ್ತಾಪದಿಂದ ಕೂಡಿದ್ದರೆ ಮನದಲ್ಲಿನ ಉತ್ಸಾಹವು ಬತ್ತಿಹೋಗಿ ಹೊರಪ್ರಪಂಚದ ಸವಾಲುಗಳನ್ನು ಎದುರಿಸುವುದು ಕಷ್ಟವಾಗುತ್ತದೆ. ಚಿಂತೆ, ಆತಂಕಗಳು ಧೃತಿಗೆಡಿಸಿದಾಗ ಭಾವನಾತ್ಮಕ ಬೆಂಬಲ ನೀಡುವ ಕುಟುಂಬವೇ ನಮ್ಮೆಲ್ಲಾ ಸೌಖ್ಯದ ಅಡಿಪಾಯ. ಇಂತಹ ಬೆಂಬಲ ಬೇಕಾದಲ್ಲಿ ನಾವು ನಮ್ಮ ಧೋರಣೆಗಳಲ್ಲಿ, ಸಂಬಂಧಗಳನ್ನು ಗ್ರಹಿಸುವ ರೀತಿಯಲ್ಲಿ, ಮನೆಯ ಸದಸ್ಯರೊಡನೆಯ ಮಾತುಕತೆಯಲ್ಲಿ, ಒಟ್ಟು ನಮ್ಮ ವರ್ತನೆಯಲ್ಲಿ ಕೆಲವು ಬದಲಾವಣೆಗಳನ್ನು ತಂದುಕೊಳ್ಳಬೇಕಾಗುತ್ತದೆ.

ನಮ್ಮನೆಮ್ಮದಿ, ಶಾಂತಿ, ಸಮಾಧಾನ ನಮ್ಮ ಕೈಯಲ್ಲೇ ಇದೆ. ಅದು ನಮ್ಮ ಮನಸ್ಸಿನ ಸ್ಥಿತಿಗತಿ, ನಮ್ಮ ಮಾತು, ನಮ್ಮ ಕ್ರಿಯೆಗಳನ್ನೇ ನೇರವಾಗಿ ಅವಲಂಬಿಸಿರುತ್ತವೆ. ಆದರೆ ನಮ್ಮ ಮನಸ್ಸಿನ ಏರುಪೇರುಗಳಿಗೆ ನಾವು ಅನ್ಯರನ್ನು ಕಾರಣವಾಗಿಸಲು ಹೊರಡುತ್ತೇವೆ. ಬೇರೆಯವರು ನಮ್ಮ ನೆಮ್ಮದಿಯನ್ನು ಹಾಳು ಮಾಡುತ್ತಿದ್ದಾರೆ ಎನ್ನುವ ಭಾವವೇ ನಮ್ಮ ದಿನನಿತ್ಯದ ಮಾತುಕತೆಗಳಲ್ಲೂ ಪ್ರತಿಬಿಂಬಿತವಾಗುತ್ತಿರುತ್ತದೆ. 'ನನ್ನನ್ನು ರೇಗಿಸಬೇಡ', 'ನಿನ್ನ ವರ್ತನೆ ನನಗೆ ಹುಚ್ಚು ಹಿಡಿಸುತ್ತಿದೆ', 'ನಾನು ಹೀಗೆಲ್ಲಾ ಮಾತಾಡೋಕೆ ನೀನೇ ಕಾರಣ – ಹೀಗೆ ಬೇರೆಯವರನ್ನೇ ನಮ್ಮೆಲ್ಲಾ ಭಾವನೆಗಳಿಗೂ ಕ್ರಿಯೆಗಳಿಗೂ ಕಾರಣರಾಗಿಸುವ ಹುನ್ನಾರ ನಡೆಸುತ್ತಿರುತ್ತೇವೆ. ಮನೆಯಲ್ಲಿ ನಡೆಯುವ ಜಗಳಗಳು, ವಾದವಿವಾದಗಳು, ಮನಸ್ತಾಪಗಳು ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ನೋಡಿದಾಗ ಅದರಲ್ಲಿ ಬಹುಪಾಲು ನಮ್ಮನ್ನು ಸಮರ್ಥಿಸಿಕೊಳ್ಳುವುದು ಹಾಗೂ ಬೇರೆಯವರನ್ನು ದೂರುವುದೇ ಇರುತ್ತದೆ. 'ನಾನೇ ಸರಿ', 'ನಾನೇ ಮುಖ್ಯ' ಎಂಬ ಭಾವವೇ ಇದರಲ್ಲಿ ಎದ್ದುಕಾಣುತ್ತಿರುತ್ತದೆ.

ನಮ್ಮೆಲ್ಲಾ ವಿವೇಕಹೀನ ಮಾತು-ಕೃತಿಗಳಿಗೆ ಬೇರೆಯವರನ್ನೇ ಕಾರಣವಾಗಿಸುತ್ತಾ 'ನಮ್ಮಲ್ಲೇನೂ ದೋಷವೇ ಇಲ್ಲ' ಎಂಬಂತೆ ಜಗಳವಾಡಿದ ನಂತರ, ಹಾಗೆ ನಾವು ಯಾರೊಂದಿಗೆ ಜಗಳವಾಡಿರುತ್ತೇವೋ ಅವರೇ ಬಂದು ತಮ್ಮ ತಪ್ಪನ್ನು ಒಪ್ಪಿಕೊಂಡು ನಮ್ಮನ್ನು ಸಂತೈಸಬೇಕು ಎಂಬ ಆಸೆಯೂ ಮನದ ಮೂಲೆಯಲ್ಲಿ ಅವಿತುಕೊಂಡಿರುತ್ತದೆ. ಇದು ಸಾಧ್ಯವಾಗದೇ ಹೋದಾಗ ನಮ್ಮ ನಡುವಿರುವ ಪ್ರೀತಿ, ವಿಶ್ವಾಸ, ಅನುಬಂಧಗಳ ಬಗ್ಗೆಯೇ ಅನುಮಾನ ಶುರುವಾಗಿ ಸಂಬಂಧಗಳೂ ಮನಃಶಾಂತಿಯೂ ಕದಡಿ ರಾಡಿಯಾಗುತ್ತದೆ. ಜಗಳ ಆಡುವ ಭರದಲ್ಲಿ ನಾವು ಸಾಧಾರಣವಾಗಿ ಒಂದು ವಿಷಯವನ್ನು ಗಮನಿಸುವುದಿಲ್ಲ. ಎಲ್ಲಿಯವರೆಗೆ 'ನಾನೇ ಸರಿ' ಎಂದು ನಾವು ವಾದಿಸುತ್ತಿರುತ್ತೇವೆಯೋ ಅಲ್ಲಿಯವರೆಗೆ ಎದುರಿಗಿರುವವರು ನಮ್ಮ ಮಾತುಗಳನ್ನು ಆಲಿಸಿ ಅರ್ಥಮಾಡಿಕೊಳ್ಳುವ ಬದಲಾಗಿ ನಮ್ಮೊಡನೆ ಸರಿತಪ್ಪುಗಳ ವಾದ ಮಾಡುತ್ತಲೇ ಇರುತ್ತಾರೆ. ನಮ್ಮ ಯಾವ ಗುಣಗಳನ್ನೂ ಪರಿಗಣಿಸದೇ ಕೇವಲ ಆ ಸಮಯದಲ್ಲಿ ಎದ್ದುಕಾಣುವ ದೋಷಗಳನ್ನೇ ಕಾಣುತ್ತಿರುತ್ತಾರೆ. 'ನಾನೇ ಸರಿ' ಎಂದು ವಾದಿಸುವುದರ ಹಿಂದೆ 'ನನ್ನ ತಪ್ಪಿದೆ ಎಂದು ಒಪ್ಪಿಕೊಂಡರೆ, ಕ್ಷಮೆ ಕೇಳಿದರೆ, ನನ್ನತನಕ್ಕೆ ಪೆಟ್ಟು ಬೀಳಬಹುದು, ಅವಮಾನವಾಗಬಹುದು' ಎಂಬ ಭಯವಿರುತ್ತದೆ.

ಕ್ಷಮೆ ಕೇಳುವುದೆಂದರೆ ಅಥವಾ ಆಗಿದ್ದನ್ನು ಮರೆತು, ಕ್ಷಮಿಸಿ ಮುನ್ನಡೆಯುವುದೆಂದರೆ ಅದನ್ನು ಕೆಲವರು ಯುದ್ಧದಲ್ಲಿ ಸೋತಂತೆ ಎಂಬಂತೆ ಭಾವಿಸುತ್ತಾರೆ. ನಿಜ, ಕ್ಷಮೆ ಕೇಳಿದಾಗ ನಾವು 'ಅಹಂ' ಎಂಬ ಯುದ್ಧದಲ್ಲಿ ಸೋಲುತ್ತೇವೆ. ಒಂದು ಕ್ಷಣ ನಾವು ಅಸಹಾಯಕರಾದಂತೆಯೂ ಅನಿಸುತ್ತದೆ. ಎದುರಿನವರು ನಮ್ಮ ಸೋಲನ್ನು ದುರುಪಯೋಗ ಪಡಿಸಿಕೊಂಡರೆ, ಅವರು ಮುಂದೆ ಎಂದೆಂದೂ ತಾವೇ ಸರಿ ಎಂಬಂತೆ ಆಡುವುದನ್ನು ಅಭ್ಯಾಸಮಾಡಿಕೊಂಡುಬಿಟ್ಟರೆ ಎಂಬ ಭಯಗಳೂ ಕಾಡುತ್ತವೆ. ಆದರೆ ಯಾವುದು ಏನಾದರೂ, ಯಾರು ಏನೆಂದರೂ ನಮ್ಮ ಆಂತರ್ಯದಲ್ಲಿ ನಮಗೆ ನಮ್ಮ ತಪ್ಪಿನ ಅರಿವಿರುತ್ತದೆ; ಆತ್ಮಸಾಕ್ಷಿ ನಮ್ಮನ್ನು ಚುಚ್ಚುತ್ತಿರುತ್ತದೆ. ನಮ್ಮ ಮನಸ್ಸಿನ ಸಮಾಧಾನಕ್ಕಾಗಿಯಾದರೂ ನಾವು ಕ್ಷಮೆ ಕೇಳಬೇಕಾಗುತ್ತದೆ.



ಕ್ಷಮೆ ಕೇಳುವುದೆಂದರೆ ನಮ್ಮ ಮಿತಿಗಳನ್ನು, ನಿರೀಕ್ಷೆಗಳನ್ನು, ನಮ್ಮ ಮನದ ಕೋಲಾಹಲಗಳನ್ನು ಮುಕ್ತ ಮನಸ್ಸಿನಿಂದ ಹೇಳಿಕೊಳ್ಳುವುದು. ನಮ್ಮ ನಿಜವಾದ ಭಾವವನ್ನು ಯಾವುದೇ ಸುತ್ತಿ ಬಳಸಿ ಮಾತನಾಡುವ ಚಾಲಾಕಿತನ ತೋರದೆ ನಿಸ್ಸಂಕೋಚವಾಗಿ ತೋಡಿಕೊಳ್ಳುವುದು. ಅಲ್ಲಿ ನಮ್ಮಿಂದ ಬೇರೆಯವರಿಗೆ ನೋವುಂಟಾಗಿದ್ದರ ಕುರಿತು ಸಂಕಟವಿರಬೇಕು, ಮತ್ತೆ ನಮ್ಮನ್ನೇ ಸಮರ್ಥಿಸಿಕೊಳ್ಳುವುದಿರಬಾರದು. ಹೇಗೆ ಬದಲಾವಣೆ ತಂದುಕೊಳ್ಳುವುದು ಎನ್ನುವುದರ ಬಗ್ಗೆ ಪ್ರಾಮಾಣಿಕವಾಗಿ ಚರ್ಚಿಸಬೇಕು. ನಮ್ಮ ತಪ್ಪನ್ನು ಕ್ಷಮಿಸಲು ಅಥವಾ ಕ್ಷಮಿಸದೇ ಇರಲೂ ಸಮಯವನ್ನೂ, ಅವಕಾಶವನ್ನೂ ಕೊಡಬೇಕು. ಇಂತಹ ಕ್ಷಮೆ ನಮಗೇ ಆಶ್ಚರ್ಯವಾಗುವಂತಹ ಬದಲಾವಣೆಗಳನ್ನು ತರುತ್ತದೆ. ಅದು ನಮ್ಮೆಲ್ಲಾ ಭಯಗಳನ್ನು, ಅನುಮಾನಗಳನ್ನು ಸುಳ್ಳಾಗಿಸಿ ನೇರ ಎದುರಿನವರ ಹೃದಯಕ್ಕೇ ತಲುಪುತ್ತದೆ, ಅವರಿಗೂ ಆತ್ಮವಿಮರ್ಶೆ ಮಾಡಿಕೊಳ್ಳುವ ಪ್ರೇರಣೆಯನ್ನೂ ಅವಕಾಶವನ್ನೂ ನಮ್ಮ ಪ್ರಾಂಜಲವಾದ ಈ ನಡೆ ನೀಡುತ್ತದೆ.

ಕೆಲವೊಮ್ಮೆ ನಮ್ಮ ತಪ್ಪಿಲ್ಲದಿದ್ದರೂ ಬೇರೆಯವರ ಟೀಕೆಗೆ ಒಳಗಾಗಬೇಕಾಗುತ್ತದೆ. ಆಗ ಸಾವಧಾನದಿಂದ ವಿವರಿಸಲು ಪ್ರಯತ್ನಿಸಬಹುದು. ಅದು ಸಾಧ್ಯವಾಗದಿದ್ದರೆ ಎದುರಿನವರು ವಿನಾ ಕಾರಣ ದೂಷಿಸುತ್ತಿದ್ದಾರೆ ಎನಿಸಿದರೆ ಅಂತಹ ನಕಾರಾತ್ಮಕ ಮಾತು, ವರ್ತನೆಗೆ ಪ್ರತಿಕ್ರಿಯೆ ನೀಡದೆ ನಮ್ಮ ಶಾಂತಿಯನ್ನೂ ಸಂಬಂಧವನ್ನೂ ಕಾಪಾಡಿಕೊಳ್ಳಬಹುದು. ಪ್ರತಿಕ್ರಿಯೆ ಇಲ್ಲದಿದ್ದಾಗ ಎಂತಹ ವಿಷಮಯ ಭಾವಗಳೂ ತಮ್ಮ ತೀಕ್ಷ್ಣತೆಯನ್ನು ಕಳೆದುಕೊಂಡುಬಿಡುತ್ತವೆ. ಇಂತಹ ಸಮಯದಲ್ಲಿ ಮೌನವಾಗಿರುವುದು ಅಥವಾ ತಟಸ್ಥವಾಗಿರುವುದು ದುರ್ಬಲತೆಯ ಲಕ್ಷಣವಲ್ಲ; ಅದು ವಿವೇಕದ ಸಂಕೇತ.

ಎಲ್ಲರೂ ಅವರವರ ರೀತಿಯಲ್ಲಿ ಸರಿಯಾಗೇ ಇದ್ದರೂ ಕೆಲವೊಮ್ಮೆ ಪರಸ್ಪರರ ಸ್ವಭಾವಗಳ ಭಿನ್ನತೆಯೇ ಹೊಂದಾಣಿಕೆಯನ್ನು ಕಷ್ಟಕರವಾಗಿಸುತ್ತದೆ. ಆಗ ನಾವು ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು: ಜೊತೆಗಿರುವುದು ಮುಖ್ಯವಾದಾಗ ಬಿಟ್ಟುಕೊಡುವುದೂ ಮುಖ್ಯವಾಗುತ್ತದೆ; ಅದಿಲ್ಲದಿದ್ದರೆ ಜೊತೆಗಿರುವುದೇ ಅಸಾಧ್ಯ. ಯಾವುದಕ್ಕೆ ಹೋರಾಡಬೇಕು, ಯಾವುದನ್ನು ನಿರ್ಲಕ್ಷಿಸಿ ಮುನ್ನಡೆಯಬೇಕು ಎಂಬ ಎಚ್ಚರ ನಮ್ಮಲ್ಲಿರದಿದ್ದರೆ ಜೀವನಪೂರ್ತಿ ಎಲ್ಲದಕ್ಕೂ ಎಲ್ಲರೊಂದಿಗೂ ಜಗಳವಾಡುತ್ತಲೇ ಕಾಲ ಕಳೆಯಬೇಕಾಗುತ್ತದೆ!

ಸಮಾಧಾನಚಿತ್ತದಿಂದ, ಸಂವಾದದಿಂದ, ಸಹಾನುಭೂತಿಯಿಂದ ಪರಿಹಾರವಾಗದ ವಿರಸಗಳೇ ಪ್ರಪಂಚದಲ್ಲಿಲ್ಲ. ನಮ್ಮೆಲ್ಲಾ ಜಗಳಗಳು ಹುಟ್ಟುವುದೇ ಸಂಕುಚಿತಬುದ್ಧಿಯಿಂದ, ಅಜ್ಞಾನದಿಂದ. ಇದನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡರೆ ನಮ್ಮ ಮನಸ್ಸಿನ ನೆಮ್ಮದಿಗೆ, ಸಂಬಂಧದ ಆರೋಗ್ಯಕ್ಕೆ ಆ ಕ್ಷಣದಲ್ಲಿ ಯಾವುದು ಮುಖ್ಯ ಎನ್ನುವ ಅರಿವುಂಟಾಗುತ್ತದೆ. ಮಾತನಾಡಿ ಬಗೆಹರಿಸಿಕೊಳ್ಳುವುದೋ ಕ್ಷಮಿಸುವುದೋ ಕ್ಷಮೆ ಕೇಳುವುದೋ ಮರೆತು ಮುನ್ನಡೆಯುವುದೋ, ಭಾವಾತಿರೇಕ ಇಳಿದು ಮನಸ್ಸು ತಿಳಿಯಾಗುವ ತನಕ ಸಮಯ ಕೊಡುವುದೋ – ಒಟ್ಟಿನಲ್ಲಿ ಸರಿ-ತಪ್ಪು, ಸೋಲು-ಗೆಲುವು ಇಂತಹ ಸಾಪೇಕ್ಷ ಸತ್ಯಗಳನ್ನು ಮೀರಿ ಯಾವುದು ಪ್ರೀತಿಯನ್ನು, ಬಾಂಧವ್ಯವನ್ನು ಗಟ್ಟಿಗೊಳಿಸುವುದೋ ಅದೇ ಶ್ರೇಷ್ಠ, ಅದೇ ಕ್ಷೇಮ ಎನ್ನುವ ತಿಳಿವಳಿಕೆಯೂ ಮೂಡುತ್ತದೆ.

ಮಂಗಳವಾರ, ಅಕ್ಟೋಬರ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 275 | ಪುಟ 20

www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,788 ▼	16,887 ▼	₹51,950 (ಬೆಂಗಳೂರು)	₹58,400 (ಬೆಂಗಳೂರು)	81.82 ▼

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಆಯುಧಪೂಜೆ ನಿಮಿತ್ತ ಮಂಗಳವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಬುಧವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
–ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಚ್‌ಎಎಲ್ ನಿರ್ಮಿತ ಲಘು ಯುದ್ಧ ಹೆಲಿಕಾಪ್ಟರ್ ಸೇವೆಗೆ ನಿಯೋಜನೆ

ಸೇನೆಗೆ ‘ಪ್ರಚಂಡ’ ಬಲ

ಜೋಧಪುರ (ಪಿಟಿಐ): ಹಿಂದುಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಸಂಪೂರ್ಣ ದೇಶೀಯವಾಗಿ ನಿರ್ಮಿಸಿರುವ ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು (ಎಲ್‌ಸಿಎಚ್) ವಾಯುಪಡೆ ಮತ್ತು ಭೂಸೇನೆಯ ಸೇವೆಗೆ ಸೋಮವಾರ ನಿಯೋಜನೆ ಮಾಡಲಾಯಿತು. ಈ ಹೆಲಿಕಾಪ್ಟರ್‌ಗೆ ‘ಪ್ರಚಂಡ’ ಎಂದು ಹೆಸರಿಡಲಾಗಿದೆ.

ಈ ಹೆಲಿಕಾಪ್ಟರ್‌ಗಳು ಎಲ್ಲಾ ಸ್ವರೂಪದ ವಾತಾವರಣದಲ್ಲಿ, ಹಗಲು ಮತ್ತು ರಾತ್ರಿಯ ವೇಳೆಯಲ್ಲೂ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿವೆ. ಜತೆಗೆ ಅತ್ಯಂತ ಎತ್ತರದ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿರುವ ವಿಶ್ವದ ಕೆಲವೇ ಲಘು ಹೆಲಿಕಾಪ್ಟರ್‌ಗಳಲ್ಲಿ ಒಂದೆನಿಸಿದೆ.

ಈ ಹೆಲಿಕಾಪ್ಟರ್ ಅನ್ನು ಸಂಪೂರ್ಣವಾಗಿ ದೇಶೀಯವಾಗಿ ವಿನ್ಯಾಸ ಮಾಡಲಾಗಿದೆ. ಇದರಲ್ಲಿ ಶೇ 45ರಷ್ಟು ಉಪಕರಣ ಮತ್ತು ಬಿಡಿಭಾಗಗಳು ದೇಶೀಯವಾದವು ಎಂದು ಕೇಂದ್ರ ಸರ್ಕಾರವು ಟ್ವೀಟ್ ಮಾಡಿದೆ. ಎಚ್‌ಎಎಲ್ ಮೊದಲ ತಂಡದಲ್ಲಿ ಇಂತಹ 15 ಹೆಲಿಕಾಪ್ಟರ್‌ಗಳನ್ನು ನಿರ್ಮಿಸಿದೆ. ಅದರಲ್ಲಿ ವಾಯುಪಡೆಗೆ 10 ಮತ್ತು ಭೂಸೇನೆಗೆ 5 ಹೆಲಿಕಾಪ್ಟರ್‌ಗಳನ್ನು ನೀಡಲಾಗಿದೆ.



ಜೋಧಪುರದ ವಾಯುನೆಲೆಯಲ್ಲಿ ಲಘು ಯುದ್ಧ ಹೆಲಿಕಾಪ್ಟರ್‌ಗೆ ಜಲಫಿರಂಗಿ ಸ್ವಾಗತ ಕೋರಲಾಯಿತು –ಪಿಟಿಐ ಚಿತ್ರ

ಅಂಕಿ-ಅಂಶಗಳು

- **₹3,887 ಕೋಟಿ** – 15 ಹೆಲಿಕಾಪ್ಟರ್‌ಗಳ ಖರೀದಿಗೆ ತಗುಲಿದ ವೆಚ್ಚ
- **1999** – ಲಘು ಯುದ್ಧ ಹೆಲಿಕಾಪ್ಟರ್‌ಗಳ ಅಗತ್ಯದ ಬಗ್ಗೆ ಚರ್ಚೆಯಾದ ವರ್ಷ
- **22 ವರ್ಷಗಳು** – ಪ್ರಸ್ತಾವ, ವಿನ್ಯಾಸ, ಅಭಿವೃದ್ಧಿ, ಪರೀಕ್ಷೆ, ತಯಾರಿಕೆ ಮತ್ತು ಹಸ್ತಾಂತರಕ್ಕೆ ತಗುಲಿದ ಅವಧಿ

ಜೋಧಪುರದಲ್ಲಿರುವ ವಾಯುನೆಲೆಯಲ್ಲಿ ಜಲಫಿರಂಗಿ ಹಾರಿಸುವ ಮೂಲಕ ಮತ್ತು ಎಲ್ಲಾ ಧರ್ಮಗಳ ಪ್ರಕಾರ ಪ್ರಾರ್ಥನೆ ಸಲ್ಲಿಸುವ ಮೂಲಕ ಈ ಹೆಲಿಕಾಪ್ಟರ್‌ಗಳನ್ನು ಸೇವೆಗೆ ನಿಯೋಜನೆ ಮಾಡಲಾಯಿತು. ಸೇವೆಗೆ ನಿಯೋಜನೆ ಮಾಡಿದ ನಂತರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಹೆಲಿಕಾಪ್ಟರ್‌ನಲ್ಲಿ ಒಂದು ಸುತ್ತು ಪ್ರಯಾಣ ನಡೆಸಿದರು.

1999ರ ಕಾರ್ಗಿಲ್ ಕಾರ್ಯಾಚರಣೆಯ ವೇಳೆ ಲಘು ಯುದ್ಧ ಹೆಲಿಕಾಪ್ಟರ್‌ಗಳ ಕೊರತೆ ಕಾಡಿತ್ತು. ಆನಂತರ ಇಂತಹ ಹೆಲಿಕಾಪ್ಟರ್‌ಗಳ ಅಭಿವೃದ್ಧಿಗೆ ಸರ್ಕಾರ ಕ್ರಮ ತೆಗೆದುಕೊಂಡಿತ್ತು.

ಇನ್ನೊಂದು ಸುದ್ದಿ 7

ನಾಡಹಬ್ಬದ ಸಂಭ್ರಮಕ್ಕೆ ನಾಡು ಸಜ್ಜು

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಐತಿಹಾಸಿಕ ಜಂಬೂಸವಾರಿ ಮೆರವಣಿಗೆಯು ಸೇರಿದಂತೆ, ನಾಡಹಬ್ಬ ದಸರಾವನ್ನು ಸಂಭ್ರಮದಿಂದ ಆಚರಿಸಲು ನಾಡು ಸಜ್ಜಾಗಿದೆ. ಕೋವಿಡ್‌ನಿಂದಾಗಿ ಎರಡು ವರ್ಷ ಕಳೆಗುಂದಿದ್ದ ಆಚರಣೆಗೆ ಈ ಬಾರಿ ಅದ್ದೂರಿತನ ಮೇಳೈಸಿದೆ.

ಸಾಂಸ್ಕೃತಿಕ ನಗರ ಮೈಸೂರು ಅಲ್ಲದೆ, ಕೊಡಗು ಜಿಲ್ಲೆಯ ಮಡಿಕೇರಿ, ಕರಾವಳಿಯ ಮಂಗಳೂರು ಹಾಗೂ ಧಾರ್ಮಿಕ ಯಾತ್ರಾಸ್ಥಳ ಶೃಂಗೇರಿಯಲ್ಲೂ ಹಬ್ಬದ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ಜನರು ಸಜ್ಜಾಗಿದ್ದಾರೆ. ನಗರಗಳು ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿವೆ.

ಬುಧವಾರ ನಡೆಯುವ ದಸರಾ ಶೋಭಾಯಾತ್ರೆಗೆ ಮಂಗಳೂರು ನಗರ, ದಶಮಂಟಪಗಳ ಶೋಭಾಯಾತ್ರೆಗೆ ಮಡಿಕೇರಿ, ವಿಜಯದಶಮಿ ಆಚರಣೆಗೆ ಶೃಂಗೇರಿ ಸಜ್ಜಾಗಿವೆ. ವಿವಿಧ ಜಾನಪದ ಕಲಾತಂಡಗಳು ಉತ್ಸವದ ಮೆರುಗು ಹೆಚ್ಚಿಸಲಿವೆ.

ಸಾಂಸ್ಕೃತಿಕ ನಗರ ಮೈಸೂರಿನಲ್ಲಿ ದಸರಾ ಉತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಗೆಯು ಅ.5ರಂದು ನಡೆಯಲಿದೆ. 750 ಕೆ.ಜಿ ತೂಕದ ಚಿನ್ನದ ಅಂಬಾರಿಯಲ್ಲಿ, ಅಧಿದೇವತೆ ಚಾಮುಂಡೇಶ್ವರಿ ವಿಗ್ರಹಕ್ಕೆ ನಮಿಸಲು, ಮೆರವಣಿಗೆ ವೈಭವ ಕಣ್ತುಂಬಿಕೊಳ್ಳಲು ಜನರು ಕಾತರರಾಗಿದ್ದಾರೆ. ಈ ಬಾರಿ ದೀಪಾಲಂಕಾರದ ನಡುವೆ ಮೆರವಣಿಗೆ ಸಾಗುವುದು ವಿಶೇಷ.

ಅರಮನೆಯ ಬಲರಾಮ ದ್ವಾರದಲ್ಲಿ ಮಧ್ಯಾಹ್ನ 2.36ರಿಂದ 2.50ರೊಳಗೆ ನಂದಿಧ್ವಜ ಪೂಜೆ ನಡೆಯಲಿದೆ. ಸಂಜೆ 5.07ರಿಂದ 5.18ರೊಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಂಬೂಸವಾರಿ ಉದ್ಘಾಟಿಸುವರು.

4ನೇ ಪುಟ ನೋಡಿ

ಹಾಡುತ್ತಿದ್ದಾಗಲೇ ಒಡಿಶಾ ಗಾಯಕ ಸಾವು

ಭುವನೇಶ್ವರ (ಪಿಟಿಐ): ಒಡಿಶಾದ ಗಾಯಕ ಮುರಳಿ ಮೊಹಾಪಾತ್ರ ಅವರು ಕೊರಾಪುಟ್ ಜಿಲ್ಲೆಯಲ್ಲಿ ದುರ್ಗಾ ಪೂಜಾ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಯಲ್ಲಿ ಹಾಡುತ್ತಿರುವಾಗಲೇ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಅನಾರೋಗ್ಯಪೀಡಿತರಾಗಿದ್ದ ಮೊಹಾಪಾತ್ರ ಅವರು ಭಾನುವಾರ ರಾತ್ರಿ ವೇದಿಕೆಯಲ್ಲಿ ಕುರ್ಚಿಯ ಮೇಲೆ ಕುಳಿತು ಹಾಡುತ್ತಿರುವಾಗಲೇ ಕುಸಿದು ಬಿದ್ದು, ಮೃತಪಟ್ಟರು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಬೆಂಗಳೂರು ಈಗ ಕಸದ ನಗರ: ಪೈ ಬೇಸರ

ಬೆಂಗಳೂರು: ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ 'ಸ್ವಚ್ಛ ಸರ್ವೇಕ್ಷಣಾ' ಶ್ರೇಯಾಂಕದಲ್ಲಿ ಬೆಂಗಳೂರಿಗೆ 45 ನಗರಗಳ ಪಟ್ಟಿಯಲ್ಲಿ 43ನೇ ಸ್ಥಾನ ಸಿಕ್ಕಿರುವುದಕ್ಕೆ ಇನ್ಫೊಸಿಸ್‌ನ ಮಾಜಿ ಸಿಎಫ್‌ಒ ಮೋಹನ್‌ದಾಸ್ ಪೈ ಬೇಸರ ವ್ಯಕ್ತಪಡಿಸಿದ್ದಾರೆ.

'ಎಂತಹ ನಾಚಿಕೆಗೇಡು? ಭಾರತದ ಏಕೈಕ ಜಾಗತಿಕ ನಗರ, ಶ್ರೀಮಂತ ನಗರ ಬೆಂಗಳೂರು ಕಸದ ನಗರವಾಯಿತು. ನಾಚಿಕೆಯಾಗುತ್ತಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ. ಕಟ್ಟುನಿಟ್ಟಾದ, ತುರ್ತು ಸುಧಾರಣಾ ಕ್ರಮಗಳಿಗೆ ಆಗ್ರಹಿಸಿರುವ ಪೈ, ತಮ್ಮ ಟ್ವೀಟ್ ಅನ್ನು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಲ್. ಸಂತೋಷ್, ಕಿರಣ್ ಷಾ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಯಡಿಯೂರು ವಾರ್ಡ್‌ನಲ್ಲಿ ನಕ್ಷೆ ಉಲ್ಲಂಘನೆ, ನಕ್ಷೆ ಮಂಜೂರಾತಿ ಪಡೆಯದ ಕಟ್ಟಡಗಳು

ಅಕ್ರಮ ಕಟ್ಟಡಗಳ ತೆರವಿಗೆ ಮೀನಮೇಷ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ



ಬೆಂಗಳೂರು: ಪಾಲಿಕೆಯ ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿ ನಿರ್ಮಾಣ ಆಗಿರುವ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳಲು ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ. ಲೋಕಾಯುಕ್ತರು ವಿವರ ಕೇಳಿದ ಬಳಿಕ ಅಂದಾಜು ವೆಚ್ಚ ಸಿದ್ಧಪಡಿಸಿರುವ ಅಧಿಕಾರಿಗಳು, ಟೆಂಡರ್ ಕರೆಯಲು ಮೂರು ತಿಂಗಳಿಂದ ದಿನ ದೂಡುತ್ತಿದ್ದಾರೆ ಎಂಬ ಆರೋಪ ವ್ಯಕ್ತವಾಗಿದೆ.

ಜಯನಗರ ಆರನೇ ಬ್ಲಾಕ್‌ನ 23ನೇ ಅಡ್ಡ ರಸ್ತೆ, 27ನೇ ಅಡ್ಡರಸ್ತೆ, ಶಾಸ್ತ್ರಿನಗರ 4ನೇ ಮುಖ್ಯರಸ್ತೆ, ಎಸ್. ಕರಿಯಪ್ಪ ರಸ್ತೆ, ಟಾಟಾ ಸಿಲ್ಕ್ ಫಾರ್ಮ್‌ನ 5ನೇ 'ಬಿ' ಮುಖ್ಯ ರಸ್ತೆಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿದೆ' ಎಂದು ವಿ.ಶಶಿಕುಮಾರ್ ಎಂಬುವರು ಪಾಲಿಕೆ ಅಧಿಕಾರಿಗಳಿಗೆ ಕಳೆದ ಎರಡು ವರ್ಷಗಳಿಂದ ದೂರು ನೀಡುತ್ತಲೇ ಇದ್ದಾರೆ.

ಈ ಐದು ಕಟ್ಟಡಗಳ ಪೈಕಿ ಎರಡು ಕಟ್ಟಡಗಳಲ್ಲಿ ಮಂಜೂರಾತಿ ಪಡೆದಿರುವ ನಕ್ಷೆ ಉಲ್ಲಂಘನೆ ಆಗಿದ್ದರೆ, ಉಳಿದ ಮೂರು ಕಟ್ಟಡಗಳಿಗೆ ನಕ್ಷೆ ಮಂಜೂರಾತಿಯನ್ನೇ ಪಡೆದಿಲ್ಲ. 'ಸಹಾಯಕ ಎಂಜಿನಿಯರ್ ಆಗಿದ್ದ ಯತೀಶ್ ಅವರು ಈಗ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದು, ಇವರ ವ್ಯಾಪ್ತಿಯಲ್ಲೇ ಈ ಅಕ್ರಮ ಕಟ್ಟಡಗಳು ನಿರ್ಮಾಣವಾಗಿವೆ. ಆದರೂ ಕ್ರಮ ಕೈಗೊಳ್ಳದೆ ಅವರು ಮೌನ ವಹಿಸಿದ್ದಾರೆ' ಎಂದು ಶಶಿಕುಮಾರ್ ಪಾಲಿಕೆಯ ಮುಖ್ಯ ಆಯುಕ್ತರಿಗೂ ದೂರು ಸಲ್ಲಿಸಿದ್ದರು. ಆದರೂ, ಕ್ರಮ ಕೈಗೊಳ್ಳದಿದ್ದರಿಂದ ಅವರು ಲೋಕಾಯುಕ್ತದಲ್ಲೂ ದೂರು ದಾಖಲಿಸಿದ್ದಾರೆ.

'ಲೋಕಾಯುಕ್ತದಿಂದ ವಿವರಣೆ ಕೇಳಿದ ಬಳಿಕ ಎಚ್ಚೆತ್ತುಕೊಂಡಿದ್ದ ಅಧಿಕಾರಿಗಳು, ಅಕ್ರಮ ಕಟ್ಟಡಗಳ ತೆರವಿಗೆ ಬಿಬಿಎಂಪಿ ಕಾಯ್ದೆ 356ರ ಅಡಿಯಲ್ಲಿ ಕ್ರಮಕ್ಕೆ ಮುಂದಾಗಿದ್ದರು. ಈ ಕಟ್ಟಡಗಳ ತೆರವಿಗೆ ಆಗಲಿರುವ ವೆಚ್ಚ ಎಷ್ಟು ಎಂದು ಅಂದಾಜು ಸಿದ್ಧಪಡಿಸಿದ್ದಾರೆ. ಆದರೆ, ಟೆಂಡರ್ ಕರೆದು ಕಟ್ಟಡಗಳ ತೆರವು ಮಾಡಬೇಕಿದೆ. ಈ ಕೆಲಸಕ್ಕೆ ಈಗ ವಿಳಂಬ ನೀತಿ ಅನುಸರಿಸಲಾಗುತ್ತಿದೆ. ಈ ರೀತಿ ವಿಳಂಬ ಆಗುತ್ತಿರುವುದು ಅಕ್ರಮ ಕಟ್ಟಡಗಳ ಮಾಲೀಕರಿಗೆ ಅನುಕೂಲ ಮಾಡಿಕೊಟ್ಟಿದೆ. ನ್ಯಾಯಾಲಯದ ಮೆಟ್ಟಿಲೇರಿ ತಡೆಯಾಜ್ಞೆ ತರುತ್ತಿದ್ದಾರೆ. ಐದು ಕಟ್ಟಡಗಳಲ್ಲಿ ಈಗಾಗಲೇ ಮೂರು ಕಟ್ಟಡಗಳ ಮಾಲೀಕರು ತಡೆಯಾಜ್ಞೆ ತಂದಿದ್ದಾರೆ' ಎಂದು ಶಶಿಕುಮಾರ್ ಹೇಳಿದರು.

'ನ್ಯಾಯಾಲಯದಲ್ಲಿ ತಡೆಯಾಜ್ಞೆ ಸಿಗದಂತೆ ನೋಡಿಕೊಳ್ಳಬೇಕಾದ ಅಧಿಕಾರಿಗಳೇ ವಿಳಂಬ ಮಾಡುವ ಮೂಲಕ ಪರೋಕ್ಷವಾಗಿ ಅಕ್ರಮ ಕಟ್ಟಡಗಳ ಮಾಲೀಕರಿಗೆ ನೆರವಾಗುತ್ತಿದ್ದಾರೆ' ಎಂದು ಅವರು ದೂರುತ್ತಾರೆ.

ಇದೇ ರೀತಿ ವಿಳಂಬ ಮಾಡಿದರೆ ಉಳಿದ ಎರಡು ಕಟ್ಟಡಗಳಿಗೂ ತಡೆಯಾಜ್ಞೆ ಸಿಗಲಿದೆ. ತಡೆಯಾಜ್ಞೆ ತೆರವುಗೊಳಿಸಲು ಬಿಬಿಎಂಪಿ ಕಾನೂನು ಕೋಶ ಮುಂದಾಗಬೇಕು. ಆ ಕೆಲಸವೂ ಆಗುತ್ತಿಲ್ಲ. ತಡೆಯಾಜ್ಞೆ ತೆರವಿಗೆ ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದರೆ ಮಾಹಿತಿಯೇ ಇಲ್ಲ ಎಂಬ ಉತ್ತರವನ್ನು ಕಾನೂನು ಕೋಶ ನೀಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಅಕ್ರಮ ಕಟ್ಟಡಗಳ ವಿರುದ್ಧ ಕ್ರಮಕ್ಕೆ ಬಿಬಿಎಂಪಿ ಕಾಯ್ದೆ 356ರ ಅಡಿಯಲ್ಲಿ ಅನುಮತಿ ದೊರೆತಿದೆ. ಅಂದಾಜು ಸಿದ್ಧವಾಗಿದ್ದು, ಟೆಂಡರ್ ಪ್ರಕ್ರಿಯೆ ನಡೆಸಬೇಕಿದೆ. ಆದಷ್ಟು ಬೇಗ ಈ ಕೆಲಸ ಮಾಡಲಾಗುವುದು' ಎಂದು ಬಿಬಿಎಂಪಿ ದಕ್ಷಿಣ ವಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

ಪ್ರಭಾವಿ ಮುಖಂಡನಿಂದ ಬೆದರಿಕೆ

'ಅಕ್ರಮ ಕಟ್ಟಡಗಳ ವಿರುದ್ಧ ದೂರು ನೀಡಿರುವ ನನಗೆ ಯಡಿಯೂರು ವಾರ್ಡ್‌ನ ಬಿಜೆಪಿಯ ಪ್ರಭಾವಿ ಮುಖಂಡರೊಬ್ಬರು ಬೆದರಿಕೆ ಹಾಕುತ್ತಿದ್ದಾರೆ' ಎಂದು ಶಶಿಕುಮಾರ್ ಪೊಲೀಸರಿಗೆ ದೂರು ನೀಡಿದ್ದಾರೆ.

'ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆಗಳನ್ನು ಸಂಗ್ರಹಿಸಿ ಅಕ್ರಮಗಳನ್ನು ಬಯಲಿಗೆಳೆಯುವ ವ್ಯಕ್ತಿಯಂತೆ ಮುಖವಾಡ ಧರಿಸಿರುವ ಅವರು, ಇಲ್ಲಿ ಅಕ್ರಮ ಕಟ್ಟಡಗಳ ಮಾಲೀಕರ ಪರವಾಗಿ ನಿಂತಿದ್ದಾರೆ. ಸರ್ಕಾರಿ ಕಚೇರಿಯಲ್ಲೇ ನನಗೆ ಜೀವ ಬೆದರಿಕೆ ಹಾಕಿದರು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಎಫ್‌ಐಆರ್ ದಾಖಲಿಸುತ್ತಿಲ್ಲ' ಎಂದು ಶಶಿಕುಮಾರ್ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಮುಖ್ಯಾಂಶಗಳು

- ಲೋಕಾಯುಕ್ತರು ವಿವರ ಕೇಳಿದ ಬಳಿಕ ಅಂದಾಜು ವೆಚ್ಚ ಸಿದ್ಧಪಡಿಸಿರುವ ಅಧಿಕಾರಿಗಳು
- ಟೆಂಡರ್ ಕರೆಯಲು 3 ತಿಂಗಳಿಂದ ಹಿಂದೇಟು



ಉಪ್ಪಾರಪೇಟೆ ಠಾಣೆಯಲ್ಲಿ ಆಯುಧ ಪೂಜೆ ನಡೆಸಲು ಸಿದ್ಧರಾಗಿರುವ ಪೊಲೀಸರು, ಪೂಜೆಯ ಮುನ್ನಾದಿನವಾದ ಸೋಮವಾರ ಬಂದೂಕುಗಳನ್ನು ಸ್ವಚ್ಛಗೊಳಿಸಿದರು – ಪ್ರಜಾವಾಣಿ ಚಿತ್ರ


ಓದುಗರು ಕಂಡಂಥ ರಸ್ತೆ ಗುಂಡಿ



'ನಿತ್ಯ ನರಕಯಾತನೆ'

ಬಿಬಿಎಂಪಿ ಬಸವನಪುರ ವಾರ್ಡ್ ವ್ಯಾಪ್ತಿಗೆ ಬರುವ ಮೇಡಹಳ್ಳಿ ಬಿಬಿಎಂಪಿ ಸಹಾಯ ಕೇಂದ್ರ ಎದುರಿನ ರಸ್ತೆ ಗುಂಡಿಮಯವಾಗಿದೆ. ವಾಹನ ಸವಾರರಿಗೆ ಪ್ರತಿನಿತ್ಯ ನರಕಯಾತನೆ. ಇನ್ನಷ್ಟು ಅಪಘಾತ ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು.

ಕಿರಣ್ ಕುಮಾರ್ ಜೆ.
ಮೇಡಹಳ್ಳಿ (ಕೆ. ಆರ್. ಪುರ), ವಾಹನ ಸವಾರ



'ದೂಳಿನ ಮಜ್ಜನ'

ಬಿ.ಜಿ.ಎಸ್. ಆಸ್ಪತ್ರೆಯ (ಕೆಂಗೇರಿ-ಉತ್ತರಹಳ್ಳಿ ರಸ್ತೆ) ಬಳಿ ಇರುವ ಸಪ್ತಗಿರಿ ಕೌಂಟಿ ಬಡಾವಣೆಯ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ವಾಹನ ಸವಾರರಿಗೆ ಅನಾನುಕೂಲವಾಗಿದ್ದು, ಪ್ರತಿನಿತ್ಯ ದೂಳಿನ ಮಜ್ಜನ-ವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ, ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ರಸ್ತೆಗಳ ದುರಸ್ತಿಯಾಗಿಲ್ಲ. ಕೂಡಲೇ ರಸ್ತೆ ಸರಿಪಡಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಸೋಮಶೇಖರ ಬಾಬು, ಸ್ಥಳೀಯ ನಿವಾಸಿ

'ಯಲಹಂಕದಲ್ಲಿನ ಗೋಳು'

ಯಲಹಂಕ ವಿಧಾನಸಭಾ ಕ್ಷೇತ್ರದ ಕೆಂಪೇಗೌಡನಗರದ ವಾರ್ಡ್ ಸಂಖ್ಯೆ 1ರ ಮಿನಿ ವಿಧಾನಸೌಧದ ರಸ್ತೆಯ ಪರಿಸ್ಥಿತಿ ತೀವ್ರ ಹದಗೆಟ್ಟದೆ. ವಾಹನ ಸಂಚಾರ ಮತ್ತು ಪಾದಚಾರಿಗಳ ಓಡಾಟಕ್ಕೆ ತೀವ್ರ ಅನಾನುಕೂಲವಾಗಿದೆ. ದಯವಿಟ್ಟು ಸಂಬಂಧಪಟ್ಟವರು ಇದರ ಬಗ್ಗೆ ಗಮನಹರಿಸಿ ಡಾಂಬರೀಕರಣ ಮಾಡಿಸಬೇಕು. ವೃದ್ಧರು ಮತ್ತು ಮಕ್ಕಳನ್ನು ದ್ವಿಚಕ್ರ ವಾಹನಗಳಲ್ಲಿ ಕರೆದುಕೊಂಡು ಸಂಚರಿಸುವುದು ಬಹಳ ಕಷ್ಟವಾಗಿದೆ.

ರಾಘವೇಂದ್ರ, ಸ್ಥಳೀಯ ನಿವಾಸಿ



ನೀವೂ ಕಂಡಿರಾ ರಸ್ತೆ ಗುಂಡಿ...



ಬಿಬಿಎಂಪಿ ನಗರದ ರಸ್ತೆಗಳನ್ನು ಗುಂಡಿಮುಕ್ತವನ್ನಾಗಿಸಲು ಕಾರ್ಯಪಡೆ ರಚಿಸಿದೆ. ಆದರೆ, ಹಲವು ತಿಂಗಳಿಂದ ಸಾಕಷ್ಟು ರಸ್ತೆಗಳಲ್ಲಿ ಗುಂಡಿ ಉಳಿದೇ ಇರುತ್ತದೆ. ಇಂತಹ ರಸ್ತೆ ಗುಂಡಿಗಳು ನಿಮ್ಮ ಬಡಾವಣೆ ಅಥವಾ ನೀವು ಸಂಚರಿಸುವ ರಸ್ತೆಯಲ್ಲಿ ಕಂಡರೆ ಅದರ ಫೋಟೊ ತೆಗೆದು, ಅದು ಎಲ್ಲಿದೆ, ಯಾವ ಪ್ರದೇಶ ಎಂಬ ಮಾಹಿತಿಯ ಸಹಿತ ಕಳುಹಿಸಿ. 'ಪ್ರಜಾವಾಣಿ' ಅವನ್ನು ಪ್ರಕಟಿಸಿ, ಬಿಬಿಎಂಪಿ ಗಮನ ಸೆಳೆಯಲಿದೆ.

ಪ್ರಜಾವಾಣಿ 96060 38256



'ರಸ್ತೆ ಗುಂಡಿಗಳನ್ನು ಮುಚ್ಚಿ'

ಮಲ್ಲತ್ತಳ್ಳಿಯ ಅಂಬೇಡ್ಕರ್ ಕಾಲೇಜಿನ ರಸ್ತೆಗಳೆಲ್ಲ ಗುಂಡಿಮಯವಾಗಿವೆ. ಪ್ರತಿನಿತ್ಯ ವಾಹನ ಸವಾರರು ಇದರಿಂದ ಸಮಸ್ಯೆ ಅನುಭವಿಸುತ್ತಿದ್ದಾರೆ. ಮಳೆಗಾಲದಲ್ಲಿ ವಾಹನ ಸವಾರರು ಈ ರಸ್ತೆಯಲ್ಲಿ ಸಂಚರಿಸುವುದು ಕಷ್ಟ. ಮಳೆಗಾಲದಲ್ಲಿ ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗುಂಡಿಗಳನ್ನು ಮುಚ್ಚಬೇಕು.

ಶುಭಾ.ಎಚ್.ಎಸ್.
ಸ್ಥಳೀಯ ನಿವಾಸಿ

'ಹಬ್ಬದ ಬಳಿಕ ರಾಜಕಾಲುವೆ ಒತ್ತುವರಿ ತೆರವು ಮತ್ತೆ ಆರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಹಬ್ಬ ಮುಗಿದ ಬಳಿಕ ಮತ್ತೆ ಆರಂಭವಾಗಲಿದೆ. ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಗರದ ಪೂರ್ವ ಭಾಗದಲ್ಲಿ ತೆರವು ಕಾರ್ಯಾಚರಣೆ ಮುಂದುವರಿಸುತ್ತೇವೆ. ಒತ್ತುವರಿ ಮಾಡಿದವರು ಎಷ್ಟೇ ದೊಡ್ಡವರಿದ್ದರೂ ತೆರವುಗೊಳಿಸುವುದು ಖಚಿತ' ಎಂದರು.

'ಮಳೆ ಬಂದಾಗ ನಗರದ ಜನರಿಗೆ ಬಹಳ ತೊಂದರೆಯಾಗಿತ್ತು. ಈ ಬಗ್ಗೆ ಬಿಬಿಎಂಪಿ, ಕಂದಾಯ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ ಮಳೆ ಬಂದಾಗ ಇಂಥ ಸಮಸ್ಯೆ ಆಗಲೇಬಾರದೆಂದು ಸೂಚನೆ ನೀಡುತ್ತೇನೆ. ಸರ್ವೇಯರ್‌ಗಳು ಮತ್ತು ಎಂಜಿನಿಯರ್‌ಗಳು ಒಟ್ಟಾಗಿ ಕೆಲಸ ಮಾಡಬೇಕು. ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಲು ತ್ವರಿತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡುತ್ತೇನೆ' ಎಂದರು.

'ಈಗಾಗಲೇ ಒಂದು ಸುತ್ತಿನ ತೆರವು ಕಾರ್ಯಾಚರಣೆ ನಡೆದಿದೆ. ಈಗ ಆಯುಧ ಪೂಜೆ ಇರುವುದರಿಂದ ಕಾರ್ಮಿಕರು ಸೇರಿ ತೆರವು ಕಾರ್ಯಾಚರಣೆಯಲ್ಲಿ ಭಾಗವಹಿಸುವವರು ಊರಿಗೆ ಹೋಗಿದ್ದಾರೆ. ಹೀಗಾಗಿ, ಹಬ್ಬ ಮುಗಿದ ಬಳಿಕ ಮತ್ತೊಂದು ಸುತ್ತಿನ ಕಾರ್ಯಾಚರಣೆ ನಡೆಯಲಿದೆ' ಎಂದರು.

ಟಿ.ಎನ್.ಕೃಷ್ಣಮೂರ್ತಿ ವರ್ಗಾವಣೆ

ಬೆಂಗಳೂರು: ಕೆಎಎಸ್ ಅಧಿಕಾರಿ ಟಿ.ಎನ್.ಕೃಷ್ಣಮೂರ್ತಿ ಅವರನ್ನು ಬೆಂಗಳೂರು ನಗರ ಜಿಲ್ಲೆ ಹೆಚ್ಚುವರಿ ಜಿಲ್ಲಾಧಿಕಾರಿ ಮತ್ತು ಹೆಚ್ಚುವರಿ ದಂಡಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಗೋಡೆ ಕುಸಿತ; ಮೂವರ ಸಾವು

ಪ್ರಜಾವಾಣಿ ವಾರ್ತೆ

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಕುರ್ಡಿ ಗ್ರಾಮದಲ್ಲಿ ಸೋಮವಾರ ಮನೆ ಗೋಡೆ ಕುಸಿದು ದಂಪತಿ, ಮೂರು ವರ್ಷದ ಮಗು ಮೃತಪಟ್ಟಿದ್ದಾರೆ.

ಪರಮೇಶ (45), ಜಯಮ್ಮ (40) ದಂಪತಿ ಮತ್ತು ಪರಮೇಶ ಅವರ ತಮ್ಮನ ಪುತ್ರ ಭರತ್ (3) ಮೃತರು. ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಗೋಡೆ ಕುಸಿದಿದೆ' ಎಂದು ಮಾನ್ವಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಗ್ರಾಮಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದ ಶಾಸಕ ಬಸನಗೌಡ ದದ್ದಲ ಅವರು ಮೃತರ ಕುಟುಂಬಕ್ಕೆ ತಲಾ ₹ 5 ಲಕ್ಷ ಪರಿಹಾರ ಮತ್ತು ಮನೆ ನಿರ್ಮಿಸಿಕೊಡುವ ಭರವಸೆ ನೀಡಿದರು.

ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್ ಆರೋಪ • 5 ಗಂಟೆ ಬಿರುಸಿನ ನಡಿಗೆ • ರೈತರು, ಕಾರ್ಮಿಕರ ಭೇಟಿ

‘ಕರ್ನಾಟಕದಲ್ಲಿದೆ ಕಡು ಭ್ರಷ್ಟ ಸರ್ಕಾರ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಇಡೀ ದೇಶದಲ್ಲಿಯೇ ಅತೀಹೆಚ್ಚು ಭ್ರಷ್ಟ ಸರ್ಕಾರ ಕರ್ನಾಟಕದಲ್ಲಿದೆ, ಲಂಚ ಮಿತಿ ಮೀರಿದ್ದು ಜನರ ಸಮಸ್ಯೆಗಳಿಗೆ ಪರಿಹಾರ ಇಲ್ಲವಾಗಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಸೋಮವಾರ ಪಾಂಡವಪುರ ಬಸ್ ನಿಲ್ದಾಣ ವೃತ್ತದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ಜನರು ಪ್ರತಿ ಕೆಲಸಕ್ಕೂ ಲಂಚ ನೀಡಬೇಕಾಗಿದೆ, 40 ಪರ್ಸೆಂಟ್ ಲಂಚದ ಸರ್ಕಾರ ಎಂದೇ ಪ್ರಸಿದ್ಧಿ ಪಡೆದಿದೆ. ಕರ್ನಾಟಕದಲ್ಲಿ ನಮ್ಮ ಪಾದಯಾತ್ರೆಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಜನರು ತಾವು ಅನುಭವಿಸುತ್ತಿರುವ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಹೋರಾಡುವುದೇ ನಮ್ಮ ಯಾತ್ರೆಯ ಉದ್ದೇಶವಾಗಿದೆ’ ಎಂದರು.

‘ರೈತ, ಕಾರ್ಮಿಕ, ಸಣ್ಣ ಪುಟ್ಟ ಉದ್ಯಮಿಗಳಿಂದಲೂ ಲಂಚ ಪಡೆಯಲಾಗುತ್ತಿದೆ. ಗುತ್ತಿಗೆದಾರರು ಈ ಬಗ್ಗೆ ಬಹಿರಂಗವಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದರು.

5 ಗಂಟೆ ನಡಿಗೆ: ರಾಹುಲ್ ಗಾಂಧಿ ಮೈಸೂರು ತಾಲ್ಲೂಕಿನ ಕಳಸ್ತವಾಡಿ ಗ್ರಾಮದ ಮೂಲಕ ಜಿಲ್ಲೆ ಪ್ರವೇಶಿಸಿದರು. ಅದಕ್ಕೂ ಮೊದಲು ಮೈಸೂರು ನಗರದ ಹಾರ್ಡಿಂಗ್ ವೃತ್ತದಿಂದ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ ಸರ್ಕಲ್‌ವರೆಗೆ 3 ಗಂಟೆ ಹೆಜ್ಜೆ ಹಾಕಿದರು. ನಂತರ ಅವರು ಮೈಸೂರಿಗೆ ವಾಪಸು ತೆರಳಿ ಚಾಮುಂಡಿ ಬೆಟ್ಟದಲ್ಲಿ ದೇವರ ದರ್ಶನ ಪಡೆದರು.

ಮಂಡ್ಯ ಜಿಲ್ಲೆಯಲ್ಲಿ ನಿಗದಿಯಂತೆ ಬೆಳಿಗ್ಗೆ 11 ಗಂಟೆಗೆ ಶ್ರೀರಂಗಪಟ್ಟಣದ ಪರಿವರ್ತನಾ ಶಾಲೆಯಲ್ಲಿ ಮಕ್ಕಳು, ಯುವ ರೈತರೊಂದಿಗೆ ಸಂವಾದ ನಡೆಯಬೇಕಾಗಿತ್ತು. ರಾಹುಲ್ ಗಾಂಧಿ ಮೈಸೂರಿಗೆ ವಾಪಸ್ ತೆರಳಿದ ಕಾರಣ ಸಂವಾದ ರದ್ದಾಯಿತು. ಮಧ್ಯಾಹ್ನ 2 ಗಂಟೆಗೆ ಶ್ರೀರಂಗಪಟ್ಟಣದ ಬಸ್ ನಿಲ್ದಾಣ ವೃತ್ತದಿಂದ ಮತ್ತೆ ಪಾದಯಾತ್ರೆ ಆರಂಭವಾಯಿತು.

ಪಾದಯಾತ್ರೆಯಲ್ಲಿ ರಾಹುಲ್ ಗಾಂಧಿ ಜೊತೆಗೆ ಯುವಜನರೇ ಹೆಚ್ಚಿದ್ದರು. ಹೀಗಾಗಿ ಅವರು ಬಿರುಸಿನಿಂದ ಹೆಜ್ಜೆ ಹಾಕಿದರು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇರಲಿಲ್ಲ. ರಾಹುಲ್ ಗಾಂಧಿಯನ್ನು ಹಿಂಬಾಲಿಸುತ್ತಿದ್ದ ಹಲವರು ಓಡೋಡಿ ಬರುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು. 13 ಕಿ.ಮೀ ಹಾದಿಯನ್ನು ಕೇವಲ 2 ಗಂಟೆಯಲ್ಲಿ ಕ್ರಮಿಸಿದರು. ನಡುವೆ ಪಾಂಡವಪುರ ರೈಲು ನಿಲ್ದಾಣದ ಬಳಿಯ ಖಾಸಗಿ ಸಮುದಾಯ ಭವನದಲ್ಲಿ 10 ನಿಮಿಷ ಮಾತ್ರ ವಿಶ್ರಾಂತಿ ಪಡೆದರು, ಒಟ್ಟಾರೆ ಸೋಮವಾರ 5 ಗಂಟೆ ನಡೆದರು.

ನಡಿಗೆಯುದ್ದಕ್ಕೂ ರೈತರು, ಕಾರ್ಮಿಕರು, ವಿದ್ಯಾರ್ಥಿಗಳನ್ನು ಅವರು ಮಾತನಾಡಿಸುತ್ತಿದ್ದರು. ಕಿರಂಗೂರು ವೃತ್ತದ ರಸ್ತೆ ಬದಿಯಲ್ಲಿ ಬುಟ್ಟಿ ಎಣೆಯುತ್ತಿದ್ದ ಕಾರ್ಮಿಕರನ್ನು ಭೇಟಿಯಾಗಿ ಅವರ ಸಮಸ್ಯೆ ಕೇಳಿದರು. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಬಳಿ ಎತ್ತಿನ ಗಾಡಿಯಲ್ಲಿ ಕಬ್ಬು ತುಂಬಿಕೊಂಡು ಬರುತ್ತಿದ್ದ ರೈತರನ್ನು ಮಾತನಾಡಿಸಿದರು.



ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರು ಬಳಿ ರಾಹುಲ್ ಗಾಂಧಿ ಅವರು ಎತ್ತಿನ ಗಾಡಿಯಲ್ಲಿ ಸಾಗಿಸುತ್ತಿದ್ದ ಕಬ್ಬನ್ನು ಪಡೆದು ಸವಿದರು

ಗುಡಿ, ಚರ್ಚ್, ಮಸೀದಿಗೆ ಭೇಟಿ

ಮೈಸೂರು: ಸೋಮವಾರ ಮಂಡ್ಯಕ್ಕೆ ತೆರಳುವ ಮುನ್ನ ನಗರದ ಪ್ರಮುಖ ಗುಡಿ, ಚರ್ಚ್ ಮಸೀದಿಗೆ ರಾಹುಲ್ ಗಾಂಧಿ ಭೇಟಿ ನೀಡಿದರು. ಬೆಳಿಗ್ಗೆ 6.20ರ ಸುಮಾರಿಗೆ ಹಾರ್ಡಿಂಜ್ ವೃತ್ತದಿಂದ ಪ್ರಾರಂಭಗೊಂಡಿತು.

ಜಯಚಾಮರಾಜೇಂದ್ರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದ ಮುಖಂಡರು, ಅಶೋಕ ರಸ್ತೆಯಲ್ಲಿ ಹೆಜ್ಜೆ ಹಾಕಿದರು. ಮಾರ್ಗ ಮಧ್ಯದಲ್ಲಿ ಹಾಸಮ್ ಮಸೀದಿಗೆ ತೆರಳಿದರು. ಬಳಿಕ ವಿಶ್ವವಿಖ್ಯಾತ ಸಂತ ಫಿಲೋಮಿನಾ ಚರ್ಚ್‌ಗೆ ಭೇಟಿ ನೀಡಿದ್ದ ರಾಹುಲ್, ಅದರ ವಾಸ್ತುಶಿಲ್ಪಕ್ಕೆ ಮಾರುಹೋದರು. ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಮಣಿಪಾಲ್ ಆಸ್ಪತ್ರೆಯ ಎದುರು ಮುಸ್ಲಿಂ, ಕ್ರೈಸ್ತ ಸಮಾಜದ ಮುಖಂಡರು ಹೂವು ನೀಡಿ ಸ್ವಾಗತಿಸಿದರು.ಸಮಾಜವಾದಿ ಪ.ಮಲ್ಲೇಶ್ ಸೇರಿ ಆರು ಮಂದಿ ನಾಗರಿಕ ಸಮಾಜದ ಸದಸ್ಯರು ರಾಹುಲ್ ಭೇಟಿಯಾದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ಕೃತಿ ನೀಡಿದರು. ಸಾಹಿತಿ ದೇವನೂರ ಮಹದೇವ ಉಪಸ್ಥಿತರಿದ್ದರು.

ಯಾತ್ರೆಗೆ ವಿವಿಧ ಸಂಘಟನೆಗಳ ಬೆಂಬಲ

ದಲಿತ ಸಂಘರ್ಷ ಸಮಿತಿ, ಭೂಮಿ– ವಸತಿ ವಂಚಿತರ ಹೋರಾಟ ಸಮಿತಿ, ಸೌಹಾರ್ದ ಕನ್ನಡಿಗರ ವೇದಿಕೆ ಸೇರಿ ವಿವಿಧ ಪ್ರಗತಿಪರ ಸಂಘಟನೆಗಳು, ಚಿಂತಕರು, ಲೇಖಕರು, ಕಲಾವಿದರು ಭಾರತ್ ಜೋಡೊ ಯಾತ್ರೆಯನ್ನು ಬೆಂಬಲಿಸಿ ರಾಹುಲ್ ಗಾಂಧಿ ಜೊತೆ ಹೆಜ್ಜೆ ಹಾಕಿದರು.

ಪಾಂಡವಪುರಕ್ಕೆ ಯಾತ್ರೆ ಬರುತ್ತಿದ್ದಂತೆ ದಸಂಸ ಮುಖಂಡರು ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಹಿಡಿದು ಸ್ವಾಗತ ಕೋರಿದರು. ಮಹಿಳೆಯರು ಬೆಲ್ಲದ ಆರತಿ ಮಾಡಿ ಆಶೀರ್ವದಿಸಿದರು.

‘ದೇಶವನ್ನು ಜಾತಿ, ಧರ್ಮದ ಅಡಿಯಲ್ಲಿ ಆಳುತ್ತಿರುವ ಈ ಸಂದರ್ಭದಲ್ಲಿ ಜನರ ಹತ್ತಿರ ಬಂದು, ಕಷ್ಟ ಕೇಳುತ್ತಿರುವ ರಾಹುಲ್ ಗಾಂಧಿಯವರ ಭಾರತ ಜೋಡೊ ಯಾತ್ರೆ ಅತ್ಯಂತ ಪ್ರಮುಖ ಎನಿಸುತ್ತದೆ. ಅವರಿಗೆ ಬೆಂಬಲ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ’ ಎಂದು ಲೇಖಕಿ ಬಿ.ಟಿ.ಲಲಿತಾ ನಾಯಕ್ ಹೇಳಿದರು.

ಹಬ್ಬದ ಪ್ರಯುಕ್ತ ಪಾದಯಾತ್ರೆಗೆ ಎರಡು ದಿನ ಬಿಡುವು

ಅ.4ರಂದು ಆಯುಧಪೂಜೆ, ಅ.5ರಂದು ವಿಜಯದಶಮಿ ಅಂಗವಾಗಿ ಭಾರತ್ ಜೋಡೊ ಪಾದಯಾತ್ರೆಗೆ 2 ದಿನ ಬಿಡುವು ಇರಲಿದೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಬಂದಿದ್ದು, ರಾಹುಲ್ ಗಾಂಧಿ ಅವರು ತಾಯಿ ಜೊತೆ ಎಚ್.ಡಿ.ಕೋಟೆ ಸಮೀಪದ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಅ.6ರಂದು ಪಾಂಡವಪುರದಿಂದ ಪಾದಯಾತ್ರೆ ಪುನರಾರಂಭವಾಗಲಿದೆ. ಅ.7ರಂದು ನಾಗಮಂಗಲ ತಾಲ್ಲೂಕು ಆದಿಚುಂಚನಗಿರಿ ತಲುಪಲಿದೆ. ಅಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಆರೆಂಜ್ ಕೌಂಟಿ ರೆಸಾರ್ಟ್‌ನಲ್ಲಿ ಸೋನಿಯಾ ಗಾಂಧಿ ವಾಸ್ತವ್ಯ

ಮೈಸೂರು: ‘ಭಾರತ್ ಜೋಡೊ’ ಯಾತ್ರೆಯಲ್ಲಿ ಭಾಗವಹಿಸಲು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೋಮವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ವಿಶೇಷ ವಿಮಾನದಲ್ಲಿ ಇಲ್ಲಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿದರು.

ವಿಮಾನ ನಿಲ್ದಾಣದಿಂದ ಅವರು ನೇರವಾಗಿ ಕೊಡಗಿನ ಕೂರ್ಗ್ ವೈಲ್ಡರ್‌ನೆಸ್ ರೆಸಾರ್ಟ್‌ಗೆ ತೆರಳಬೇಕಿತ್ತು. ಹವಾಮಾನ ವೈಪರೀತ್ಯದಿಂದ ರಸ್ತೆ ಮಾರ್ಗದಲ್ಲಿ ಕಬಿನಿ ಸಮೀಪದ ಆರೆಂಜ್ ಕೌಂಟಿ ರೆಸಾರ್ಟ್‌ಗೆ ತೆರಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ‘ಯಾತ್ರೆಗೆ ಪಕ್ಷಭೇದ ಮರೆತು ನಿರೀಕ್ಷೆಗೂ ಮೀರಿ ಜನ ಸ್ಪಂದಿಸಿದ್ದಾರೆ. ದಸರಾ ಹಿನ್ನೆಲೆಯಲ್ಲಿ ಎರಡು ದಿನ ಸೋನಿಯಾಗಾಂಧಿ ಅವರು ಇಲ್ಲಿಯೇ ತಂಗಲಿದ್ದು, 6ರಂದು ಯಾತ್ರೆ ಮುಂದುವರಿಯಲಿದೆ’ ಎಂದರು. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಯಾತ್ರೆಯಲ್ಲಿ ಭಾಗವಹಿಸುವರು ಎಂದು ತಿಳಿಸಿದರು.

ವಿಮಾನನಿಲ್ದಾಣದಲ್ಲಿ ಸೋನಿಯಾ ಗಾಂಧಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಸಲೀಂ ಅಹಮ್ಮದ್, ಸಂಸದ ಡಿ.ಕೆ. ಸುರೇಶ್, ಮೇಲ್ಮನೆ ಸದಸ್ಯ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ನಗರ ಘಟಕದ ಅಧ್ಯಕ್ಷ ಆರ್.ಮೂರ್ತಿ ಬರಮಾಡಿಕೊಂಡರು.



ಎಚ್.ಡಿ.ಕೋಟೆ ತಾಲ್ಲೂಕಿನ ಬೀರಂಬಳ್ಳಿ ಗ್ರಾಮದ ಆರೆಂಜ್ ಕೌಂಟಿ ರೆಸಾರ್ಟ್‌ಗೆ ಸೋಮವಾರ ಬಂದ ಸೋನಿಯಾ ಗಾಂಧಿ ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದ್ದಾರೆ

> **ಬಿಜೆಪಿಯವರು ಅವರ ನಾಯಕರ ನಡುವೆ ಜೋಡೋ ಮಾಡಿಕೊಳ್ಳಲಿ. ನಾನು- ಸಿದ್ದರಾಮಯ್ಯ ಒಂದಾಗಿದ್ದೇವೆ.**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಅರ್ಜಿ ಇತ್ಯರ್ಥಕ್ಕೆ ಮುನ್ನವೇ ಬಳ್ಳಾರಿಗೆ ಜನಾರ್ದನ ರೆಡ್ಡಿ

ಬಳ್ಳಾರಿ: ಬಳ್ಳಾರಿಗೆ ತೆರಳಲು ಕನಿಷ್ಠ ಪಕ್ಷ ನಾಲ್ಕು ವಾರ ಅನುಮತಿ ಕೊಡುವಂತೆ ಸಲ್ಲಿಸಿರುವ ಅರ್ಜಿಯ ಸಂಬಂಧ ಸುಪ್ರೀಂ ಕೋರ್ಟ್ ಆದೇಶ ಪ್ರಕಟಿಸುವ ಮುನ್ನವೇ ಗಣಿ ಉದ್ಯಮಿ ಗಾಲಿ ಜನಾರ್ದನರೆಡ್ಡಿ ಸೋಮವಾರ ಇಲ್ಲಿನ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಕಾಣಿಸಿಕೊಂಡರು.

ತಮ್ಮ ಮಗಳು ಮಗುವಿಗೆ ಜನ್ಮನೀಡಿರುವುದರಿಂದ ನಾಲ್ಕು ವಾರ ಬಳ್ಳಾರಿಗೆ ಹೋಗಲು ಅನುಮತಿ ನೀಡಬೇಕು ಎಂದು ರೆಡ್ಡಿ ಸುಪ್ರೀಂ ಕೋರ್ಟ್‌ಗೆ ಅರ್ಜಿಸಲ್ಲಿಸಿದ್ದಾರೆ. ಈ ಕುರಿತ 10ರಂದು ಆದೇಶ ಪ್ರಕಟಿಸಲಾಗುವುದು ಎಂದು ನ್ಯಾಯಪೀಠ ತಿಳಿಸಿದೆ.

ಈ ಮಧ್ಯೆ, ಜನಾರ್ದನರೆಡ್ಡಿ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ತಮ್ಮ ಅಣ್ಣ, ಬಳ್ಳಾರಿ ನಗರದ ಬಿಜೆಪಿ ಶಾಸಕ ಜಿ.ಸೋಮಶೇಖರ ರೆಡ್ಡಿ ಮತ್ತಿತರ ಬೆಂಬಲಿಗರ ಜತೆಗೂಡಿ ದೇವಸ್ಥಾನಕ್ಕೆ ಧಾವಿಸಿದರು.

‘ಬಳ್ಳಾರಿಗೆ ಬರಲು ನಾನು ಕಾಲಾವಕಾಶ ಕೇಳಿಲ್ಲ. ನನ್ನ ಮೇಲೆ ಸಿಬಿಐ ಪ್ರಕರಣ ದಾಖಲಿಸಿ, 12 ವರ್ಷದಿಂದ ವಿಚಾರಣೆ ನಡೆಯದಿರಲು ಬಳ್ಳಾರಿಯಲ್ಲಿ ನಾನಿರುವುದೇ ಸಮಸ್ಯೆ ಎಂದು ಅಧಿಕಾರಿಗಳು ಪದೇ ಪದೇ ಪ್ರಸ್ತಾಪಿಸುತ್ತಿದ್ದಾರೆ. ದಿನನಿತ್ಯ ವಿಚಾರಣೆ ನಡೆಸಬೇಕೆಂದು ಅರ್ಜಿ ಹಾಕಿದ್ದೇನೆ. ಮೂರ್ನಾಲ್ಕು ತಿಂಗಳಲ್ಲಿ ಇತ್ಯರ್ಥವಾಗಲಿ ಎಂಬ ಉದ್ದೇಶ ನನ್ನದು’ ಎಂದು ರೆಡ್ಡಿ ಉತ್ತರಿಸಿದರು.

‘ಪ್ರಕರಣದಲ್ಲಿ ಸೋಲಾಗಬಹುದೆಂಬ ಭಯದಿಂದ ವಿಚಾರಣೆ ತ್ವರಿತಗೊಳಿಸಲು ಹಿಂದೇಟು ಹಾಕುತ್ತಿದ್ದಾರೆ. ನ್ಯಾಯ ವ್ಯವಸ್ಥೆ ಮೇಲೆ ನನಗೆ ನಂಬಿಕೆ ಇದೆ. ನಾನು ಬಳ್ಳಾರಿಯಲ್ಲಿ ಇರುವುದಕ್ಕೆ ಸುಪ್ರೀಂ ಕೋರ್ಟ್ ಅನುಮತಿಸಿದೆ. 14 ತಿಂಗಳಿಂದ ಬಳ್ಳಾರಿಯಲ್ಲೇ ಇದ್ದೇನೆ. ಮಗಳಿಗೆ ಹೆರಿಗೆಯಾಗಿರುವ ಸಂದರ್ಭದಲ್ಲಿ ಸಿಬಿಐ ಅಧಿಕಾರಿಗಳು ತೊಂದರೆ ಮಾಡಬಹುದೆಂದು, ಮುನ್ನೆಚ್ಚರಿಕೆ ಕ್ರಮವಾಗಿ ನಮ್ಮ ವಕೀಲರು ವಾದ ಮಾಡಿ ದ್ದಾರೆ’ ಎಂದು ಜನಾರ್ದನರೆಡ್ಡಿ ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಸಿಎಂ ಮನೆ ಕಾಯುವ ಅಧ್ಯಕ್ಷ ನಾನಲ್ಲ: ಜೋಶಿ

₹20 ಕೋಟಿ ಅನುದಾನದಲ್ಲಿ ಜಿಲ್ಲಾಡಳಿತಕ್ಕೆ ಒಂದು ಪೈಸೆ ಬಂದಿಲ್ಲ. ಸ್ವಾಭಿಮಾನ ಬಿಟ್ಟು ಸಿ.ಎಂ ಮನೆಗೆ ಹೋಗಲ್ಲ

ನವೆಂಬರ್‌ನಲ್ಲಿ ಸಾಹಿತ್ಯ ಸಮ್ಮೇಳನ ಅನುಮಾನ

ಹಾವೇರಿ: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರ ಸರ್ಕಾರ ಮತ್ತು ಕಸಾಪ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ‘ನಿಗದಿತ ದಿನಾಂಕದಂದು ಸಾಹಿತ್ಯ ಸಮ್ಮೇಳನ ನಡೆಸಲು ಸಾಧ್ಯವಿಲ್ಲ. ಈ ಬೆಳವಣಿಗೆಯಿಂದ ನೋವಾಗಿದ್ದು ವಿಷಾದ ವ್ಯಕ್ತಪಡಿಸುವುದಾಗಿ’ ಕಸಾಪ ಅಧ್ಯಕ್ಷ ಮಹೇಶ ಜೋಶಿ ಸೋಮವಾರ ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನವೆಂಬರ್ 11, 12,13ರಂದು ಸಮ್ಮೇಳನ ನಿಗದಿಯಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಅವರು ‘ಪೂರ್ವ ಸಿದ್ಧತೆ ಆಗಿಲ್ಲ, ಸಮ್ಮೇಳನ ಮುಂದಕ್ಕೆ ಹೋಗಬಹುದು’ ಎನ್ನುತ್ತಾರೆ. ನಂತರ ಮುಖ್ಯಮಂತ್ರಿಗಳು ನಿಗದಿಯಂತೆ ಸಮ್ಮೇಳನ ಮಾಡುತ್ತೇವೆ ಎಂದಿದ್ದಾರೆ. ಈ ಗೊಂದಲ ಬೇಸರ ತಂದಿದೆ’ ಎಂದರು.

ಅನಿಶ್ಚಿತತೆ ಕಾಡುತ್ತಿದೆ: ಸಾಹಿತ್ಯ ಸಮ್ಮೇಳನದ ದಿನಾಂಕವನ್ನು ಸಾಹಿತ್ಯ ಪರಿಷತ್ ಅಧ್ಯಕ್ಷರು ಘೋಷಿಸಬೇಕು. ದಿನಾಂಕ ಘೋಷಣೆಗೆ ಸಭೆ ನಡೆಸುವಂತೆ ನಾಲ್ಕು ಬಾರಿ ಮನವಿ ಮಾಡಿದ್ದೆ. ಲಾಂಛನ ಬಿಡುಗಡೆ, 20 ಸಮಿತಿ ರಚಿಸುವಂತೆ ಹೇಳಿದ್ದರೂ ಮಾಡಿಲ್ಲ ಎಂದರು.

ಪತ್ರ ಬರೆದಾಗ ಹಲವು ಸಲ ಅಧೀನ ಕಾರ್ಯದರ್ಶಿ ಉತ್ತರ ಕೊಡುತ್ತಾರೆ. ಮೈಸೂರು ದಸರಾ ಆಚರಣೆಯಲ್ಲಿ ಸಾಹಿತ್ಯ ಪರಿಷತ್ತು ಅಧ್ಯಕ್ಷರನ್ನ ಪಕ್ಕಕ್ಕೆ ತಳ್ಳಿದ್ರು, ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿಯೂ ಅಧ್ಯಕ್ಷರಿಗೆ ಸ್ಥಾನವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಾಡಹಬ್ಬದ ಸಂಭ್ರಮಕ್ಕೆ ನಾಡು ಸಜ್ಜು

ಒಂದನೇ ಪುಟದಿಂದ

43 ಸ್ತಬ್ಧಚಿತ್ರಗಳು, 50 ಜನಪದ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಲಿವೆ. 13 ಆನೆಗಳು ಮೆರುಗು ಹೆಚ್ಚಿಸಲಿವೆ. ‘ಅಭಿಮನ್ಯು’ ಆನೆ ಅಂಬಾರಿ ಹೊರುವ ಸಾಧ್ಯತೆ ಇದ್ದು, ಮಂಗಳವಾರ ಈ ನಿರ್ಧಾರ ಹೊರಬೀಳಲಿದೆ. ಸಂಜೆ ಪಂಜಿನ ಕವಾಯತು ನಡೆಯಲಿದೆ.

ಶೋಭಾ ಯಾತ್ರೆ: ಮಂಗಳೂರಿನಲ್ಲಿ ರಸ್ತೆಗಳು ವಿದ್ಯುದ್ದೀಪಾಲಂಕಾರದಿಂದ ಝಗಮಗಿಸುತ್ತಿದ್ದು, ದೇವಸ್ಥಾನಗಳು ಸುಣ್ಣ ಬಣ್ಣದಿಂದ ರಂಗುಪಡೆದಿವೆ. ಹುಲಿವೇಷಗಳು, ಹುಲಿವೇಷ ಕುಣಿತದ ತಾಸೆ ಪೆಟ್ಟಿನ ಅನುರಣನಕ್ಕೆ ಸಾಕ್ಷಿಯಾಗಲು ನಗರ ಸಜ್ಜಾಗಿದೆ.

5ರಂದು ಶೋಭಾಯಾತ್ರೆ ಸಲುವಾಗಿ ಕುದ್ರೋಳಿ ದೇವಸ್ಥಾನದಿಂದ ಲೇಡಿಹಿಲ್, ನಾರಾಯಣಗುರು ವೃತ್ತ, ಮಹಾತ್ಮ ಗಾಂಧಿ ರಸ್ತೆ, ಕಾರ್ನಾಡ್ ಸದಾಶಿವ ರಾವ್ ರಸ್ತೆಗಳ ಇಕ್ಕೆಲಗಳನ್ನು ಬಣ್ಣ ಬಣ್ಣದ ವಿದ್ಯುದೀಪಗಳಿಂದ ಸಿಂಗರಿಸಲಾಗಿದೆ.

ಇತಿಹಾಸ ಪ್ರಸಿದ್ಧ ಮಂಗಳಾದೇವಿ ದೇವಸ್ಥಾನ, ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಸ್ಥಾನ, ಭಗವತಿ ದೇವಸ್ಥಾನ, ಉರ್ವ ಮಾರಿಗುಡಿ ದೇವಸ್ಥಾನಗ ಳಲ್ಲಿ ಭಕ್ತರ ದಂಡು ಕಂಡುಬರುತ್ತಿದೆ. ಕುದ್ರೋಳಿ ಗೋಕರ್ಣನಾಥೇಶ್ವರ ದೇಗುಲದಲ್ಲಿ ಶಾರದೆ, ಆದಿಶಕ್ತಿ, ಗಣಪತಿ ಹಾಗೂ ನವದುರ್ಗೆಯರ ಆಕರ್ಷಕ ಮೂರ್ತಿಗಳನ್ನು ವೀಕ್ಷಿಸಲು ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ.

ವಿಜಯದಶಮಿಗೆ ಸಜ್ಜಾದ ಶೃಂಗೇರಿ: ಪ್ರಸಿದ್ಧ ಯಾತ್ರಾ ಸ್ಥಳ ಶೃಂಗೇರಿ ಯ ಶಾರದಾಂಬಾ ಕ್ಷೇತ್ರವು ಅಲಂಕೃತಗೊಂಡಿದೆ. ಶಾರದೆಗೆ ಮಂಗಳವಾರ ಸಿಂಹವಾಹನಾಲಂಕಾರ, ಬುಧವಾರ ಗಜಲಕ್ಷ್ಮಿ ಅಲಂಕಾರ ನಡೆಯಲಿದೆ.

ಉಭಯ ಗುರುಗಳಾದ ಭಾರತೀ ತೀರ್ಥ ಸ್ವಾಮೀಜಿ ಮತ್ತು ವಿಧುಶೇಖರ ಭಾರತೀ ಸ್ವಾಮೀಜಿ ಶಾರದಾಂಬೆಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಶಮೀ ಪೂಜೆ, ವಿಜಯೋತ್ಸವ ಸೇರಿ ವಿವಿಧ ವಿಶೇಷ ಧಾರ್ಮಿಕ ಪೂಜೆಗಳು ನಡೆಯಲಿವೆ.

ಮಡಿಕೇರಿ ದಸರೆಗೆ ದಶಮಂಟಪ ಸಿದ್ಧ: ಮಡಿಕೇರಿ ದಸರೆಗೆ ಆಚರಣೆಗೆ ಈ ಬಾರಿ ಸಂಭ್ರಮ ಮೇರೆ ಮೀರಿದೆ. 2018 ಮತ್ತು 2019ರಲ್ಲಿ ಸಂಭವಿಸಿದ್ದ ಮಹಾಮಳೆ, ಭೂಕುಸಿತ, 2020 ಹಾಗೂ 2021ರಲ್ಲಿ ವ್ಯಾಪಿಸಿದ್ದ ಕೋವಿಡ್‌ನಿಂದ ಉತ್ಸವ ಸೊರಗಿತ್ತು.

ಅ.5ರಂದು ರಾತ್ರಿ ದಶಮಂಟಪಗಳ ಶೋಭಾಯಾತ್ರೆ ನಡೆಯಲಿದೆ. ₹ 1.76 ಕೋಟಿ ವೆಚ್ಚದಲ್ಲಿ 10 ದೇವಸ್ಥಾನ ಸಮಿತಿಗಳ ಮಂಟಪಗಳು ಸಿದ್ಧವಾಗುತ್ತಿವೆ. 3 ಲಕ್ಷಕ್ಕೂ ಅಧಿಕ ಮಂದಿ ಭಾಗಿಯಾಗುವ ನಿರೀಕ್ಷೆ ಇದೆ.

ಹೇಳದೇ ಹೆಸರು ಹಾಕಿದರು, ಕರೆಯಲಿಲ್ಲ!

ದಸರಾ ಕವಿಗೋಷ್ಠಿ: ಗೌರವಧನ, ಪ್ರಯಾಣ ಭತ್ಯೆ ನಿರಾಕರಿಸಿದ ಪಿ.ಚಂದ್ರಿಕಾ

ಮೈಸೂರು: ‘ಅನಾರೋಗ್ಯವಿದ್ದರೂ ಕವಿತೆ ಓದಲು ಬಂದಿದ್ದೇನೆ. ಅನುಮತಿ ಇಲ್ಲದೆ ಹೆಸರು ಹಾಕಿದ್ದಾರೆ. ಫೋನ್ ಮಾಡಿಯೂ ಕರೆಯಲಿಲ್ಲ. ಸ್ನೇಹಿತರು ಕರೆ ಮಾಡಿದಾಗಲೇ ಎಂಥ ಅವ್ಯವಸ್ಥೆ ಎಂದು ಆಶ್ಚರ್ಯವಾಯಿತು. ಗೌರವಧನ, ಪ್ರಯಾಣ ಭತ್ಯೆ ಸ್ವೀಕರಿಸುವುದಿಲ್ಲ' ಎಂದು ಕವಯತ್ರಿ ಪಿ.ಚಂದ್ರಿಕಾ ಸೋಮವಾರ ದಸರಾ ಪ್ರಧಾನ ಕವಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ಕವಿತೆ ಓದುವ ಮುನ್ನ ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯವೈಖರಿಯನ್ನು ಸೌಮ್ಯವಾಗಿಯೇ ವಿರೋಧಿಸಿದರು. ‘ಕವಿಗಳನ್ನು ಕೃತಜ್ಞತೆ, ಗೌರವದಿಂದ ನಡೆಸಿಕೊಳ್ಳಬೇಕು’ ಎಂದರು. ಬಳಿಕ ‘ಮಹಮ್ಮದ್ ಪೈಗಂಬರ್’ ಶೀರ್ಷಿಕೆಯ ಕವಿತೆ ಓದಿದರು.

ಉಪ ಸಮಿತಿ ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್, ‘ವ್ಯಾಟ್ಸ್ ಆ್ಯಪ್ ಮೂಲಕ ಆಹ್ವಾನಿಸಿದ್ದೇವೆ. ಕರೆಯ ಸಂಭಾಷಣೆಗಳನ್ನೂ ನೀಡುತ್ತೇವೆ. ತಪ್ಪಿದ್ದರೆ ಕ್ಷಮಿಸಿಬಿಡಿ. ನಾವು ಸಣ್ಣವರು. ನೀವು ದೊಡ್ಡವರು’ ಎಂದು ಸಮಜಾಯಿಷಿ ನೀಡಿದರು.

ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದ ಉಪಸಮಿತಿ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ‘ಕ್ಷಮೆ ಕೇಳಿದ ಮೇಲೂ ವಿಷಯವನ್ನು ಏಕೆ ಮುಂದುವರಿಸುತ್ತಿದ್ದೀರಿ’ ಎಂದು ಪ್ರಶ್ನಿಸಿದರು.

‘ತಪ್ಪು ಮಾಹಿತಿ ಕೊಡಬೇಡಿ. ಯಾರಿಗೆ ಆಹ್ವಾನ ನೀಡಿದ್ದೀರಿ ಎಂದು ತಿಳಿಸಿ. ನಾನು ಪ್ರತಿಭಟನೆ ದಾಖಲಿಸಿದ್ದೇನೆ. ಕವಿತೆ ಓದಿದ್ದೇನೆ. ಮತ್ತಷ್ಟು ಮುಂದುವರಿಸುತ್ತಿರುವವರು ನೀವು’ ಎಂದ ಚಂದ್ರಿಕಾ, ಸನ್ಮಾನವನ್ನೂ ಸ್ವೀಕರಿಸದೇ ವೇದಿಕೆಯಿಂದ ನಿರ್ಗಮಿಸಿದರು.

ನಂತರ ಕವಿತೆ ಓದಿದ ರಘುನಾಥ ಚ.ಹ., ‘ಸಹಕವಿಯ ಸಂಕಟ ನನ್ನದೂ ಆಗಿದೆ. ಕವಿ ಹಾಗೂ ಕಾವ್ಯವನ್ನು ನಡೆಸಿಕೊಳ್ಳುವ ಬಗೆ ಇದಲ್ಲ ಎಂಬುದನ್ನು ಸಂಘಟಕರಿಗೆ ವಿಧೇಯದಿಂದ ಹಾಗೂ ವಿಷಾದದಿಂದ ಹೇಳುತ್ತಿದ್ದೇನೆ’ ಎಂದರು.

ಬ್ಯಾರಿ ಕವಿ ಮೊಹಮ್ಮದ್ ಆಲಿ ಕಮ್ಮರಡಿ ಬ್ಯಾರಿ– ಕನ್ನಡದ ಸಂಬಂಧ ಕುರಿತ ಕವಿತೆ ವಾಚಿಸಿ, ‘ಕವಿಗೋಷ್ಠಿ ಪಟ್ಟಿಯಿಂದ ಮೊದಲು ಬ್ಯಾರಿ ಭಾಷೆಯನ್ನೇ ಕೈಬಿಡಲಾಗಿತ್ತು. ಈಗ ಅವಕಾಶ ನೀಡಿದ್ದು ಸಂತಸ ತಂದಿದೆ’ ಎಂದರು.

ಕವಿಗೋಷ್ಠಿ ಉದ್ಘಾಟಿಸಿದ ಕವಿ ಡಾ.ಚಂದ್ರಶೇಖರ ಕಂಬಾರ, ‘ಭಾರತೀಯರು ಕಾಲಚಕ್ರದಲ್ಲಿ ನಂಬಿಕೆ ಇಟ್ಟಿದ್ದರು. ರಾಮ ಈಗ ಹೋದನೆಂದರೆ ನಂಬುತ್ತಿದ್ದರು. ಬ್ರಿಟಿಷರ ಮೆಕಾಲೆ ಶಿಕ್ಷಣ ಪದ್ಧತಿ ಎಲ್ಲವನ್ನೂ ಬದಲಿಸಿದೆ’ ಎಂದು ವಿಷಾದಿಸಿದರು.ಡಾ.ಎಚ್.ಎಸ್. ಶಿವಪ್ರಕಾಶ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	123.58	7,065	4,915
ಹಾರಂಗಿ	2,859	2,855.37	430	1,650
ಕಬಿನಿ	2,284	2,282.53	1,356	1,000
ಹೇಮಾವತಿ	2,922	2,921.50	2,925	3,125
ಲಿಂಗನಮಕ್ಕಿ	1,819	1,815	1,823	5,419
ಸೂಪಾ (ಮೀ)	564	553.79	1238.04	394.41
ಮಾಣಿ	595	590	732	732
ತುಂಗಭದ್ರಾ	1,633	1632.95	32,024	30,385
ಮಲಪ್ರಭಾ	2079.50	2,079.50	1,794	1,794
ಘಟಪ್ರಭಾ	2,175	2,174.85	2,593	2,593
ಭದ್ರಾ	186	185	1,296	393
ಆಲಮಟ್ಟಿ (ಮೀ)	519.60	519.60	20,451	20,451
ನಾರಾಯಣಪುರ (ಮೀ)	492.25	491.88	30,000	34,850

* ನೆಲಮಟ್ಟದಿಂದ

‘ಬಂದೂಕಿನಿಂದ ನನ್ನ ಆಲೋಚನೆ ಅಂತ್ಯಗೊಳಿಸಲಾಗದು’

ಠಾಣೆ (ಪಿಟಿಐ): ‘ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ನಂತರ ನನಗೂ ಜೀವ ಬೆದರಿಕೆ ಇದೆ’ ಎಂದು ಹೇಳಿರುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ್ ಮೌಜೊ, ‘ನನ್ನ ಆಲೋಚನೆಗಳನ್ನು ಯಾವುದೇ ಬಂದೂಕಿನಿಂದ ಅಂತ್ಯಗೊಳಿಸಲು ಆಗದು’ ಎಂದು ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಗೌರಿ ಲಂಕೇಶ್ ನಿಧನದ ನಂತರ ನಾನೂ ಸಹ ಕೆಲವರ ಹಿಟ್‌ಲಿಸ್ಟ್‌ನಲ್ಲಿದ್ದೇನೆ ಎಂಬುದು ಗೊತ್ತಾಯಿತು. ಆದರೆ, ಲೇಖಕನಾಗಿ ನನ್ನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕುವುದರಿಂದ ರಕ್ಷಣೆಯ ಅಗತ್ಯವಿಲ್ಲ. ನಾಲ್ಕು ವರ್ಷಗಳಿಂದ ನನಗೆ ಇನ್ನೂ ಗುಂಡು ಹಾರಿಸಲಾಗಿಲ್ಲ. ನನ್ನ ಆಲೋಚನೆಗಳನ್ನು ಗುಂಡಿನಿಂದ ಕೊನೆಗಾಣಿಸಲು ಸಾಧ್ಯವಿಲ್ಲ. ನಾನು ನಿರ್ಭೀತಿಯಿಂದ ಮಾತನಾಡುತ್ತೇನೆ’ ಎಂದು ತಿಳಿಸಿದರು.

ಸಾಹಿತ್ಯಾಸಕ್ತರು ರಾಜಕೀಯದಲ್ಲಿ ಭಾಗಿಯಾಗಬಾರದು ಎಂದು ಹೇಳುವುದು ತಪ್ಪು. ಆದರೆ, ಪಕ್ಷ ರಾಜಕಾರಣದಲ್ಲಿ ತೊಡಗಬಾರದು ಎಂದು ಹೇಳಿದರು.

ಕೊಂಕಣಿಯಲ್ಲಿ ಪ್ರಗತಿಪರ ಬರವಣಿಗೆ ಮತ್ತು ವಿಶೇಷವಾಗಿ ಅವರ ಕಾದಂಬರಿ ‘ಕಾರ್ಮೆಲಿನ್’ ನಿಂದ ಹೆಸರುವಾಸಿಯಾದ ಮೌಜೊ ಅವರಿಗೆ ಕೇಂದ್ರ ಗೃಹ ಸಚಿವಾಲಯ ಮತ್ತು ಗೌರಿ ಲಂಕೇಶ್ ಸಾವಿನ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಸಲಹೆ ಮೇರೆಗೆ 2018ರ ಜುಲೈನಿಂದ ಗೋವಾ ಪೊಲೀಸರು ಭದ್ರತೆ ಒದಗಿಸಿದ್ದಾರೆ.

ಪಂಜಾಬ್: ವಿಶ್ವಾಸ ಮತ ಗೆದ್ದ ಸಿಎಂ ಭಗವಂತ ಮಾನ್

ಚಂಡೀಗಢ (ಪಿಟಿಐ): ಪಂಜಾಬ್ ವಿಧಾನಸಭೆಯಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರ ಸೋಮವಾರ ವಿಶ್ವಾಸ ಮತ ಗೆದ್ದಿದೆ.

ವಿಶ್ವಾಸ ಮತಯಾಚನೆ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಸ್ಪೀಕರ್ ಕುಲ್ತಾರ್ ಸಿಂಗ್ ಸಂಧ್ವಾನ್ ಅವರು ಸರ್ಕಾರ ಬೆಂಬಲಿಸುವ ಶಾಸಕರಿಗೆ ಕೈ ಮೇಲೆತ್ತುವಂತೆ ಸೂಚಿಸಿದರು. 117 ಸದಸ್ಯ ಬಲದ ವಿಧಾನಸಭೆಯಲ್ಲಿ 93 ಶಾಸಕರು ವಿಶ್ವಾಸ ಮತ ಬೆಂಬಲಿಸಿದರು.

ಎಎಪಿಯ 91 ಶಾಸಕರು ಹಾಗೂ ಬಿಎಸ್‌ಪಿ, ಎಸ್‌ಎಡಿಯ ತಲಾ ಒಬ್ಬರು ಶಾಸಕರು ಸರ್ಕಾರಕ್ಕೆ ಬೆಂಬಲ ನೀಡಿದರು. ಮತ ಎಣಿಕೆ ನಂತರ ಸರ್ಕಾರ ವಿಶ್ವಾಸ ಮತ ಗೆದ್ದಿರುವುದಾಗಿ ಸ್ಪೀಕರ್ ಪ್ರಕಟಿಸಿದರು.

ಕೋಮು ಗಲಭೆ: 36 ಮಂದಿ ಬಂಧನ

ವಡೋದರ (ಪಿಟಿಐ): ‘ಧಾರ್ಮಿಕ ಧ್ವಜ ಕಟ್ಟುವ ವಿಚಾರವಾಗಿ ಗುಜರಾತ್‌ನ ವಡೋದರ ಜಿಲ್ಲೆಯ ಸಾವ್ಲಿ ನಗರದ ಧಾಮಿಜಿ ಕಾ ಡೇರಾ ಪ್ರದೇಶದಲ್ಲಿ ಎರಡು ಸಮುದಾಯಗಳ ಜನರ ನಡುವೆ ಘರ್ಷಣೆ ನಡೆದಿದ್ದು, ಈ ಸಂಬಂಧ 36 ಮಂದಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

‘ಸಮುದಾಯವೊಂದಕ್ಕೆ ಸೇರಿದ ಜನ ವಿದ್ಯುತ್ ಕಂಬಕ್ಕೆ ಧ್ವಜ ಕಟ್ಟಿದ್ದರು. ಅದರ ಪಕ್ಕದಲ್ಲೇ ಮತ್ತೊಂದು ಸಮುದಾಯಕ್ಕೆ ಸೇರಿದ ಗುಂಪು ಧ್ವಜ ಕಟ್ಟಲು ಮುಂದಾಗಿತ್ತು. ಈ ವಿಚಾರವಾಗಿ ಉಭಯ ಗುಂಪುಗಳ ನಡುವೆ ವಾಗ್ವಾದ ನಡೆದಿತ್ತು. ಬಳಿಕ ಎರಡೂ ಸಮುದಾಯದವರು ಪರಸ್ಪರ ಕಲ್ಲು ತೂರಾಟ ನಡೆಸಿದ್ದರು. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಆದರೆ ವಾಹನ ಮತ್ತು ಅಂಗಡಿಯೊಂದಕ್ಕೆ ಹಾನಿಯಾಗಿದೆ’ ಎಂದು ಸಬ್ ಇನ್‌ಸ್ಪೆಕ್ಟರ್ ಎ.ಆರ್.ಮಹಿದಾ ಮಾಹಿತಿ ನೀಡಿದ್ದಾರೆ.

‘ಶನಿವಾರ ರಾತ್ರಿ ಉಭಯ ಗುಂಪುಗಳು ದೂರು ದಾಖಲಿಸಿದ್ದವು. ಅದರ ಆಧಾರದಲ್ಲಿ 43 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದು, ಈವರೆಗೆ ಉಭಯ ಸಮುದಾಯಕ್ಕೆ ಸೇರಿದ ಒಟ್ಟು 36 ಮಂದಿಯನ್ನು ಬಂಧಿಸಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ. ಪರಿಸ್ಥಿತಿ ಈಗ ತಹಬದಿಗೆ ಬಂದಿದೆ’ ಎಂದಿದ್ದಾರೆ.

ಪರಿಚಯಸ್ಥರಿಂದಲೇ ಕೃತ್ಯ

ತಂದೆ ಸಾಲ ತೀರಿಸಲು ಮಗನಿಗೆ ಬೆತ್ತಲೆ ಪೂಜೆ!



ಶರಣಪ್ಪ ತಳವಾರ | ವಿರುಪನಗೌಡ | ಶರಣಪ್ಪ ಓಜನಹಳ್ಳಿ

ಕೊಪ್ಪಳ: ‘ಅಪ್ಪನ ಸಾಲ ತೀರಿಸಲು ಬೆತ್ತಲೆ ಪೂಜೆ ಮಾಡಬೇಕು. ಆಗ ಅಪ್ಪನಿಗೆ ಕೊಟ್ಟ ಸಾಲವನ್ನು ಯಾರೂ ವಾಪಸ್ ಕೇಳುವುದಿಲ್ಲ’ ಎಂದು ಬಾಲಕನನ್ನು ನಂಬಿಸಿ, ಬೆತ್ತಲೆ ಪೂಜೆ ಮಾಡಿಸಿದ ಘಟನೆ ಇತ್ತೀಚೆಗೆ ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಪ್ಪಳ ತಾಲ್ಲೂಕಿನ ಶರಣಪ್ಪ ತಳವಾರ (40), ವಿರುಪನಗೌಡ (36), ಶರಣಪ್ಪ ಓಜನಹಳ್ಳಿ (35) ಅವರನ್ನು ಬಂಧಿಸಲಾಗಿದೆ ಎಂದು ಕೊಪ್ಪಳ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಬಾಲಕನನ್ನು ಪರಿಚಯಸ್ಥರೇ ಪುಸಲಾಯಿಸಿದ್ದಾರೆ. ಬೆತ್ತಲೆ ಪೂಜೆ ಹುಬ್ಬಳ್ಳಿ ಸಮೀಪದ ತಿಮ್ಮಾಪುರ ಗ್ರಾಮದಲ್ಲಿ ನಡೆದಿದೆ. ಬಾಲಕ ಕೊಪ್ಪಳ ಜಿಲ್ಲೆಯವನು. ಬಾಲಕನ ತಂದೆ ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ಏನು?: ‘ಜೂನ್ 6ರಂದು ಮನೆಗೆ ಬಂದ ಮೂವರು ಮಗನನ್ನು ಕೆಲಸಕ್ಕೆ ಕಳುಹಿಸಲು ಹೇಳಿದರು. ಹುಬ್ಬಳ್ಳಿ ಸಮೀಪ ಜಲಜೀವನ್ ಮಿಷನ್ ಯೋಜನೆ ಕಾಮಗಾರಿಯ ಗುತ್ತಿಗೆ ಪಡೆದಿರುವುದಾಗಿ ತಿಳಿಸಿದರು. ಹೀಗಾಗಿ ಕಳುಹಿಸಿಕೊಟ್ಟೆ.

> **ಬೆತ್ತಲೆ ಪೂಜೆ ಘಟನೆಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣದ ವಿಚಾರಣೆಗೆ ಎರಡು ತಂಡಗಳನ್ನು ರಚಿಸಲಾಗಿದೆ.**
> **ಅರುಣಾಂಗ್ಶು ಗಿರಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೊಪ್ಪಳ

ಬಡತನ ನೆಪವಾಗಿಸಿಕೊಂಡು ನನ್ನ ಮಗನಿಗೆ ಬೆತ್ತಲೆ ಪೂಜೆಗೆ ಪುಸಲಾಯಿಸಿದ್ದಾರೆ. ಸಾಲ ಸಮಸ್ಯೆ ಬಗೆಹರಿದು, ಶ್ರೀಮಂತರಾಗುವ ಬಗ್ಗೆ ನಂಬಿಕೆ ಮೂಡಿಸಿದ್ದಾರೆ’ ಎಂದು ಬಾಲಕನ ತಂದೆ ದೂರು ನೀಡಿದ್ದಾರೆ.

‘ಮೈಗೆಲ್ಲಾ ವಿಭೂತಿ ಹಚ್ಚಿ, ಕೊರಳಲ್ಲಿ ಹೂವಿನ ಹಾರ ಹಾಕಿ ಪೂಜಿಸಿದ್ದಾರೆ. ನಿಂಬೆ ಹಣ್ಣಿನಿಂದ ದೃಷ್ಟಿ ತೆಗೆದು, ಅದನ್ನು ಕತ್ತರಿಸಿ ನನ್ನ ಮಗನ ತಲೆಯ ಮೇಲೆ ರಸ ಹಿಂಡಿದ್ದಾರೆ. ದೈಹಿಕ, ಮಾನಸಿಕ ಕಿರುಕುಳ ನೀಡಿದ್ದಾರೆ. ಜೀವ ಬೆದರಿಕೆಯೂ ಒಡ್ಡಿದ್ದಾರೆ’ ಎಂದು ಅವರು ದೂರಿದ್ದಾರೆ. ಈ ಕುರಿತು ಐಟಿ ಕಾಯ್ದೆ, ಬಾಲ ನ್ಯಾಯ (ಮಕ್ಕಳ ಹಕ್ಕುಗಳ ಪೋಷಣೆ) ಕಾಯ್ದೆಯಡಿ ದೂರು ದಾಖಲಾಗಿದೆ.

ಜಲಮಂಡಳಿ: 6ಕ್ಕೆ ನೀರಿನ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 6ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯ ವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಅಂಡರ್‌ಪಾಸ್ ಕಾಮಗಾರಿ ವಿಳಂಬ: ದಟ್ಟಣೆಯಲ್ಲಿ ಸಿಲುಕಿ ಸಾರ್ವಜನಿಕರ ಪರದಾಟ

ಜಾಲಹಳ್ಳಿ ಜಂಕ್ಷನ್: ನಿತ್ಯವೂ ಟೆನ್ಷನ್

● ಆದಿತ್ಯ ಕೆ.ಎ.

ಬೆಂಗಳೂರು: ಜಾಲಹಳ್ಳಿಯ ಎಸ್.ಎಂ.ರಸ್ತೆಯಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ (ಜಾಲಹಳ್ಳಿ ಕ್ರಾಸ್) ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್ ಕಾಮಗಾರಿ ವಿಳಂಬದಿಂದ ನಿತ್ಯ ಸಾವಿರಾರು ಮಂದಿ ಪರದಾಡುತ್ತಿದ್ದಾರೆ.

2019ರ ಜೂನ್ 2ರಂದೇ ತುಮಕೂರು–ಜಾಲಹಳ್ಳಿ ಜಂಕ್ಷನ್‌ನಲ್ಲಿ ‘ಗ್ರೇಡ್ ಸಪರೇಟರ್’ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದರೂ ಭೂಸ್ವಾಧೀನ ವಿಳಂಬದಿಂದ ನಾಲ್ಕು ವರ್ಷವಾದರೂ ಕಾಮಗಾರಿ ಆರಂಭವಾಗಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2017–18ನೇ ಸಾಲಿನ ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆ ಅಡಿ ಈ ಕಾಮಗಾರಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿತ್ತು. ಆದರೆ, ಎಸ್.ಎಂ.ರಸ್ತೆಯ (ಅಯ್ಯಪ್ಪ ದೇವಸ್ಥಾನ ರಸ್ತೆ) ಎರಡು ಬದಿಯಲ್ಲೂ ಭೂಸ್ವಾಧೀನ, ಪರಿಹಾರ ವಿತರಣೆ ವಿಳಂಬದಿಂದ ಜಾಲಹಳ್ಳಿ ಜಂಕ್ಷನ್ ಹಲವು ತಾಪತ್ರಯಗಳ ಸ್ಥಳವಾಗಿದೆ.

ಈ ಹೆದ್ದಾರಿಯು ರಾಜ್ಯದ ಹಲವು ಜಿಲ್ಲೆಗಳಿಗೆ ಸಂಪರ್ಕ ಕೊಂಡಿ. ದಿನವಿಡೀ ವಾಹನಗಳು ಓಡಾಟ ನಡೆಸುತ್ತವೆ. ಸರಕು ಸಾಗಣೆ ಲಾರಿಗಳ ಓಡಾಟವೇ ಅಧಿಕ. ಅಂಡರ್‌ಪಾಸ್ ವ್ಯವಸ್ಥೆಯಿಲ್ಲದ ಕಾರಣಕ್ಕೆ ಅಪಾಯದ ನಡುವೆ ಪುಟ್ಟ ಮಕ್ಕಳು, ವೃದ್ಧರು, ಕಾರ್ಮಿಕರು, ವಿದ್ಯಾರ್ಥಿಗಳು ಪ್ರತಿನಿತ್ಯ ರಸ್ತೆ ದಾಟುತ್ತಿದ್ದಾರೆ. ಸಿಗ್ನಲ್ ತೆರವಾದ ಕೂಡಲೇ ವಾಹನಗಳು ಪಾದಚಾರಿಗಳ ಮೇಲೆಯೇ ನುಗ್ಗಿ ಬರುತ್ತವೆ ಎಂದು ಜನರು ಅಳಲು ತೋಡಿಕೊಳ್ಳುತ್ತಾರೆ.

ರಾಷ್ಟ್ರೀಯ ಹೆದ್ದಾರಿ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಯಲಹಂಕ, ದೇವನಹಳ್ಳಿ ಭಾಗದಿಂದ ಬರುವ ವಾಹನಗಳಿಂದ ಜಂಕ್ಷನ್ ಸದಾ ಗಿಜಿಡುತ್ತಿರುತ್ತದೆ. ಕಚೇರಿ, ಕೈಗಾರಿಕೆಗಳಿಗೆ ಹಾಗೂ ವಿವಿಧ ಜಿಲ್ಲೆಗಳಿಗೆ ತೆರಳುವವರು ಬಸ್‌ಗಾಗಿ ರಸ್ತೆ ದಾಟಲೇಬೇಕು. ದಟ್ಟಣೆ ನಡುವೆ ರಸ್ತೆಯನ್ನು ದಾಟಲು ಬಂದಾಗ ಅಪಾಯಕ್ಕೆ ಸಿಲುಕುತ್ತಿದ್ದಾರೆ.

ಮಳೆ ನೀರು ಸಹ ಜಂಕ್ಷನ್‌ನಲ್ಲಿಯೇ ನಿಲುತ್ತಿದೆ. ರಸ್ತೆಯ ದೂಳಿನಿಂದ ಅಕ್ಕಪಕ್ಕದ ನಿವಾಸಿಗಳ ಬದುಕು ತೊಂದರೆಗೆ ಸಿಲುಕಿದೆ ಎಂದು ಸ್ಥಳೀಯರು ನೋವು ತೋಡಿಕೊಳ್ಳುತ್ತಾರೆ.

ಕಟ್ಟಡ ತೆರವು ಸವಾಲು: ಕೆಲವು ದಿನಗಳಿಂದ ಒಂದು ಬದಿಯ ಕಟ್ಟಡ ತೆರವು ಕೆಲಸ ಪ್ರಗತಿಯಲ್ಲಿದೆ. ಮೆಟ್ರೊ ಮಾರ್ಗಕ್ಕೆ ಹೊಂದಿಕೊಂಡಂತೆ ಮೂರು ಅಂತಸ್ತಿನ ಕಟ್ಟಡವೊಂದನ್ನು ತೆರವುಗೊಳಿಸುವುದು ಸವಾಲಾಗಿದೆ. ಮೆಟ್ರೊ ಹಾಗೂ ಫ್ಲೈಓವರ್‌ಗೆ ಹಾನಿಯಾಗದಂತೆ ಕಟ್ಟಡ ತೆರವು ಮಾಡಬೇಕಿದೆ. ಇದರಿಂದ ಕಾರ್ಯಾಚರಣೆ ವಿಳಂಬವಾಗುತ್ತಿದೆ.

‘ಆರಂಭದಲ್ಲಿ ಕಾರ್ಮಿಕರಿಂದಲೇ ಕಟ್ಟಡ ತೆರವುಗೊಳಿಸುವ ಕೆಲಸಕ್ಕೆ ಮುಂದಾಗಿದ್ದರೂ ಅದು ಸಾಧ್ಯವಾಗಲಿಲ್ಲ. ಕೊನೆಗೆ ಕಬ್ಬಿಣ ತುಂಡು ಮಾಡಲು ಗ್ಯಾಸ್ ಕಟ್ಟರ್ ಹಾಗೂ ಜೆಸಿಬಿ ಬಳಸಿ ನಿಧಾನವಾಗಿ ಕಟ್ಟಡ ತೆರವು ಮಾಡುತ್ತಿದ್ದೇವೆ’ ಎಂದು ಕಾರ್ಮಿಕರು ಹೇಳಿದರು.



ಜಾಲಹಳ್ಳಿ ಜಂಕ್ಷನ್‌ಲ್ಲಿ ಮೆಟ್ರೋ ಮಾರ್ಗದ ಬಳಿಯಿರುವ ಕಟ್ಟಡವನ್ನು ಜೆಸಿಬಿ ಯಂತ್ರ ಬಳಸಿ ತೆರವು ಮಾಡಲಾಗುತ್ತಿದೆ

ಪ್ರಜಾವಾಣಿ ವಿಶೇಷ

ಅಂದಾಜು ₹ 100 ಕೋಟಿ ವೆಚ್ಚ

ಅಂಡರ್‌ಪಾಸ್ ನಿರ್ಮಿಸಲು ₹ 57.22 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಕಟ್ಟಡದ ಮಾಲೀಕರಿಗೆ ನೀಡುವ ಪರಿಹಾರದ ಮೊತ್ತ ಸೇರಿ ಒಟ್ಟು ₹ 100 ಕೋಟಿ ವೆಚ್ಚವಾಗಲಿದೆ. ಅಂಡರ್ ಪಾಸ್ ನಿರ್ಮಾಣವಾದರೆ ಈ ಮಾರ್ಗದಲ್ಲಿ ವಾಹನ ಸಂಚಾರ ಸುಗಮವಾಗಲಿದೆ. ಯಲಹಂಕ, ತುಮಕೂರು–ಹಾಸನದ ಕಡೆಗೆ ಸುಲಭವಾಗಿ ವಾಹನಗಳು ಸಾಗಬಹುದು. ಕಾಯುವಿಕೆ ಸಹ ತಪ್ಪಲಿದೆ ಎಂದು ಗುತ್ತಿಗೆದಾರರು ಹೇಳಿದರು.

ಕಾಮಗಾರಿ ಆರಂಭವಾದ ಬಳಿಕ 18 ತಿಂಗಳಲ್ಲಿ ಪೂರ್ಣಗೊಳಿಸಬೇಕು. ಭೂಸ್ವಾಧೀನ ವಿಳಂಬದಿಂದ ತಡವಾಗಿದೆ

ರಮೇಶ್, ಯೋಜನಾ ನಿರ್ವಹಣಾ ಸಮಾಲೋಚಕ, ಮಾನಸ ಕನ್ಸಲ್‌ಟೆಂಟ್

ಈ ವೃತ್ತದಲ್ಲಿ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಅಡ್ಡಾದಿಡ್ಡಿ ನಿಲುಗಡೆ ಮಾಡಲಾಗುತ್ತಿದೆ. ಬೆಳಿಗ್ಗೆ ದೂರದ ಊರಿಗೆ ತೆರಳುವ ಬಸ್‌ಗಳು ರಸ್ತೆ ಮಧ್ಯದಲ್ಲಿಯೇ ನಿಲ್ಲುತ್ತಿವೆ

ಮಂಜು, ಟೀ ವ್ಯಾಪಾರಿ, ಜಾಲಹಳ್ಳಿ ಜಂಕ್ಷನ್



ದಸರಾ ಮತ್ತು ಆಯುಧಪೂಜೆ ಹಬ್ಬದ ಹಿನ್ನೆಲೆಯಲ್ಲಿ ಸೋಮವಾರ ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಜನರು ಬೂದುಗುಂಬಳ ಖರೀದಿಯಲ್ಲಿ ನಿರತರಾಗಿದ್ದರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

‘112ಕ್ಕೆ ಕರೆ: 15 ನಿಮಿಷದಲ್ಲಿ ಸ್ಥಳಕ್ಕೆ ಪೊಲೀಸರು’

ಬೆಂಗಳೂರು: ‘ನಗರದ ಜನರಿಗೆ ತುರ್ತು ಸಂದರ್ಭದಲ್ಲಿ ಸಹಾಯ ಮಾಡಲೆಂದು ಪೊಲೀಸ್ ಸಹಾಯವಾಣಿ–112 ಆರಂಭಿಸಲಾಗಿದ್ದು, ಈ ಸಂಖ್ಯೆಗೆ ಕರೆ ಮಾಡಿದರೆ 15 ನಿಮಿಷದೊಳಗೆ ಪೊಲೀಸರು ಸ್ಥಳದಲ್ಲಿ ಇರಲಿದ್ದಾರೆ’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

‘ಪೊಲೀಸ್ ಸಹಾಯವಾಣಿ– 112’ ಕುರಿತ ಜಾಗೃತಿ ವಾಹನ ಸಂಚಾರಕ್ಕೆ ಸೋಮವಾರ ಚಾಲನೆ ನೀಡಿದ ಪ್ರತಾಪ್ ರೆಡ್ಡಿ, ‘ಅಕ್ಟೋಬರ್ 8ರವರೆಗೆ ನಗರದಲ್ಲಿ ವಾಹನ ಸಂಚರಿಸಲಿದೆ’ ಎಂದರು.

‘ನಗರದಲ್ಲಿ ಪೊಲೀಸರು ದಿನದ 24 ಗಂಟೆಯೂ ಕೆಲಸ ಮಾಡುತ್ತಿದ್ದಾರೆ. ನಗರದ ಯಾವುದೇ ಭಾಗದಿಂದ ಕರೆ ಮಾಡಿದರೂ ಪೊಲೀಸರು ಸ್ಥಳಕ್ಕೆ ಹೋಗಲಿದ್ದಾರೆ. ಈ ವ್ಯವಸ್ಥೆ ನಿರ್ವಹಣೆ ಜವಾಬ್ದಾರಿಯನ್ನು ಕಮಾಂಡೊ ಕೇಂದ್ರಕ್ಕೆ ವಹಿಸಲಾಗಿದೆ’ ಎಂದು ಕಮಿಷನರ್ ಹೇಳಿದರು.

‘ಬಿಎಂಟಿಸಿ ನಿಲ್ದಾಣ, ತಂಗುದಾಣ, ಮಾರುಕಟ್ಟೆಗಳು, ಶಾಲಾ–ಕಾಲೇಜು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ 112 ಸಂಖ್ಯೆ ಜಾಗೃತಿ ಸ್ಟಿಕರ್‌ಗಳನ್ನು ಅಂಟಿಸಲಾಗುತ್ತಿದೆ’ ಎಂದು ತಿಳಿಸಿದರು.

‘ವಿದ್ಯುತ್ ದರ ಹೆಚ್ಚಳದಿಂದ ಆಘಾತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಹೊಂದಾಣಿಕೆ ಶುಲ್ಕ ಪರಿಷ್ಕರಿಸಲು ಎಲ್ಲ ಎಸ್ಕಾಂಗಳಿಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅನುಮತಿ ನೀಡಿರುವುದು ಎಂಎಸ್ಎಂಇಗಳಿಗೆ ಮಾರಕವಾಗಿ ಪರಿಣಮಿಸಿದೆ ಎಂದು ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ ತಿಳಿಸಿದ್ದಾರೆ.

ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಕಳೆದ ಹಲವಾರು ವರ್ಷಗಳಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಆರ್ಥಿಕ ಕುಸಿತ, ಕೋವಿಡ್‌ನಂತಹ ಸಾಂಕ್ರಾಮಿಕ ರೋಗ ಮತ್ತು ಇದೀಗ ದೇಶಿಯ ಹಣದುಬ್ಬರ ಹಾಗೂ ಜಾಗತಿಕ ಆರ್ಥಿಕ ಹಿಂಜರಿತದ ರೂಪದಲ್ಲಿ ಪತನದ ಹಾದಿ ಹಿಡಿಯುತ್ತಿವೆ ಎಂದು ವಿವರಿಸಿದ್ದಾರೆ.

ಉದ್ಯಮಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಮಧ್ಯೆ ಕೆಇಆರ್‌ಸಿ ಮೂಲಕ ಸರ್ಕಾರವು ಏಪ್ರಿಲ್‌ನಲ್ಲಿ ವಿದ್ಯುತ್ ದರ ಹೆಚ್ಚಿಸಿತು. ನಂತರ, ಜೂನ್‌ನಲ್ಲಿ ಮತ್ತು ಈ ವರ್ಷದಲ್ಲೇ ಮೂರನೆ ಬಾರಿಗೆ ಸುಂಕವನ್ನು ಹೆಚ್ಚಿಸಲು ಕೆಇಆರ್‌ಸಿಗೆ ಅನುಮತಿ ನೀಡಿರುವುದು ಎಂಎಸ್ಎಂಇಗಳಿಗೆ ಮಾರಕವಾಗುವುದಲ್ಲದೇ ಸಣ್ಣ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಕುಂಠಿತವಾಗಲಿದೆ ಎಂದು ಕಾಸಿಯಾ ಅಧ್ಯಕ್ಷರು ಆತಂಕ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

ನವರಾತ್ರಿ ವಿಶೇಷ ಕಾರ್ಯಕ್ರಮಗಳು:
ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರ್ಮ್ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30
ವಚನ ನವರಾತ್ರಿ ವಿಜಯದಶಮಿ: ಆಶಯ ನುಡಿ: ಎಸ್. ಪಿನಾಕಪಾಣಿ, ಉಪನ್ಯಾಸ: ಶೋಭಾ ಸ್ವಾಮಿ, ವಚನ ಗಾಯನ: ಮಹಾದೇವಿ ಮತ್ತು ತಂಡ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜ ಪ್ರಸನ್ನ ಮನೆಯಂಗಳ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5.30
ನವರಾತ್ರಿ ಉತ್ಸವ: ದೇವಿಗೆ ವನದುರ್ಗಾ ಅಲಂಕಾರ, ಭಜನೆ: ವಿಜಯಾ ಮತ್ತು ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6
ಶರನ್ನವರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ಭರತನಾಟ್ಯ ಪ್ರಸ್ತುತಿ: ನಾಗೇಶ್ ಶ್ರೀರಂಜಿನಿ ನಾಗೇಶ್ ಶಿಷ್ಯರಿಂದ, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30
ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ಆರಾಧನ ಸ್ಕೂಲ್ ಆಫ್ ಡಾನ್ಸ್ ಕಲಾವಿದರಿಂದ ಭರತನಾಟ್ಯ, ನಿರ್ದೇಶನ: ನಾಗಭೂಷಣ್, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30
ನವರಾತ್ರಿ ಉತ್ಸವ: ಭಜನಾ ಮಂಡಳಿ ಸದಸ್ಯರಿಂದ ಭಜನೆ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30



ದೀಪಿಕಾ ಎಸ್. ಕುಂದಗೋಡು, ಭೂಮಿಕಾ ಎಸ್. ಕುಂದಗೋಡು, ಅನ್ವಿತಾ ಸಾವಿತ್ರಿ ಮತ್ತು ಅನುಷಾ ಸಾವಿತ್ರಿ

ಭಕ್ತಿ ಗೀತೆಗಳ ಗಾಯನ: ಗಾಯನ: ದೀಪಿಕಾ.ಎಸ್. ಕುಂದಗೋಡು, ಭೂಮಿಕಾ ಎಸ್. ಕುಂದಗೋಡು, ಅನ್ವಿತಾ ಸಾವಿತ್ರಿ ಮತ್ತು ಅನುಷಾ ಸಾವಿತ್ರಿ, ತಬಲಾ: ಶ್ರೀನಿವಾಸ ಕಾಖಂಡಕಿ, ಕೀ–ಬೋರ್ಡ್: ಅಮಿತ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಗಂಗಮ್ಮ ದೇವಿ ದೇವಸ್ಥಾನ, 11ನೇ ಮುಖ್ಯರಸ್ತೆ, 4ನೇ ಟಿ. ಬ್ಲಾಕ್, ಜಯನಗರ, ಸಂಜೆ 6.30


ನವರಾತ್ರಿ ಸಾಂಸ್ಕೃತಿಕ ಉತ್ಸವ: ವೀಣಾ ವಾದನ: ಸಿ.ಎನ್. ಧನಂಜಯ ಮತ್ತು ವಿದ್ಯಾರ್ಥಿಗಳಿಂದ, ಆಯೋಜನೆ ಮತ್ತು ಸ್ಥಳ: ಪದ್ಮಾವತಿ ಕಲಾನಿಕೇತನ, ಆವರಣ, ಮತ್ತಿಕೆರೆ ಲೇಔಟ್, ಸಂಜೆ 6.30
ಶರನ್ನವರಾತ್ರಿ ಉತ್ಸವ: ದೇವಿಗೆ ಶ್ರೀ ಚಾಮುಂಡೇಶ್ವರಿ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದ ಪೇಟೆ ರಸ್ತೆ, ಯಲಹಂಕ
ಶರನ್ನವರಾತ್ರಿ ಉತ್ಸವ: ದೇವಿಗೆ ದುರ್ಗಾ ಅಲಂಕಾರ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ
ನವರಾತ್ರಿ ಉತ್ಸವ: ರಿಷಿ ಹೋಮ, ಆಯೋಜನೆ: ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಸೆಂಟರ್

ನಗರದಲ್ಲಿ ನಾಳೆ

ಮನೆಯಂಗಳದಲ್ಲಿ ದಸರಾ ಕವಿಗೋಷ್ಠಿ, ಸಾಂಸ್ಕೃತಿಕ ಸ್ಪಂದನ, ‘ಗುರೂಜಿ ರಾಜಲಕ್ಷ್ಮಮ್ಮ ಸ್ಮಾರಕ ಪ್ರಶಸ್ತಿ’ ಪ್ರದಾನ: ಎಸ್.ಜಿ.ಮಾಲತಿಶೆಟ್ಟಿ, ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿಗಳು: ಕೆ.ಎಂ. ರೇವಣ್ಣ, ಉಪಸ್ಥಿತಿ: ದೀಪಾ ವಿಕ್ರಮ್, ವಿಕ್ರಮ್‌ಬಾಬು, ಆಯೋಜನೆ: ಸಮ್ಮಿಲನ ಗುರೂಜಿ ಮನೆ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಗುರೂಜಿ ಮನೆ ಕೃಷ್ಣಾನಂದನಗರ, ಬಸ್ ನಿಲ್ದಾಣದ ಹಿಂಭಾಗ, ನಂದಿನಿ ಲೇಔಟ್, ಬೆಳಿಗ್ಗೆ 10.30
ನವರಾತ್ರಿ ವಿಶೇಷ ಕಾರ್ಯಕ್ರಮಗಳು: ಕಬ್ಬನ್‌ಪೇಟೆ ನಾಡಹಬ್ಬ ದಸರಾ–2022: ಚಾಮುಂಡೇಶ್ವರಿ ಉತ್ಸವ ಮೆರವಣಿಗೆ, ಆಯೋಜನೆ: ಬನ್ನಪ್ಪ ಪಾರ್ಕ್ ಶ್ರೀಚಾಮುಂಡೇಶ್ವರಿ ಉತ್ಸವ ಸಮಿತಿ, ಸ್ಥಳ: ಬನ್ನಪ್ಪ ಪಾರ್ಕ್ ಆಟದ ಮೈದಾನ, ಕಬ್ಬನ್‌ಪೇಟೆ, ಬೆಳಿಗ್ಗೆ 8ರಿಂದ ಕಾರ್ಯಕ್ರಮಗಳು ಪ್ರಾರಂಭ
ನವರಾತ್ರಿ ವಿಶೇಷ ಹೋಮ: ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಪ್ಲಾಟ್‌ಫಾರ್ಮ್ ರಸ್ತೆ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30
ನವರಾತ್ರಿ ಉತ್ಸವ: ದೇವಿಗೆ ಚಾಮುಂಡೇಶ್ವರಿ ಅಲಂಕಾರ, ನಾದಸ್ವರ: ಶೇಷಾದ್ರಿ ಮತ್ತು ತಂಡದವರಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಸ್ಥಳ: ಕೃಷ್ಣರಾಜಪುರ, ಸಂಜೆ 6
ಶರನ್ನವರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ವೀಣಾ ವಾದನ ಪ್ರಸ್ತುತಿ: ಜ್ಯೋತಿ, ಮೃದಂಗ: ಎಸ್. ಭಾರ್ಗವ ಮತ್ತು ಶಿಷ್ಯರಿಂದ, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30
ನವರಾತ್ರಿ ಸಂಗೀತ ನೃತ್ಯೋತ್ಸವ: ಪ್ರಸ್ತುತಿ: ಗಾಯತ್ರಿ ನಾಟ್ಯಾಲಯ ಕಲಾವಿದರಿಂದ ಭರತನಾಟ್ಯ, ನಿರ್ದೇಶನ: ಮೋಹನ್ ಪ್ರಿಯಾ ಅಜಯ್, ಸ್ಥಳ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30
ನವರಾತ್ರಿ ಉತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ನಾಗಚೇತನ್.ಎಸ್.ಎಂ. ಮತ್ತು ತಂಡದಿಂದ, ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ, ಸ್ಥಳ: ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30
ನವರಾತ್ರಿ ಸಾಂಸ್ಕೃತಿಕ ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಪದ್ಮಾವತಿ ಕಲಾನಿಕೇತನ, ಆವರಣ, ಮತ್ತಿಕೆರೆ ಲೇಔಟ್, ಸಂಜೆ 6.30
ಶರನ್ನವರಾತ್ರಿ ಉತ್ಸವ: ದೇವಿಗೆ ಬೆಳ್ಳಿ ಕವಚ ಅಲಂಕಾರ, ಆಯೋಜನೆ: ಯಲ್ಲಮ್ಮದೇವಿ ದೇವಾಲಯ, ಸ್ಥಳ: ದೇಶದಪೇಟೆ ರಸ್ತೆ, ಯಲಹಂಕ
ಶರನ್ನವರಾತ್ರಿ ಉತ್ಸವ: ದೊಡ್ಡಮ್ಮ ದೇವಿಯ ಮೆರವಣಿಗೆ, ಆಯೋಜನೆ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಸ್ಥಳ: ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಬೆಳಿಗ್ಗೆ 11

ಸ್ವದೇಶಿ ಜಾಗರಣ್ ಮಂಚ್ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಕಳವಳ

ಹೆಚ್ಚುತ್ತಿರುವ ನಿರುದ್ಯೋಗ, ಅಸಮಾನತೆ, ಬಡತನ



ದತ್ತಾತ್ರೇಯ ಹೊಸಬಾಳೆ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಆದಾಯ ಅಸಮಾನತೆ ಮತ್ತು ನಿರುದ್ಯೋಗ ಸಮಸ್ಯೆ ಬಗ್ಗೆ ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಕಳವಳ ವ್ಯಕ್ತಪಡಿಸಿದರು.

ಆರೆಸ್ಸೆಸ್ ಅಂಗಸಂಸ್ಥೆ ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಂ) ಭಾನುವಾರ ಆಯೋಜಿಸಿದ್ದ ವೆಬಿನಾರ್ ಉದ್ದೇಶಿಸಿ ಅವರು ಮಾತನಾಡಿದರು.

ಬಡತನವೂ ನಮ್ಮ ಎದುರು ರಾಕ್ಷಸನಂತೆ ಸವಾಲೊಡ್ಡಿದೆ. ದೇಶದಲ್ಲಿ 20 ಕೋಟಿ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಹೇಳಲು ನಾವು ದುಃಖಪಡಬೇಕು. 23 ಕೋಟಿ ಜನರು ದಿನಕ್ಕೆ ₹375ಕ್ಕಿಂತ ಕಡಿಮೆ ಸಂಪಾದಿಸುತ್ತಿದ್ದಾರೆ. ರಾಕ್ಷಸನಂತೆ ಬೃಹದಾಕಾರದಲ್ಲಿ ಬೆಳೆದಿರುವ ಬಡತನದ ಸಂಪೂರ್ಣ ನಿರ್ಮೂಲನೆ ಮುಖ್ಯ. ಈ ಸವಾಲುಗಳನ್ನು ಎದುರಿಸಲು ಕಳೆದ ಕೆಲವು ವರ್ಷಗಳಿಂದ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ್, ಎಫ್‌ಪಿಒ, ಜನ್‌ಧನ್, ಆರೋಗ್ಯ ರಕ್ಷಣೆ ಮತ್ತು ಡಿಜಿಟಲ್ ಕ್ರಾಂತಿಗೆ ಸಂಬಂಧಿಸಿದ ಯೋಜನೆಗಳು ಉತ್ತಮ ಪ್ರಯತ್ನಗಳು ಎಂದು ಅವರು ಶ್ಲಾಘಿಸಿದರು.

ದೇಶದಲ್ಲಿ 4 ಕೋಟಿ ಜನರು ನಿರುದ್ಯೋಗಿಗಳಿದ್ದಾರೆ. ಗ್ರಾಮೀಣ ಭಾಗದಲ್ಲಿ 2.2 ಕೋಟಿ ಹಾಗೂ ನಗರ ಪ್ರದೇಶಗಳಲ್ಲಿ 1.8 ಕೋಟಿ ನಿರುದ್ಯೋಗಿಗಳು ಇದ್ದಾರೆ. ಈ ಹಿಂದಿನ ಸರ್ಕಾರದ ದೋಷಪೂರಿತ ಆರ್ಥಿಕ ನೀತಿಗಳು, ರೋಗಗ್ರಸ್ಥ ಆರ್ಥಿಕತೆ ಈ ಸಮಸ್ಯೆಗಳಿಗೆ ಮೂಲ ಕಾರಣ ಎಂದು ಅವರು ದೂಷಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಗುಡಿಕೈಗಾರಿಕೆಗಳು ಮತ್ತು ಕೌಶಲ ಅಭಿವೃದ್ಧಿ ಕ್ಷೇತ್ರದಲ್ಲಿ ಹೆಚ್ಚಿನ ಉಪಕ್ರಮಗಳಿಗೆ ಉತ್ತೇಜನ ನೀಡಬೇಕು. ಆ ಮೂಲಕ ಗ್ರಾಮೀಣ ಮಟ್ಟದಲ್ಲಿ ಉದ್ಯೋಗಾವಕಾಶ ಸೃಷ್ಟಿಸುವ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಎಸ್‌ಜೆಎಂ 'ಸ್ವಾವಲಂಬಿ ಭಾರತ್ ಅಭಿಯಾನ್' ಪ್ರಾರಂಭಿಸಿದೆ. ಇದರ ಮೂಲಕ, ಎಸ್‌ಜೆಎಂ ಕೃಷಿ ಮತ್ತು ಇದರ ಅವಲಂಬಿತ ಕ್ಷೇತ್ರಗಳಲ್ಲಿ ಹೊಸ ಉಪಕ್ರಮಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿದೆ. ಜತೆಗೆ ಗ್ರಾಮೀಣ ಮಟ್ಟದಲ್ಲಿ ಕೌಶಲ ಅಭಿವೃದ್ಧಿ ಮತ್ತು ಮಾರುಕಟ್ಟೆ ಒದಗಿಸುತ್ತದೆ ಎಂದು ಹೊಸಬಾಳೆ ಹೇಳಿದರು.

ಇಷ್ಟೊಂದು ಆದಾಯ ಅಸಮಾನತೆಯ ನಡುವೆಯೂ ಭಾರತ, ವಿಶ್ವದ ಆರು ಅತಿದೊಡ್ಡ ಆರ್ಥಿಕತೆಯ ದೇಶಗಳಲ್ಲಿ ಒಂದೆನಿಸಿದೆ. ಒಟ್ಟು ಆದಾಯದಲ್ಲಿ ಶೇ 13ರಷ್ಟನ್ನು ಮಾತ್ರ ದೇಶದ ಶೇ 50ರಷ್ಟು ಜನಸಂಖ್ಯೆ ಹೊಂದಿದೆ. ದೇಶದ ಒಟ್ಟು ಜನಸಂಖ್ಯೆಯ ಶೇ 1 ಭಾಗವು ರಾಷ್ಟ್ರದ ಆದಾಯದ 5ನೇ ಒಂದರಷ್ಟು ಹೊಂದಿದೆ. ಇದು ಉತ್ತಮ ಸನ್ನಿವೇಶವೇ? ಎಂದು ಅವರು ಪ್ರಶ್ನಿಸಿದರು.

ಆರೆಸ್ಸೆಸ್ ಕಳವಳ: 'ಭಾರತ್ ಜೋಡೊ' ಪರಿಣಾಮ–ಕಾಂಗ್ರೆಸ್

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಬಡತನ, ನಿರುದ್ಯೋಗ ಮತ್ತು ಆದಾಯ ಅಸಮಾನತೆಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಆರೆಸ್ಸೆಸ್ ಬಗ್ಗೆ ವ್ಯಂಗ್ಯವಾಡಿರುವ ಕಾಂಗ್ರೆಸ್, ಇಂತಹ ಪರಿಣಾಮ ಬೀರಿದ ಶ್ರೇಯ ರಾಹುಲ್ ಗಾಂಧಿ ಅವರ ನೇತೃತ್ವದ ಭಾರತ್ ಜೋಡೊ ಯಾತ್ರೆಗೆ ಸಲ್ಲುತ್ತದೆ ಎಂದು ಸೋಮವಾರ ಹೇಳಿದೆ.

'ಭಾರತ್ ಜೋಡೊ ಯಾತ್ರೆ ಪರಿಣಾಮವನ್ನು ನೋಡಿ. ದೇಶ ಛಿದ್ರಗೊಳಿಸಿ, ಸಮಾಜದಲ್ಲಿ ವಿಷ ಬಿತ್ತುವವರು ಸಹ ಬಡತನ, ನಿರುದ್ಯೋಗ ಮತ್ತು ಅಸಮಾನತೆಯ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುತ್ತಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್‌ನಲ್ಲಿ ಮೂದಲಿಸಿದ್ದಾರೆ.

ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ ಸಿಂಗ್, 'ಅಲ್ಪಸಂಖ್ಯಾತ ಸಮುದಾಯದ ಪ್ರಮುಖರನ್ನು ಭೇಟಿ ಮಾಡುತ್ತಿರುವ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಬಡತನ, ಅಸಮಾನತೆ, ನಿರುದ್ಯೋಗದ ಬಗ್ಗೆ ಧ್ವನಿ ಎತ್ತುತ್ತಿರುವ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರ ಮೇಲೆ ಭಾರತ್ ಜೋಡೊ ಯಾತ್ರೆ ಬೀರಿರುವ ಪರಿಣಾಮ ಎದ್ದು ಕಾಣಿಸಲಾರಂಭಿಸಿದೆ' ಎಂದು ಟ್ವಿಟರ್‌ನಲ್ಲಿ ಕುಟುಕಿದ್ದಾರೆ.

'ದತ್ತಾತ್ರೇಯ ಜೀ ಅರ್ಥಮಾಡಿಕೊಳ್ಳಿ, ಈ ಸಮಸ್ಯೆ ಮೋದಿ ಜೀ ಅವರ ನೀತಿಯಿಂದಾಗಿ ದೇಶದ 100 ಶ್ರೀಮಂತರ ಸಂಪತ್ತು ವೃದ್ಧಿಸುತ್ತಿದೆ. ಬಡವರು ಮತ್ತು ಮಧ್ಯಮವರ್ಗದ ಕುಟುಂಬಗಳ ಆದಾಯ ಕುಸಿಯುತ್ತಿದೆ' ಎಂದು ಸಿಂಗ್ ಲೇವಡಿ ಮಾಡಿದ್ದಾರೆ.

ಹೊಸಬಾಳೆ ಹೇಳಿದ್ದು ಸತ್ಯ– ಸಚಿವ ಅಂಗಾರ

ಬೆಂಗಳೂರು: 'ದೇಶದಲ್ಲಿನ ನಿರುದ್ಯೋಗ, ಬಡತನ, ಆರ್ಥಿಕ ಅಸಮಾನತೆ ಕುರಿತು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ವ್ಯಕ್ತಪಡಿಸಿದ ಕಳವಳ ಸತ್ಯ' ಎಂದು ಮೀನುಗಾರಿಕೆ ಸಚಿವ ಎಸ್. ಅಂಗಾರ ಹೇಳಿದರು.

'ದೇಶದಲ್ಲಿ ಇನ್ನೂ 20 ಕೋಟಿ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. 23 ಕೋಟಿ ಜನರ ನಿತ್ಯದ ಆದಾಯ ₹ 375 ಗಿಂತಲೂ ಕಡಿಮೆ ಇದೆ. ನಾಲ್ಕು ಕೋಟಿ ಜನರು ನಿರುದ್ಯೋಗಿಗಳಿದ್ದಾರೆ. ನಿರುದ್ಯೋಗ ಪ್ರಮಾಣ ಶೇ 7.6ರಷ್ಟಿದೆ ಎಂದು ಕಾರ್ಮಿಕ ಇಲಾಖೆಯ ಸಮೀಕ್ಷೆಯೇ ಹೇಳುತ್ತಿದೆ' ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದ್ದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅಂಗಾರ, 'ಪ್ರಜಾಪ್ರಭುತ್ವದಲ್ಲಿ ರಾಜಕೀಯ ಸ್ಪರ್ಧೆಯ ನಡುವೆಯೂ ದೇಶಕ್ಕೆ ಒಂದು ಆರ್ಥಿಕ ನೀತಿ ಇರಬೇಕು. ಆದರೆ, ಅದು ನಮ್ಮ ದೇಶದಲ್ಲಿ ಇರಲಿಲ್ಲ. ಬಿಜೆಪಿ ಹಾಗೂ ಸಂಘಕ್ಕೆ ಆ ರೀತಿಯ ಆರ್ಥಿಕ ನೀತಿ ಇದೆ' ಎಂದರು.

ಅಚ್ಛೇ ದಿನದ ಆತ್ಮಾವಲೋಕನಕ್ಕೆ ಅಂಜಿಕೆ ಏಕೆ?: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿರುವ ಬಡತನ, ನಿರುದ್ಯೋಗ ಮತ್ತು ಹಸಿವಿನ ಕುರಿತು ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ನೀಡಿರುವ ಹೇಳಿಕೆ ಭಾರತದ ಸದ್ಯದ ಸ್ಥಿತಿಗೆ ಕನ್ನಡಿ ಹಿಡಿದಿದೆ. ಇಷ್ಟಾದರೂ ಅಚ್ಛೇ ದಿನದ ಆತ್ಮಾವಲೋಕನಕ್ಕೆ ಅಂಜಿಕೆ ಏಕೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸೋಮವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಈಗ ಅಚ್ಛೇ ದಿನದ ಅಸಲಿಯತ್ತಿನ ಬಗ್ಗೆ ದೊಡ್ಡ ಪ್ರಶ್ನೆಯೇ ಮೂಡಿದೆ. ಏಳು ವರ್ಷಗಳ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಯಾರು ಉದ್ಧಾರ ಆಗಿದ್ದಾರೆ? ಯಾರು ಹಾಳಾಗಿದ್ದಾರೆ? ಎನ್ನುವುದನ್ನು ಹೇಳಲು ವಿಶೇಷ ಪಾಂಡಿತ್ಯವೇನೂ ಬೇಕಿಲ್ಲ. 20 ಕೋಟಿ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. 4 ಕೋಟಿ ಯುವಕರಿಗೆ ಉದ್ಯೋಗವೇ ಇಲ್ಲ ಎಂದು ಹೊಸಬಾಳೆ ಅವರೇ ಹೇಳಿದ್ದಾರೆ. ಹಾಗಾದರೆ, ಏಳು ವರ್ಷಗಳಲ್ಲಿ ಶ್ರೀಮಂತರಾದವರು ಯಾರು' ಎಂದು ಕೇಳಿದ್ದಾರೆ.

23 ಕೋಟಿ ಜನರ ದಿನದ ಆದಾಯ ₹ 375 ಕ್ಕಿಂತ ಕಡಿಮೆ ಇದೆ. ಆದರೆ, ಉದ್ಯಮಿ ಒಬ್ಬರು ಗಂಟೆಗೆ ₹ 42 ಕೋಟಿ, ವಾರಕ್ಕೆ ₹ 6,000 ಕೋಟಿ ಸಂಪಾದನೆ ಮಾಡುತ್ತಿದ್ದಾರೆ! ಇದು ಸದ್ಯದ ಭಾರತದ ಚಿತ್ರಣ. ದೇಶದ ಶೇಕಡ 20ರಷ್ಟು ಆದಾಯ ಶೇ 1ರಷ್ಟು ಜನರ ಕೈಯ್ಯಲ್ಲಿದೆ ಎಂದರೆ ಇದಕ್ಕಿಂತ ಆಘಾತಕಾರಿ ಸಂಗತಿ ಮತ್ತೊಂದು ಇದೆಯಾ? ಎಂಬ ಪ್ರಶ್ನೆಯನ್ನು ಹೊಸಬಾಳೆ ಮುಂದಿಟ್ಟಿದ್ದಾರೆ ಎಂದು ಹೇಳಿದ್ದಾರೆ.

ಭಾರತದ ಉದ್ದಗಲಕ್ಕೂ ಅಪೌಷ್ಟಿಕತೆ ತಾಂಡವ ವಾಡುತ್ತಿದೆ. ಲಕ್ಷಾಂತರ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಲಭ್ಯವಿಲ್ಲ. ಸಮೀಕ್ಷೆಗಳು ಹೇಳಿದ ಸತ್ಯವನ್ನೇ ಹೊಸಬಾಳೆ ಅವರೂ ಹೇಳಿದ್ದಾರೆ. ದೇಶದಲ್ಲಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ ದೊಡ್ಡ ಆಕ್ರೋಶಕ್ಕೆ ಕಾರಣವಾದರೂ ಅಚ್ಚರಿ ಇಲ್ಲ. 'ಕಾರ್ಪೋರೇಟ್ ರಾಜ್ಯ'ದ ಕಬಂಧ ಬಾಹುಗಳಲ್ಲಿ ಭಾರತ ಸಿಕ್ಕಿಬಿದ್ದಿರುವುದು ದೇಶದ ಭವಿಷ್ಯಕ್ಕೆ ಒಳ್ಳೆಯದಲ್ಲ. ಜನರ ಅಸಹನೆ, ಬೇಗುದಿ ದಿನೇದಿನೆ ಹೆಚ್ಚುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರ ಎಚ್ಚೆತ್ತುಕೊಳ್ಳಲು ಇದು ಸಕಾಲ ಎಂದು ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಶಿಕ್ಷಕರ ನೇಮಕಾತಿ: ದಾಖಲೆಗಳ ಪರಿಶೀಲನೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಅ.6ರಿಂದ ಆರಂಭವಾಗಲಿದೆ.

ದಾಖಲೆಗಳನ್ನು ಆಯಾ ಜಿಲ್ಲೆಯ ಉಪನಿರ್ದೇಶಕರು ಹಾಗೂ ನೇಮಕಾತಿ ಪ್ರಾಧಿಕಾರದ ಕಚೇರಿಗಳಲ್ಲಿ ನಡೆಯಲಿದೆ.

ಈಗಾಗಲೇ 1:2 ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು www.schooleducation.kar.nic.in ವೆಬ್‌ಸೈಟ್‌ನಲ್ಲಿ ಪ್ರಕಟಣೆಸಲಾಗಿದೆ.

ದಾಖಲೆಗಳ ಪರಿಶೀಲನೆಯ ವೇಳಾಪಟ್ಟಿ ಮತ್ತು ಇತರ ವಿವರಗಳನ್ನು ವೆಬ್‌ಸೈಟ್‌ನಲ್ಲಿ ವೀಕ್ಷಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

'ಆಳ್ವಾಸ್ ನುಡಿಸಿರಿ' ಮುಂದೂಡಿಕೆ

ಮೂಡುಬಿದಿರೆ: 'ಡಿ.21ರಿಂದ 23ರವರೆಗೆ ಇಲ್ಲಿ ನಡೆಸಲು ಉದ್ದೇಶಿಸಿದ್ದ 'ಆಳ್ವಾಸ್ ನುಡಿಸಿರಿ-2022' ರಾಷ್ಟ್ರೀಯ ಸಮ್ಮೇಳನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದ್ದಾರೆ.

ಈ ಕುರಿತ ಹೇಳಿಕೆಯಲ್ಲಿ ಅವರು, 'ಡಿ.21ರಿಂದ 27ರವರೆಗೆ 'ಸ್ಕೌಟ್ಸ್ ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ' ನಡೆಯಲಿದೆ. 50 ಸಾವಿರ ಪ್ರತಿನಿಧಿಗಳು ಮತ್ತು 10 ಸಾವಿರ ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆ ಇದೆ. ಎರಡು ಕಾರ್ಯಕ್ರಮಗಳನ್ನು ಏಕಕಾಲದಲ್ಲಿ ನಿರ್ವಹಿಸಲು ಕಷ್ಟವಾಗುವುದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ಮಣಿಕಂಠ ರಾಠೋಡ ಗಡಿಪಾರು



ಕಲಬುರಗಿ: ಅಕ್ಕಿ ಅಕ್ರಮ ಸಾಗಣೆ ಸೇರಿ ಹಲವು ಪ್ರಕರಣಗಳಿದ್ದ ಮತ್ತು ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ ಮಣಿಕಂಠ ರಾಠೋಡಗೆ ಕಲಬುರಗಿ ನಗರದಿಂದ ಗಡಿಪಾರು ಮಾಡಿ ಕಲಬುರಗಿ ನಗರದ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಯೂ ಆದ ಡಿಸಿಪಿ ಅಡ್ಡೂರು ಶ್ರೀನಿವಾಸಲು ಆದೇಶಿಸಿದ್ದಾರೆ.

ಸೆಪ್ಟೆಂಬರ್ 30ರಂದೇ ಆದೇಶ ನೀಡಿದ್ದು, ಗಡಿಪಾರಿಗೆ 5 ದಿನ ಕಾಲಾವಕಾಶ ನೀಡಲಾಗಿದೆ. ಮಣಿಕಂಠ ವಿರುದ್ಧ ಕಲಬುರಗಿ, ಯಾದಗಿರಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹಲವು ಪ್ರಕರಣಗಳಿವೆ. ಬಿಜೆಪಿ ನಾಯಕರಾದ ಬಿ.ಎಸ್.ಯಡಿಯೂರಪ್ಪ, ಬಿ.ಎಲ್. ಸಂತೋಷ್, ಸಿ.ಟಿ. ರವಿ ಸೇರಿ ಇತರ ಮುಖಂಡರೊಂದಿಗೆ ತಾನು ಇರುವ ಚಿತ್ರಗಳನ್ನು ಫೇಸ್‌ಬುಕ್ ಖಾತೆಯಲ್ಲಿ ಮಣಿಕಂಠ ಹಂಚಿಕೊಂಡಿದ್ದಾನೆ.

'ಮಣಿಕಂಠಗೆ ಶಿವಮೊಗ್ಗ ಗ್ರಾಮಾಂತರ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ಆದೇಶ ಒಂದು ವರ್ಷದವರೆಗೆ ಇರಲಿದೆ' ಎಂದು ಡಿಸಿಪಿ ಅಡ್ಡೂರು ಶ್ರೀನಿವಾಸಲು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಡಿಜಿಪಿ ಬೇಡವೆಂದರೂ ಪಿಎಫ್‌ಐ ಪ್ರಕರಣ ಹಿಂಪಡೆದಿದ್ದ ಸಿದ್ದರಾಮಯ್ಯ'

ಬೆಂಗಳೂರು: 'ಪಿಎಫ್‌ಐ ನಿಷೇಧಿಸುವಂತೆ ನಾನೇ ಒತ್ತಾಯಿಸಿದ್ದೆ ಎಂದು ಈಗ ಹೇಳುವ ಸಿದ್ದರಾಮಯ್ಯ, ಹಿಂದೆ 1,600 ಪಿಎಫ್‌ಐ ಕಾರ್ಯಕರ್ತರು ಭಾಗಿಯಾಗಿದ್ದ ವಿಧ್ವಂಸಕ ಕೃತ್ಯಗಳ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆದಿದ್ದರು' ಎಂದು ಕಂದಾಯ ಸಚಿವ ಆರ್. ಅಶೋಕ ದೂರಿದರು.

'ಸಿದ್ದರಾಮಯ್ಯ ಪಿಎಫ್‌ಐ ಭಾಗ್ಯ' ಹೆಸರಿನಲ್ಲಿ ಭಿತ್ತಿಪತ್ರವನ್ನು ಸೋಮವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಹಿಂದೆ ತನ್ವೀರ್ ಸೇಠ್ ಪತ್ರ ಬರೆದು ಪಿಎಫ್‌ಐ ಕಾರ್ಯಕರ್ತರು ಅಮಾಯಕರು, ಅವರ ಮೇಲೆ ಸುಳ್ಳು ಕೇಸ್ ದಾಖಲಿಸಿದ್ದಾರೆ. ಕೇಸ್ ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದ್ದರು. ಆದರೆ, ಯಾವುದೇ ಕಾರಣಕ್ಕೂ ಪ್ರಕರಣ ವಾಪಸ್ ಪಡೆಯಬಾರದೆಂದು ಅಂದಿನ ಡಿಜಿಪಿ, ಕಾನೂನು ಕಾರ್ಯದರ್ಶಿ ಸರ್ಕಾರಕ್ಕೆ ಸಲಹೆ ನೀಡಿದ್ದರು. ಆದರೂ, ಪಿಎಫ್‌ಐ ಏನು ತಪ್ಪುಮಾಡಿದೆ ರೀ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದರು' ಎಂದು ಅಶೋಕ ಹೇಳಿದರು.

ಪ್ರಾಯಶ್ಚಿತದ ಯಾತ್ರೆ: 'ರಾಹುಲ್ ಗಾಂಧಿ ಹಮ್ಮಿಕೊಂಡಿರುವ ಭಾರತ್ ಜೋಡೊ ಪಾದಯಾತ್ರೆ ಪ್ರಾಯಶ್ಚಿತ್ತದ ಯಾತ್ರೆ. ನಾವು (ಕಾಂಗ್ರೆಸ್) ಭಾರತ ಒಡೆದವರು. ನಮ್ಮನ್ನು ಕ್ಷಮಿಸಿ ಬಿಡಿ ಎಂದು ಅವರು ಪ್ರಾಯಶ್ಚಿತ್ತದ ಯಾತ್ರೆ ನಡೆಸುತ್ತಿದ್ದಾರೆ' ಎಂದು ಟೀಕಿಸಿದರು.

'ಭಾರತದಲ್ಲಿ ಎರಡು ಧ್ವಜ ಹಾರಿಸಿದ್ದು ಕಾಂಗ್ರೆಸ್. ಕಾಶ್ಮೀರದಲ್ಲಿ ಹಿಂದೂಗಳ ಕೊಲೆ ಆದಾಗ ಕಂಬಳಿ ಹೊದ್ದು ಮಲಗಿದ್ದು ಕಾಂಗ್ರೆಸ್‌ನವರು. ನೆಹರು ಅವರು ಪ್ರಧಾನಿ ಆಗಬೇಕು ಎನ್ನುವ ಕಾರಣಕ್ಕೆ ಭಾರತ ಒಡೆದವರೂ ಕಾಂಗ್ರೆಸ್‌ನವರು' ಎಂದೂ ಅವರು ಹೇಳಿದ್ದಾರೆ.

'ಬಿಜೆಪಿಯದ್ದು ಸನಾತನ ಸುಳ್ಳು ಪಾಂಡಿತ್ಯ'

'ಭಾರತ್ ಜೋಡೊ ಯಾತ್ರೆಯ ಯಶಸ್ಸು ಮತ್ತು ಅದಕ್ಕೆ ಸಿಗುತ್ತಿರುವ ಜನಮನ್ನಣೆಯ ಗಮನವನ್ನು ಬೇರೆಡೆಗೆ ಸೆಳೆಯಲು ಬಿಜೆಪಿ ತನ್ನ ಸಾಂಪ್ರದಾಯಿಕವಾದ ಸನಾತನ ಸುಳ್ಳು ಪಾಂಡಿತ್ಯಕ್ಕೆ ಮೊರೆ ಹೋಗಿದೆ' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ನಮ್ಮ ಸರ್ಕಾರದ ಅವಧಿಯಲ್ಲಿ ಪಿಎಫ್‌ಐ ಮೇಲಿನ ಪ್ರಕರಣಗಳನ್ನು ಹಿಂಪಡೆಯಲಾಗಿತ್ತು ಎನ್ನುವ ಆರೋಪದ ಬಗ್ಗೆ ನಾನೇ ನಾಲ್ಕು ಬಾರಿ ಸರ್ಕಾರಕ್ಕೆ ಪತ್ರ ಬರೆದು, ಯಾವ ಪ್ರಕರಣವನ್ನೂ ಹಿಂದಕ್ಕೆ ಪಡೆಯಲಾಗಿತ್ತು ಎನ್ನುವ ಬಗ್ಗೆ ಉತ್ತರ ಕೇಳಿದ್ದೆ. ಆದರೆ, ನನಗೆ ಬಿಜೆಪಿ ಸರ್ಕಾರವೇ ಕೊಟ್ಟಿರುವ ಉತ್ತರದಲ್ಲಿ ಎಲ್ಲೂ ಪಿಎಫ್‌ಐ ಮೇಲಿನ ಪ್ರಕರಣಗಳನ್ನು ಹಿಂದಕ್ಕೆ ಪಡೆದಿರುವ ಉಲ್ಲೇಖಗಳೇ ಇಲ್ಲ' ಎಂದಿದ್ದಾರೆ.

'ಯಾವುದೇ ಪ್ರಕರಣದಲ್ಲಿ ಬಂಧಿತರಾದ ಆರೋಪಿಗಳು ಒಂದೇ ಸಮುದಾಯಕ್ಕೆ, ಒಂದೇ ಕೋಮಿಗೆ ಸೇರಿದವರು ಎನ್ನುವ ಒಂದೇ ಕಾರಣದಿಂದ ಎಲ್ಲರನ್ನೂ ಪಿಎಫ್‌ಐ ಸಂಘಟನೆಯ ಕಾರ್ಯಕರ್ತರು ಎಂದು ಬಿಂಬಿಸುವುದು, ಪಿಎಫ್‌ಐಗೂ ತಮಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದ ಆರೋಪಿಗಳನ್ನೂ ಪಿಎಫ್‌ಐ ಸಂಘಟನೆಗೆ ಜಮೆ ಮಾಡುವ ಷಡ್ಯಂತ್ರಕ್ಕೆ ಅಶೋಕ ಅವರನ್ನು ಬಿಜೆಪಿ ಮುಂದೆ ಬಿಟ್ಟಿದೆ' ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

ವಿಳಂಬದ ವಿರುದ್ಧ ಸಾರ್ವಜನಿಕರ ದೂರು: ಸೂಚನೆ ನೀಡಿದ ಡಿಜಿಪಿ

ಪೊಲೀಸ್ ಪರಿಶೀಲನೆ: 21 ದಿನಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಸ್‌ಪೋರ್ಟ್ ಹಾಗೂ ಇತರೆ ಸೇವೆಗಳಿಗೆ ಅಗತ್ಯವಾದ ಪೊಲೀಸ್ ಪರಿಶೀಲನೆ ಪ್ರಕ್ರಿಯೆಯನ್ನು ಗರಿಷ್ಠ 21 ದಿನದೊಳಗೆ ಪೂರ್ಣಗೊಳಿಸಲು ಗಡುವು ನಿಗದಿಪಡಿಸಲಾಗಿದ್ದು, ಈ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಖಡಕ್ ಸೂಚನೆ ನೀಡಿದ್ದಾರೆ.

ಉದ್ಯೋಗ, ವಿದೇಶ ಪ್ರಯಾಣ ಹಾಗೂ ಇತರೆ ಕೆಲಸಗಳಿಗೆ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರವನ್ನು ಕಡ್ಡಾಯ ಮಾಡಲಾಗಿದೆ.

ಪ್ರಮಾಣ ಪತ್ರ ಪಡೆಯಲು ಸಾರ್ವಜನಿಕರು ಸಲ್ಲಿಸುವ ಅರ್ಜಿಗಳ ವಿಲೇವಾರಿ ವಿಳಂಬವಾಗುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಈ ಸಂಬಂಧ ಹಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಅಳಲು ತೋಡಿಕೊಳ್ಳುತ್ತಿದ್ದಾರೆ.

ಜನರ ದೂರುಗಳ ಬಗ್ಗೆ **'ಪ್ರಜಾವಾಣಿ'** ಜೊತೆ ಮಾತನಾಡಿದ ಡಿಜಿ– ಐಜಿಪಿ ಪ್ರವೀಣ್ ಸೂದ್, 'ಸಕಾಲ ಯೋಜನೆಯಡಿ 21 ದಿನದೊಳಗೆ ಪೊಲೀಸ್ ಪರಿಶೀಲನೆ ಪ್ರಕ್ರಿಯೆ ಮುಗಿಸಲು ಕಾಲಮಿತಿ ನಿಗದಿಪಡಿಸಲಾಗಿದೆ. ಈ ಅವಧಿಯಲ್ಲಿ ಪ್ರಮಾಣ ಪತ್ರ ಪಡೆಯುವುದು ಜನರ ಹಕ್ಕು. ಪರಿಶೀಲನೆ ಪ್ರಕ್ರಿಯೆ ವಿಳಂಬ ಮಾಡಿ ಜನರ ಹಕ್ಕಿಗೆ ಧಕ್ಕೆಯನ್ನುಂಟು ಮಾಡಿದರೆ, ತಪ್ಪಿತಸ್ಥ ಪೊಲೀಸರು ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದರು.



ಇಲ್ಲಸಲ್ಲದ ನೆಪ ಹೇಳಿ ಯಾರಾದರೂ ಪೊಲೀಸರು ನಿಗದಿತ ಸಮಯದೊಳಗೆ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ, ಜಿಲ್ಲಾ ಎಸ್ಪಿ ಅಥವಾ ಕಮಿಷನರ್ ಅವರಿಗೆ ಖುದ್ದಾಗಿ ದೂರು ನೀಡಿ

ಪ್ರವೀಣ್ ಸೂದ್
ರಾಜ್ಯ ಪೊಲೀಸ್ ಮಹಾನಿರ್ದೇಶಕ

'ಪೊಲೀಸ್ ಪರಿಶೀಲನೆ ಪ್ರಕ್ರಿಯೆ ಶೇ 100ರಷ್ಟು ಆನ್‌ಲೈನ್ ಮೂಲಕ ನಡೆಯುತ್ತಿದೆ. ಬಹುತೇಕ ಕಡೆ 7 ಅಥವಾ 8 ದಿನದೊಳಗೆ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದೆ. ಕೆಲವೆಡೆ ಮಾತ್ರ ವಿಳಂಬದ ದೂರುಗಳು ಇವೆ' ಎಂದೂ ತಿಳಿಸಿದರು.

ಕಚೇರಿಗೆ ಅಲೆಯಬೇಕಿಲ್ಲ: 'ಪೊಲೀಸ್ ಪರಿಶೀಲನೆ ಪ್ರಕ್ರಿಯೆಯನ್ನು ಪಾರದರ್ಶಕ ಹಾಗೂ ಸರಳೀಕರಣ ಮಾಡಲಾಗಿದೆ. ಆನ್‌ಲೈನ್ ವ್ಯವಸ್ಥೆ ಬಗ್ಗೆ ಜನರಲ್ಲಿ ಅರಿವು ಮೂಡಬೇಕಿದೆ. ಈ ನಿಟ್ಟಿನಲ್ಲಿ ಸದ್ಯದಲ್ಲೇ ವ್ಯವಸ್ಥೆ ಕಿರುಪರಿಚಯದ ವಿಡಿಯೊ ಸಹ ಬಿಡುಗಡೆ ಮಾಡಲಾಗುವುದು' ಎಂದು ಪ್ರವೀಣ್ ಸೂದ್ ಹೇಳಿದರು.

'ವ್ಯವಸ್ಥೆ ಬಗ್ಗೆ ತಿಳಿದುಕೊಂಡು ನಿಗದಿತ ದಿನದೊಳಗೆ ಪ್ರಮಾಣ ಪತ್ರ ನೀಡುವಂತೆ ಜನರೇ ಪೊಲೀಸರನ್ನು ಒತ್ತಾಯಿಸಬೇಕು. ಅವಾಗ, ಪೊಲೀಸರೂ ಎಚ್ಚರಿಕೆಯಿಂದ ಕೆಲಸ ಮಾಡುತ್ತಾರೆ' ಎಂದೂ ಅವರು ತಿಳಿಸಿದರು.

'ಪರಿಶೀಲನೆಗಾಗಿ ಅರ್ಜಿ ಸಲ್ಲಿಸಲು ಹಲವರು ಠಾಣೆ ಹಾಗೂ ಹಿರಿಯ ಅಧಿಕಾರಿಗಳ ಕಚೇರಿಗೆ ಅಲೆಯುತ್ತಿದ್ದಾರೆ. ಈ ರೀತಿ ಯಾರೂ ಅಲೆದಾಡಬೇಕಾದ ಅಗತ್ಯವಿಲ್ಲ. ಸಾರ್ವಜನಿಕರು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬಹುದು. ಪೊಲೀಸರು ಸಹ ಆನ್‌ಲೈನ್ ಮೂಲಕವೇ ಪರಿಶೀಲನೆ ನಡೆಸಲಿದ್ದಾರೆ. ಇದಕ್ಕಾಗಿ ಟ್ಯಾಬ್‌ಗಳನ್ನೂ ವಿತರಿಸಲಾಗಿದೆ. ಪ್ರಮಾಣ ಪತ್ರ ಸಹ ಇ-ಮೇಲ್ ಮೂಲಕ ಅರ್ಜಿದಾರರಿಗೆ ತಲುಪಲಿದೆ' ಎಂದೂ ತಿಳಿಸಿದರು.

ಯಾವುದಕ್ಕೆಲ್ಲ ಪೊಲೀಸ್ ಪರಿಶೀಲನೆ

- ಪಾಸ್‌ಪೋರ್ಟ್ ಹಾಗೂ ವಿದೇಶಿ ಪ್ರಜೆಗಳ ವಾಸ
- ಎಲ್ಲ ಪ್ರಕಾರದ ಸಂಸ್ಥೆ/ಕಂಪನಿಗಳ ನೋಂದಣಿ, ನವೀಕರಣ
- ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ದಿನಗೂಲಿ ಕೆಲಸಕ್ಕೆ ಸೇರುವವರಿಗೆ
- ಭದ್ರತಾ ಕೆಲಸಕ್ಕೆ ಸೇರುವವರಿಗೆ
- ಕೇಂದ್ರ ಹಾಗೂ ರಾಜ್ಯ ಸರ್ಕಾರ ನೌಕರಿಗೆ ಆಯ್ಕೆಯಾದವರಿಗೆ
- ಕ್ಯಾಬ್ ಹಾಗೂ ಇತರೆ ಟ್ರಾವೆಲ್ಸ್ ಚಾಲಕರಿಗೆ

ಉದಯಭಾನು ಕಲಾ ಸಂಘಕ್ಕೆ ನೆರವು: ಸಿ.ಎಂ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಉದಯಭಾನು ಕಲಾ ಸಂಘದ ಸದಸ್ಯರು ಮನವಿ ಸಲ್ಲಿಸಿದರು

ಬೆಂಗಳೂರು: 'ಉದಯಭಾನು ಕಲಾ ಸಂಘದ ಚಟುವಟಿಕೆಗೆ ಅಗತ್ಯ ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಕಲಾ ಸಂಘಕ್ಕೆ ಭಾನುವಾರ ರಾತ್ರಿ ಭೇಟಿ ನೀಡಿದ ಅವರು, ಉದಯಭಾನು ಸುವರ್ಣ ಮಹೋತ್ಸವ ಸ್ಮಾರಕ ಭವನ ಹಾಗೂ ಪುಸ್ತಕ ಪ್ರದರ್ಶನ ವೀಕ್ಷಿಸಿ ಮಾತನಾಡಿದರು.

'ಕಲಾ ಸಂಘವು ಸೇವೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಶೈಕ್ಷಣಿಕ ಮತ್ತಿತರ ಚಟುವಟಿಕೆಗಳನ್ನು ಸೇವಾರೂಪದಲ್ಲಿ ನಡೆಸುತ್ತಿದೆ. ಇದು ಮಹತ್ವದ ಕೆಲಸ. ವಜ್ರ ಮಹೋತ್ಸವದ ಕಡೆಗೆ ಗಟ್ಟಿ ಹೆಜ್ಜೆ ಇಟ್ಟು ಮುನ್ನಡೆಯುತ್ತಿರುವುದು ಸಂತೋಷದ ವಿಷಯ' ಎಂದು ಮುಖ್ಯಮಂತ್ರಿ ಹೇಳಿದರು.

'ಈ ರೀತಿಯ ಸಂಸ್ಥೆಗಳಿಗೆ ಸರ್ಕಾರದಿಂದ ಸಿಗಬೇಕಾದ ಎಲ್ಲ ಸೌಲಭ್ಯಗಳೂ ಖಂಡಿತವಾಗಿಯೂ ದೊರೆಯಬೇಕು' ಎಂದು ಹೇಳಿದರು.

ಕನ್ನಡ ಸಂಘ ಸಂಸ್ಥೆಗಳು ಮತ್ತು ಕನ್ನಡ ಮಾಧ್ಯಮದ ಶಾಲೆಗಳಿಗೆ ನೀಡಿರುವ ನಿವೇಶನ, ಕಟ್ಟಡದ ಗುತ್ತಿಗೆ ನವೀಕರಣ ಮತ್ತು ಹಿಂದಿನ ಗುತ್ತಿಗೆ ದರದಲ್ಲಿ ನವೀಕರಿಸುವಂತೆ ಸಂಘ–ಸಂಸ್ಥೆಗಳ ಪರವಾಗಿ ಸಂಪುಟ ಸಭೆಯ ಒಪ್ಪಿಗೆ ಪಡೆದು ಆದೇಶ ಹೊರಡಿಸಲಾಗಿದೆ. ಸರ್ಕಾರದ ವತಿಯಿಂದ ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ ಸಂಪುಟ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಶಾಸಕರಾದ ಎಲ್.ಎ.ರವಿ ಸುಬ್ರಮಣ್ಯ ಮತ್ತು ಉದಯ್ ಬಿ. ಗರುಡಾಚಾರ್, ಸಂಘದ ಅಧ್ಯಕ್ಷ ಶ್ರೀರಾಮೇಗೌಡ, ಸಂಸ್ಥಾಪಕ ಗೌರವ ಕಾರ್ಯದರ್ಶಿ ಎಂ. ನರಸಿಂಹ, ಕಾರ್ಯಾಧ್ಯಕ್ಷ ಡಾ.ಬಿ.ಎಸ್. ಸತ್ಯನಾರಾಯಣ, ಉಪಾಧ್ಯಕ್ಷ ಟಿ. ಶ್ರೀನಿವಾಸ್, ಸಹಾಯಕ ಕಾರ್ಯದರ್ಶಿಗಳಾದ ಕೆ.ಎನ್.ಸೋಮಶೇಖರ್, ಎಚ್.ಎಸ್.ಕಪಿನಯ್ಯ ಹಾಜರಿದ್ದರು.

'ಹೊಸಬಾಳೆ ಸಲಹೆ ಸರ್ಕಾರ ಸ್ವೀಕರಿಸಲಿ'

ಬೆಂಗಳೂರು: 'ಕೇಂದ್ರ ಸರ್ಕಾರವು ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರ ಸಲಹೆಗಳನ್ನು ಸ್ವೀಕರಿಸಿ, ಜಾರಿಗೊಳಿಸಿದರೆ ಕಾಂಗ್ರೆಸ್ ಪಕ್ಷದ ಭಾರತ್ ಜೋಡೊ ಕಾರ್ಯಕ್ರಮದ ಒಂದಂಶವನ್ನು ಜಾರಿಗೊಳಿಸಿದಂತಾಗುತ್ತದೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದ್ದಾರೆ.

'ಹೊಸಬಾಳೆಯವರು ತಿಳಿಸಿರುವಂತೆ ಭಾರತದ 23 ಕೋಟಿಗೂ ಹೆಚ್ಚು ಜನರ ದಿನದ ತಲಾ ಆದಾಯ ₹ 375ಗಿಂತ ಕಡಿಮೆ ಇದೆ. ಕೇವಲ ಪ್ರಚಾರದಲ್ಲಿಯೇ ಮುಳುಗಿರುವ ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಕಿವಿ ಹಿಂಡುವುದರ ಜೊತೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸುತ್ತಿರುವ ಅಂಕಿ ಅಂಶಗಳನ್ನು ಅವರು ಬೆಂಬಲಿಸಿದ್ದಾರೆ' ಎಂದಿದ್ದಾರೆ.

'ಕೆಲವು ದಿನಗಳ ಹಿಂದೆ ಹೊಸಬಾಳೆಯವರು, ದೇಶದಲ್ಲಿ ಏರುತ್ತಿರುವ ಹಣದುಬ್ಬರ ಮತ್ತು ದಿನಬಳಕೆಯ ಆಹಾರ ಪದಾರ್ಥಗಳ ಬೆಲೆಯೇರಿಕೆ ಮೇಲೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಘ ಪರಿವಾರದ ಬೆಂಬಲಿತ ಭಾರತೀಯ ಕಿಸಾನ್ ಸಂಘದ ಕಾರ್ಯಕ್ರಮದಲ್ಲಿ ಹೇಳಿದ್ದರು. ಕೃಷಿಗೆ ಆದ್ಯತೆ ನೀಡುವುದು ಇಂದಿನ ಅವಶ್ಯಕತೆಯೆಂದು ತಿಳಿಸಿದ್ದರು. ಇದೇ ಮಾತುಗಳನ್ನು ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ಕೇಂದ್ರ ಸರ್ಕಾರಕ್ಕೆ ಹೇಳಿದಾಗ, ಬಿಜೆಪಿಯ ಅತಿ ಬುದ್ಧಿವಂತರು ಅಪಹಾಸ್ಯ ಮಾಡಿದ್ದರು. ರಾಹುಲ್ ಗಾಂಧಿರವರ ಅಭಿಪ್ರಾಯಗಳನ್ನೇ ಹೊಸಬಾಳೆಯವರು ಪುನರುಚ್ಚರಿಸಿದ್ದಾರೆ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಚುನಾವಣಾಪೂರ್ವ ಮೈತ್ರಿಗೆ ಸಿಪಿಐ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಮತಗಳು ವಿಭಜನೆಯಾಗದಂತೆ ಎಲ್ಲಾ ಫ್ಯಾಸಿಸ್ಟ್ ವಿರೋಧಿ ಶಕ್ತಿಗಳು ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡು ಬಿಜೆಪಿಯನ್ನು ಸೋಲಿಸಬೇಕು' ಎಂದು ಸಿಪಿಐ ರಾಜ್ಯ ಸಮಿತಿಯ ಕಾರ್ಯದರ್ಶಿ ಸಾತಿ ಸುಂದರೇಶ್ ಸಲಹೆ ನೀಡಿದರು.

'ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಕಾರ್ಪೋರೇಟ್ ಪರ ನೀತಿಗಳ ಕುರಿತು ಜನರಿಗೆ ಅರ್ಥವಾಗದಂತೆ ತಡೆಯುತ್ತಿವೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಹುಸಿ ರಾಷ್ಟ್ರಪ್ರೇಮದ ಹೆಸರಿನಲ್ಲಿ ಮತ ವಿಭಜಕ ನೀತಿ ಅನುಸರಿಸುತ್ತಿವೆ. ಆರ್‌ಎಸ್‌ಎಸ್ ಬೆಂಬಲಿತ ಸರ್ಕಾರವನ್ನು ಕೆಳಗಿಳಿಸಲು ಜಾತ್ಯತೀತ ಪ್ರಜಾಸತ್ತಾತ್ಮಕ ಎಡ ಮತ್ತು ಪ್ರಾದೇಶಿಕ ಪಕ್ಷಗಳು ಕಾರ್ಯತಂತ್ರ ರೂಪಿಸಬೇಕಿದೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ನವ ಉದಾರವಾದಿ ಆರ್ಥಿಕ ನೀತಿಯನ್ನು ಜಾರಿಗೊಳಿಸುವ ಮೂಲಕ ಬಡವರು ಮತ್ತು ಶ್ರೀಮಂತರ ನಡುವೆ ಕಂದಕವನ್ನು ಸೃಷ್ಟಿಸಲಾಗುತ್ತಿದೆ. ಇದು ತೀರಾ ವಿನಾಶಕಾರಿ ಬೆಳವಣಿಗೆಯಾಗಿದೆ. ಸಾರ್ವಜನಿಕ ವಲಯದ ಉದ್ದಿಮೆಗಳಾದ ಬ್ಯಾಂಕ್, ಎಲ್‌ಐಸಿ, ಬಂದರುಗಳು, ವಿಮಾನ ನಿಲ್ದಾಣಗಳು, ಕಲ್ಲಿದ್ದಲು ಗಣಿಗಳು, ಇಂಧನ ಕ್ಷೇತ್ರಗಳನ್ನು ಬಂಡವಾಳಶಾಹಿಗಳಿಗೆ ಹಸ್ತಾಂತರಿಸಲಾಗಿದೆ. ಇದರಿಂದ ದೇಶದ ಸಾರ್ವಜನಿಕ ಸ್ವತ್ತು ಬಂಡವಾಳಶಾಹಿಗಳ ಕೈಗಳಲ್ಲಿ ಕೇಂದ್ರಿಕೃತವಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಸಹ ಕಾರ್ಯದರ್ಶಿ ವಿಜಯ ಭಾಸ್ಕರ್ ಡಿ.ಎ. ಮಾತನಾಡಿ, 'ರೈತ ವಿರೋಧಿ ಮೂರು ಕೃಷಿ ಕಾನೂನುಗಳು, ವಿದ್ಯುತ್ ಖಾಸಗೀಕರಣದ ನೀತಿಯನ್ನು ಕೂಡಲೇ ಹಿಂಪಡೆಯಬೇಕು. ಕಾರ್ಮಿಕರ ಕನಿಷ್ಠ ಕೂಲಿಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ ₹31,500ಕ್ಕೆ ನಿಗದಿಗೊಳಿಸಬೇಕು. ಬಿಲ್ಕಿಸ್ ಬಾನು ಅತ್ಯಾಚಾರಿಗಳನ್ನು ಪುನಃ ಜೈಲಿಗೆ ಕಳುಹಿಸಬೇಕು. ಕಲ್ಯಾಣ ಕರ್ನಾಟಕದಲ್ಲಿ ಗಣಿ ನಿಕ್ಷೇಪಗಳನ್ನು ಪತ್ತೆಮಾಡಿ, ಸ್ಥಳೀಯರಿಗೆ ಉದ್ಯೋಗ ಒದಗಿಸಬೇಕು. ಕೆಜಿಎಫ್ ಚಿನ್ನದ ಗಣಿಗಾರಿಕೆಯನ್ನು ಮತ್ತೆ ಆರಂಭಿಸಬೇಕು' ಎಂದರು.

'ಚಿತ್ರದುರ್ಗದ ಮುರುಘಾಮಠದ ಶಿವಮೂರ್ತಿ ಶರಣರ ವಿರುದ್ಧ ಬಾಲಕಿಯರು ನೀಡಿರುವ ಲೈಂಗಿಕ ದೌರ್ಜನ್ಯದ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ಸಮಗ್ರ ತನಿಖೆ ನಡೆಸಲು ತನಿಖಾಧಿಕಾರಿಯನ್ನು ಬದಲಿಸಬೇಕು. ಸಂತ್ರಸ್ತ ಬಾಲಕಿಯರ ರಕ್ಷಣೆ ಮತ್ತು ಪೋಷಣೆಗೆ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಸಹ ಕಾರ್ಯದರ್ಶಿ ಬಿ. ಅಮ್ಜದ್, ಖಜಾಂಚಿ ಶಿವರಾಜ.ರಾ.ಬಿರಾದಾರ ಇದ್ದರು.



ಯಲಹಂಕದ ರೇವಾ ವಿಶ್ವವಿದ್ಯಾಲಯದ ಬ್ಯುಸಿನೆಸ್ ಸ್ಕೂಲ್ ವತಿಯಿಂದ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ದತ್ತಾಂಶ ವಿಜ್ಞಾನಿ ಡಾ.ಗೌರವ್ ಪ್ರಧಾನ್ ಅವರನ್ನು ಸನ್ಮಾನಿಸಲಾಯಿತು. ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ.ಧನಂಜಯ, ವಾಣಿಜ್ಯ ಮತ್ತು ನಿರ್ವಹಣೆ ವಿಭಾಗದ ನಿರ್ದೇಶಕಿ ಡಾ.ಶುಭಾ ಇದ್ದರು.

'ಏಕಪಕ್ಷೀಯ ತಲಾಖ್ ಅನೂರ್ಜಿತ ಎಂದು ಘೋಷಿಸಿ'

ನವದೆಹಲಿ: 'ತಲಾಖ್-ಎ-ಕಿನಾಯಾ' ಮತ್ತು 'ತಲಾಖ್-ಎ-ಬೈನ್' ಸೇರಿದಂತೆ ಎಲ್ಲಾ ರೀತಿಯ ಏಕಪಕ್ಷೀಯ ತಲಾಖ್ ಅನ್ನು ಅಸಿಂಧು ಮತ್ತು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರಿ ಕಲಬುರಗಿಯ ವೈದ್ಯೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಆಚರಣೆಗಳು ಅನಿಯಂತ್ರಿತ, ಸಮಾನತೆ, ತಾರತಮ್ಯ, ಜೀವನ ಮತ್ತು ಧರ್ಮವನ್ನು ಆಚರಿಸುವ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿವೆ ಎಂದು ಡಾ. ಸೈಯೀದಾ ಅಂಬ್ರೀನ್ ಅರ್ಜಿಯಲ್ಲಿ ತಿಳಿಸಿದ್ದು, ಎಲ್ಲಾ ನಾಗರಿಕರಿಗೆ ವಿಚ್ಛೇದನದ ಏಕರೂಪ ವಿಧಾನದ ಮಾರ್ಗಸೂಚಿ ರೂಪಿಸಲು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಮನವಿ ಮಾಡಿದ್ದಾರೆ.

ವಕೀಲ ಅನಂತ ನಾರಾಯಣ ಎಂ.ಜಿ. ಮೂಲಕ ಸಲ್ಲಿಸಿರುವ ರಿಟ್ ಅರ್ಜಿಯಲ್ಲಿ, 2020ರ ಅ.20ರಂದು ಮದುವೆಯಾದ ಬಳಿಕ ತಮ್ಮ ವೈದ್ಯ ಪತಿ ಮತ್ತು ಅವರ ಕುಟುಂಬದಿಂದ ವರದಕ್ಷಿಣೆಗಾಗಿ ಮಾನಸಿಕ, ದೈಹಿಕ ಕಿರುಕುಳ ಅನುಭವಿಸಿರುವುದಾಗಿ ಎಂದು ಅವರು ಹೇಳಿದ್ದಾರೆ.

ಅಡ್ಡ ಮತದಾನ: ಜೆಡಿಎಸ್‌ನ ಇಬ್ಬರು ಶಾಸಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಾರೆಂದು ಜೆಡಿಎಸ್ ದೂರು ಕೊಟ್ಟ ಹಿನ್ನೆಲೆಯಲ್ಲಿ ಜೆಡಿಎಸ್‌ನ ಕೋಲಾರದ ಶಾಸಕ ಶ್ರೀನಿವಾಸಗೌಡ ಮತ್ತು ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್(ವಾಸು ಅವರಿಗೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ನೋಟಿಸ್ ನೀಡಿದ್ದಾರೆ.

'ಜೆಡಿಎಸ್ ದೂರಿಗೆ ಉತ್ತರ ನೀಡುವಂತೆ ಸೆ.22 ರಂದೇ ನೋಟಿಸ್ ಜಾರಿ ಮಾಡಲಾಗಿದೆ. ನೋಟಿಸ್ ತಲುಪಿದ ನಂತರ ಏಳು ದಿನಗಳಲ್ಲಿ ಉತ್ತರ ನೀಡುವಂತೆ ಸೂಚಿಸಲಾಗಿದೆ' ಎಂದು ವಿಶಾಲಾಕ್ಷಿ 'ಪ್ರಜಾವಾಣಿಗೆ ತಿಳಿಸಿದರು.

'ನಿಗದಿತ ಅವಧಿಯಲ್ಲಿ ಉತ್ತರ ನೀಡದೇ ಇದ್ದರೆ, ಎರಡನೇ ಬಾರಿಗೆ ನೋಟಿಸ್ ಕೊಡಬಹುದು. ಉತ್ತರ ಪಡೆಯಲು ಸಾಕಷ್ಟು ಅವಕಾಶ ನೀಡಲಾಗುತ್ತದೆ. ಆಗಲೂ ಉತ್ತರ ನೀಡದೇ ಇದ್ದರೆ ಕಾನೂನು ಕ್ರಮಕ್ಕೆ ಅವಕಾಶ ಇರುತ್ತದೆ. ಸಾಮಾನ್ಯವಾಗಿ ಶಾಸಕರು ನೋಟಿಸ್‌ಗೆ ಉತ್ತರ ನೀಡುತ್ತಾರೆ' ಎಂದು ಅವರು ತಿಳಿಸಿದರು.

1,850 ಮಹಿಳೆಯರಿಗೆ ಬಾಗಿನ



ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕಿ ಎಚ್‌ಕುಸುಮಾ ಅವರು ಹೆಣ್ಣು ಮಕ್ಕಳಿಗೆ ಬಾಗಿನ ನೀಡಿದರು.

ರಾಜರಾಜೇಶ್ವರಿನಗರ: ಎಂ.ಪಿ.ಎಂ ಬಡಾವಣೆಯ ಶ್ರೀನಿಧಿ ಹಾಲ್‌ನಲ್ಲಿ ರಾಜರಾಜೇಶ್ವರಿನಗರ ಮಹಿಳಾ ಕಾಂಗ್ರೆಸ್ ಸಮಿತಿಯಿಂದ ನವರಾತ್ರಿ ಉತ್ಸವ ಅಂಗವಾಗಿ 1,850 ಮಹಿಳೆಯರಿಗೆ ಬಾಗಿನ ನೀಡಲಾಯಿತು.

ಬಾಗಿನ ವಿತರಿಸಿ ಮಾತನಾಡಿದ ಕಾಂಗ್ರೆಸ್ ನಾಯಕಿ ಎಚ್.ಕುಸುಮಾ, ಹೆಣ್ಣು ದೇವತೆಗೆ ಸಮಾನ. ತಾಯಿಯಾಗಿ, ಮಗಳಾಗಿ, ಹೆಂಡತಿಯಾಗಿ, ಸಹೋದರಿಯಾಗಿ ಇಡೀ ಕುಟುಂಬ ನಿಭಾಯಿಸುವ ಶಕ್ತಿಯನ್ನು ಪಡೆದುಕೊಂಡಿರುತ್ತಾಳೆ ಎಂದರು.

ರಾಜರಾಜೇಶ್ವರಿನಗರ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಲಕ್ಷಣ ಬೈರೇಗೌಡ, ಕಾಂಗ್ರೆಸ್ ನಾಯಕಿ ಸುವರ್ಣ ತುಕಾರಾಂ, ಜ್ಞಾನಭಾರತಿ ವಾರ್ಡ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲಲಿತಾ ರುದ್ರಸ್ವಾಮಿ ಇದ್ದರು.

'ಎಲ್ಲ ಎಂಎಲ್‌ಸಿಗೂ ₹ 50 ಕೋಟಿ ನೀಡಿ'

ಬೆಂಗಳೂರು: ಕಲಾವಿದರ ಕೋಟಾದಡಿ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ಸಿ.ಪಿ.ಯೋಗೇಶ್ವರ್ ಅವರಿಗೆ ನೀಡಿದಂತೆ ಪರಿಷತ್‌ನ ಎಲ್ಲ ಸದಸ್ಯರಿಗೂ ತಲಾ ₹ 50 ಕೋಟಿ ಅನುದಾನ ನೀಡುವಂತೆ ರಾಜ್ಯ ಸರ್ಕಾರವನ್ನು ಜೆಡಿಎಸ್ ಆಗ್ರಹಿಸಿದೆ.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಒಬ್ಬರಿಗೆ ₹ 50 ಕೋಟಿ ಅನುದಾನ ಕೊಟ್ಟಿರುವುದಕ್ಕೆ ನಮ್ಮ ತಕರಾರಿಲ್ಲ. ಆದರೆ, ಅನುದಾನ ಹಂಚಿಕೆಯಲ್ಲಿ ತಾರತಮ್ಯ ಸರಿಯಲ್ಲ. ಎಲ್ಲ ಸದಸ್ಯರಿಗೂ ಅಷ್ಟೇ ಮೊತ್ತದ ಅನುದಾನ ನೀಡಬೇಕು. ಪಕ್ಷದ ಎಲ್ಲ ವಿಧಾನ ಪರಿಷತ್ ಸದಸ್ಯರ ನಿಯೋಗದೊಂದಿಗೆ ಮುಖ್ಯಮಂತ್ರಿಯವರನ್ನು ಭೇಟಿಮಾಡಿ ಈ ಬೇಡಿಕೆ ಮುಂದಿಡಲಾಗುವುದು' ಎಂದರು.

'ವಿಧಾನಸಭೆ, ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಮೇಲ್ಮನೆಗೆ ಆಯ್ಕೆಯಾದವರು ಮತ್ತು ವಿವಿಧ ಕ್ಷೇತ್ರಗಳಿಂದ ನಾಮಕರಣಗೊಂಡ ಇತರೆ ಸದಸ್ಯರೂ ಇದ್ದಾರೆ. ಅವರಿಗೂ ತಲಾ ₹ 50 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲಿ' ಎಂದು ಆಗ್ರಹಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ಕುಂಬಾರರ ಸಂಘದ ವತಿಯಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಶೇಕಡ 90ರಷ್ಟು, ಪಿಯುಸಿಯಲ್ಲಿ ಶೇಕಡ 85ರಷ್ಟು ಅಂಕ ಗಳಿಸಿದ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಯ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳು ಅ. 10ರೊಳಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ 9008825331/9448249273/08026705264ಗೆ ಸಂಪರ್ಕಿಸಬಹುದು.

5 ಸಾವಿರ ಜನರಿಗೆ ದೀಕ್ಷಾ ಭೂಮಿ ಯಾತ್ರೆ

ಬೆಂಗಳೂರು: ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧ ಧರ್ಮದ ದೀಕ್ಷೆ ಪಡೆದ ಸ್ಥಳವಾದ ಮಹಾರಾಷ್ಟ್ರದ ನಾಗಪುರದಲ್ಲಿರುವ ದೀಕ್ಷಾ ಭೂಮಿ ಯಾತ್ರೆಗೆ ಈ ವರ್ಷ ರಾಜ್ಯದಿಂದ 5,000 ಅನುಯಾಯಿಗಳನ್ನು ಸರ್ಕಾರದ ವತಿಯಿಂದ ಕಳುಹಿಸಿಕೊಡಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿವಿಧ ಧರ್ಮಗಳವರು ವಿವಿಧ ಕ್ಷೇತ್ರಗಳಿಗೆ ಯಾತ್ರೆ ಮಾಡುವ ಮಾದರಿಯಲ್ಲಿ ಅಂಬೇಡ್ಕರ್ ಅವರ ಅನುಯಾಯಿಗಳು ಪ್ರತಿ ಅಕ್ಟೋಬರ್‌ನಲ್ಲಿ ನಾಗಪುರದಲ್ಲಿ ನಡೆಯುವ ದಮ್ಮ ಪ್ರವರ್ತನಾ ದಿನ ಕಾರ್ಯಕ್ರಮಕ್ಕೆ ದೀಕ್ಷಾಯಾತ್ರೆ ಕೈಗೊಳ್ಳುವುದು ವಾಡಿಕೆ. ಈ ಬಾರಿ ವಿವಿಧ ಜಿಲ್ಲೆಗಳಿಂದ ಐದು ಸಾವಿರ ಅನುಯಾಯಿಗಳು ತೆರಳಲು ವ್ಯವಸ್ಥೆ ಮಾಡಲಾಗಿದೆ ಎಂದರು.

ಯಾತ್ರೆ ಕೈಗೊಳ್ಳುವ ಅನುಯಾಯಿಗಳು ಆನ್‌ಲೈನ್ ಮೂಲಕ ಹೆಸರು ನೋಂದಣಿ ಮಾಡಿದ್ದು, ಆಯಾ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಯಾತ್ರಿಗಳನ್ನು ಸುರಕ್ಷಿತವಾಗಿ ನಾಗಪುರ ದೀಕ್ಷಾಯಾತ್ರೆಗೆ ಕರೆದೊಯ್ಯಲು ಬಸ್ ವ್ಯವಸ್ಥೆ ಕಲ್ಪಿಸಲು ಆದೇಶಿಸಲಾಗಿದೆ. ಈ ಯೋಜನೆಗೆ ಸುಮಾರು ₹2.5 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಪೂಜಾರಿ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಭಕ್ತಿ, ಒಳ್ಳೆಯ ಮಾತುಗಳನ್ನಾಡಿಸಿದರೆ ಸಾಲದು.
ಅದು, ಒಳ್ಳೆಯ ಕೆಲಸಗಳನ್ನು ಮಾಡಿಸಬೇಕು.

–ಡಿ.ವಿ. ಗುಂಡಪ್ಪ

ಪಿಎಂ ಕೇರ್ಸ್ ನಿಧಿಗೆ ನೇಮಕ ನೀಗಿಲ್ಲ ವಿಶ್ವಾಸಾರ್ಹತೆ ಕೊರತೆ

ಕೋವಿಡ್ ಸಾಂಕ್ರಾಮಿಕವು ಕಾಣಿಸಿಕೊಂಡ ನಂತರದ ಕೆಲವೇ ದಿನಗಳಲ್ಲಿ ಕೇಂದ್ರ ಸರ್ಕಾರವು ಪಿಎಂ–ಕೇರ್ಸ್ ಎಂಬ ನಿಧಿಯೊಂದನ್ನು ಸ್ಥಾಪಿಸಿದೆ. ಇದೊಂದು ಹಣಕಾಸಿನ ಕಪ್ಪು ಕುಳಿಯೇ ಆಗಿದ್ದು, ನಿಧಿಯ ಕುರಿತು ಹೆಚ್ಚಿನ ಮಾಹಿತಿ ಜನರಿಗೆ ತಿಳಿದಿಲ್ಲ. ಈ ನಿಧಿಗೆ ಹಣ ಎಲ್ಲಿಂದ ಬಂದಿದೆ, ಅದನ್ನು ಹೇಗೆ ವೆಚ್ಚ ಮಾಡಲಾಗಿದೆ, ಯಾವ ಉದ್ದೇಶಕ್ಕೆ ವೆಚ್ಚ ಮಾಡಲಾಗಿದೆ ಎಂಬ ಯಾವ ಮಾಹಿತಿಯನ್ನೂ ಸರ್ಕಾರವು ಬಹಿರಂಗ ಮಾಡಿಲ್ಲ. ಕೆಲವು ವ್ಯಕ್ತಿಗಳನ್ನು ಈ ನಿಧಿಯ ಟ್ರಸ್ಟಿಗಳು ಅಥವಾ ಸಲಹೆಗಾರರನ್ನಾಗಿ ಇತ್ತೀಚೆಗೆ ನೇಮಕ ಮಾಡಲಾಗಿದೆ. ಟಾಟಾ ಸನ್ಸ್‌ನ ಗೌರವಾಧ್ಯಕ್ಷ ರತನ್ ಟಾಟಾ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಟಿ. ಥಾಮಸ್, ಲೋಕಸಭೆಯ ಮಾಜಿ ಉಪಸ್ಪೀಕರ್ ಕರಿಯ ಮುಂಡಾ ಅವರನ್ನು ಟ್ರಸ್ಟಿಗಳನ್ನಾಗಿ ನೇಮಕ ಮಾಡಲಾಗಿದೆ. ಮಾಜಿ ಮಹಾಲೇಖಪಾಲ ರಾಜೀವ್ ಮೆಹ್ರಿಷಿ, ಇನ್ಫೊಸಿಸ್ ಪ್ರತಿಷ್ಠಾನದ ಮಾಜಿ ಅಧ್ಯಕ್ಷೆ ಸುಧಾ ಮೂರ್ತಿ ಅವರನ್ನು ಸಲಹಾ ಮಂಡಳಿಗೆ ನೇಮಕ ಮಾಡಲಾಗಿದೆ. ಈ ಎಲ್ಲರೂ ಅಸಾಧಾರಣ ವ್ಯಕ್ತಿಗಳೇ ಹೌದು. ಆದರೆ, ದೇಶದಲ್ಲಿ ಅಸಾಧಾರಣ ಸಾಧನೆ ಮಾಡಿರುವ ಇನ್ನೂ ಹಲವು ವ್ಯಕ್ತಿಗಳು ಇದ್ದಾರೆ. ಹಾಗಿರುವಾಗ ಅವರನ್ನೆಲ್ಲ ಬಿಟ್ಟು, ಈ ವ್ಯಕ್ತಿಗಳನ್ನೇ ಟ್ರಸ್ಟಿಗಳು ಅಥವಾ ಸಲಹೆಗಾರರನ್ನಾಗಿ ನೇಮಕ ಮಾಡಲು ಕಾರಣಗಳೇನು ಎಂಬುದನ್ನು ಬಹಿರಂಗಪಡಿಸಿಲ್ಲ.



ನಿಧಿಯನ್ನು ಪಾರದರ್ಶಕವಾಗಿ ನಿರ್ವಹಣೆ ಮಾಡುವುದರ ಮೂಲಕ ಮಾತ್ರ ಅದಕ್ಕೆ ವಿಶ್ವಾಸಾರ್ಹತೆ ಬರುವಂತೆ ಮಾಡಲು ಸಾಧ್ಯ

ಪಿಎಂ–ಕೇರ್ಸ್ ನಿಧಿಯ ಕುರಿತು ಉತ್ತರ ದೊರೆಯದಿರುವ ಹಲವು ಪ್ರಶ್ನೆಗಳು ಈಗಲೂ ಇವೆ. ಈ ಪ್ರಶ್ನೆಗಳನ್ನು ಮಾಧ್ಯಮ, ಸಾರ್ವಜನಿಕ ವೇದಿಕೆಗಳು, ಸಾಮಾಜಿಕ ಜಾಲತಾಣಗಳು ಮತ್ತು ನ್ಯಾಯಾಲಯಗಳಲ್ಲಿ ಕೇಳಲಾಗಿದೆ. ಸರ್ಕಾರವು ಈ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರಿಸಿಲ್ಲ. ಅವುಗಳ ಜೊತೆಗೆ ನೇಮಕ ಕುರಿತ ಹೊಸ ಪ್ರಶ್ನೆಯನ್ನು ಸೇರಿಸಿಕೊಳ್ಳಬಹುದು. ಆದರೆ, ನಿಧಿಯ ವಿಚಾರದಲ್ಲಿ ತನ್ನ ಅನುಕೂಲಕ್ಕೆ ತಕ್ಕಂತೆ ಸರ್ಕಾರವು ನಿಲುವುಗಳನ್ನು ಬದಲಾಯಿಸುತ್ತಲೇ ಬಂದಿದೆ. ಕೋವಿಡ್ ಸಾಂಕ್ರಾಮಿಕದಂತಹ ಸಂಕಷ್ಟದ ಸಂದರ್ಭದಲ್ಲಿ ಅಥವಾ ತುರ್ತು ಸ್ಥಿತಿಯಲ್ಲಿ ನೆರವು ನೀಡುವುದು ನಿಧಿಯ ಉದ್ದೇಶ ಎಂದು ಹೇಳಿಕೊಳ್ಳಲಾಗಿದೆ. ಆದರೆ, ಅದೇ ಉದ್ದೇಶಕ್ಕಾಗಿ ಕಾಯ್ದೆಬದ್ಧವಾಗಿ ಸ್ಥಾಪಿಸಲಾಗಿರುವ ಪ್ರಧಾನಮಂತ್ರಿ ಪರಿಹಾರ ನಿಧಿ ಈಗಾಗಲೇ ಇದೆ. ಪಿಎಂ– ಕೇರ್ಸ್ ನಿಧಿಗೆ ಪ್ರಧಾನಿಯವರ ಅಧ್ಯಕ್ಷತೆ ಇದ್ದರೆ, ಸಚಿವ ಸಂಪುಟದ ಹಿರಿಯ ಸಚಿವರು ಟ್ರಸ್ಟಿಗಳಾಗಿದ್ದಾರೆ. ಪ್ರಧಾನಿ ಕಾರ್ಯಾಲಯವೇ ಈ ನಿಧಿಯನ್ನು ನಿರ್ವಹಿಸುತ್ತಿದೆ. ಸರ್ಕಾರದ ಮೂಲಸೌಕರ್ಯವನ್ನು ಮತ್ತು ರಾಷ್ಟ್ರೀಯ ಲಾಂಛನವನ್ನು ಬಳಸಿಕೊಳ್ಳುತ್ತಿದೆ. ಹಾಗಿದ್ದರೂ ಮಾಹಿತಿ ಹಕ್ಕು ಕಾಯ್ದೆಅಡಿಯಲ್ಲಿ ಮಾಹಿತಿ ನೀಡಲು ಅಥವಾ ಮಹಾಲೇಖಪಾಲರಿಂದ ಲೆಕ್ಕ ಪರಿಶೋಧನೆ ಮಾಡಿಸಲು ಸರ್ಕಾರ ನಿರಾಕರಿಸಿದೆ.

ಪಿಎಂ– ಕೇರ್ಸ್ ನಿಧಿಯ ರಚನೆ, ಕಾರ್ಯನಿರ್ವಹಣೆ ಮತ್ತು ಲೆಕ್ಕಪತ್ರಗಳ ಕುರಿತಂತೆ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯ ಕೊರತೆ ಆರಂಭದಿಂದಲೇ ಇದೆ. ದೇಣಿಗೆ ಮತ್ತು ದೇಣಿಗೆದಾರರ ವಿವರಗಳನ್ನು ಬಹಿರಂಗಪಡಿಸಿಲ್ಲ. ಆದರೆ, ನಿಧಿಗೆ ದೇಣಿಗೆ ನೀಡಿದವರು ತೆರಿಗೆ ವಿನಾಯಿತಿ ಪಡೆಯಬಹುದು. [illegible] ಎಂಬುದು ಕೂಡ ರಹಸ್ಯವಾಗಿಯೇ ಇದೆ. 80 ವರ್ಷ ದಾಟಿದವರು ಎಂಬುದು ಒಂದು ಮಾನದಂಡ ಆಗಿರುವ ಸಾಧ್ಯತೆ ಇದೆ. ಏಕೆಂದರೆ, ಟ್ರಸ್ಟಿಗಳಾಗಿ ನೇಮಕಗೊಂಡವರಲ್ಲಿ ಹೆಚ್ಚಿನವರು 80 ವರ್ಷ ದಾಟಿದವರು. ಇದು ನಿಧಿಯ ಅಗೋಚರ ಚಟುವಟಿಕೆಗಳಿಗೆ ಹೇಗೆ ಹುರುಪು ತುಂಬಲಿದೆ ಎಂಬುದನ್ನು ಸರ್ಕಾರವೇ ವಿವರಿಸಬೇಕಿದೆ. ರತನ್ ಟಾಟಾ, ಸುಧಾ ಮೂರ್ತಿ, ಕೆ.ಟಿ. ಥಾಮಸ್ ಇವರೆಲ್ಲ ಸಮಾಜದಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಂಡವರು. ಈ ಗಣ್ಯರು, ಪಿಎಂ–ಕೇರ್ಸ್ ನಿಧಿ ಜತೆಗೆ ಗುರುತಿಸಿಕೊಳ್ಳುವುದನ್ನು ನಿರಾಕರಿಸಲು ಬೇಕಿರುವ ಬಲವಾದ ಕಾರಣಗಳು ಇವೆ. ಉತ್ತರದಾಯಿತ್ವವಾಗಲೀ ಪಾರದರ್ಶಕತೆಯಾಗಲೀ ಚಟುವಟಿಕೆಯ ಬಗ್ಗೆ ಸ್ಪಷ್ಟತೆಯಾಗಲೀ ಇಲ್ಲಿ ಇಲ್ಲ.

ಉಕ್ರೇನ್ ದೇಶವನ್ನು ಮಾತುಕತೆಗೆ ಆಹ್ವಾನಿಸಿರುವುದರ ಹಿಂದೆ ಪುಟಿನ್ ಲೆಕ್ಕಾಚಾರ ಬೇರೆಯೇ ಇದೆ

ಮುಂದಿದೆ ಚಳಿಗಾಲ, ಪುಟಿನ್ ದಾಳ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಒಂದು ಮುಖ್ಯ ತಿರುವಿಗೆ ಬಂದು ನಿಂತಿದೆ. 2014ರಲ್ಲಿ ಕ್ರಿಮಿಯಾವನ್ನು ವಶಪಡಿಸಿಕೊಳ್ಳಲು ಬಳಸಿದ್ದ ತಂತ್ರವನ್ನೇ ಪುಟಿನ್ ಮತ್ತೊಮ್ಮೆ ಬಳಸಿದ್ದಾರೆ. ಕೆರ್ಸಾನ್, ಝಪೋರಿಝಿಯಾ, ಲೂಹಾನ್ಸ್ಕ್ ಮತ್ತು ಡೊನೆಸ್ಕ್ ಪ್ರದೇಶಗಳನ್ನು ರಷ್ಯಾದ ಭಾಗವಾಗಿಸಿಕೊಳ್ಳುವ ದಾಖಲೆ ಪತ್ರಗಳಿಗೆ ಸಹಿ ಮಾಡಿದ್ದಾರೆ. ಹಿಂದಿನ ಒಂದು ವಾರದಲ್ಲಿ ಆದ ಬೆಳವಣಿಗೆಗಳು, ಈ ಏಳು ತಿಂಗಳ ಯುದ್ಧ ಯಾವ ದಿಕ್ಕಿಗೆ ಹೊರಳಬಹುದು ಎಂಬ ಕುರಿತು ಹೊಸ ಸಾಧ್ಯತೆಗಳನ್ನು ಮುಂದಿರಿಸಿವೆ. ಯುದ್ಧದ ವ್ಯಾಪ್ತಿ ಹಿರಿದಾಗಿ, ಅಣ್ವಸ್ತ್ರ ದಾಳಿಯಂತಹ ಅನಾಹುತಕ್ಕೂ ಕಾರಣವಾಗಬಹುದೇ ಎಂಬ ಆತಂಕವನ್ನು ಸೃಷ್ಟಿಸಿವೆ.

ಫೆಬ್ರುವರಿ 24ರಂದು ಉಕ್ರೇನ್ ಮೇಲೆ ರಷ್ಯಾ ದಾಳಿಗಿಳಿದಾಗ, ರಷ್ಯಾದ ಗುರಿ ಈ ನಾಲ್ಕು ಪ್ರಾಂತ್ಯಗಳಷ್ಟೇ ಆಗಿರಲಿಲ್ಲ. ನ್ಯಾಟೊ ಸದಸ್ಯ ರಾಷ್ಟ್ರವಾಗಲು ಉಕ್ರೇನ್ ಹವಣಿಸುತ್ತಿದೆ, ಅಣ್ವಸ್ತ್ರ ಹೊಂದುವ ಪ್ರಯತ್ನಕ್ಕೂ ಚಾಲನೆ ನೀಡಿದೆ, ತನ್ನ ಭದ್ರತೆಗೆ ಇದರಿಂದ ಅಪಾಯವಿದೆ, ಜೊತೆಗೆ ಡಾನ್ ಬಾಸ್ ಪ್ರದೇಶದಲ್ಲಿ ರಷ್ಯನ್ ಭಾಷಿಕರ ಮೇಲೆ ದೌರ್ಜನ್ಯ ನಡೆಯುತ್ತಿದೆ, ಹಾಗಾಗಿ ಉಕ್ರೇನಿನ ಸೇನಾ ಶಕ್ತಿಯನ್ನು ಕುಂದಿಸುವುದು, ಡಾನ್ ಬಾಸ್ ಪ್ರದೇಶವನ್ನು ಸ್ವತಂತ್ರಗೊಳಿಸುವುದು ತನ್ನ ಉದ್ದೇಶ ಎಂದು ರಷ್ಯಾ ಹೇಳಿತ್ತು. ಆದರೆ ಯುದ್ಧ ಮುಂದುವರಿದಂತೆ ಉಕ್ರೇನ್ ಸೇನೆ ಎದೆಸೆಟೆಸಿ ಕಾದಾಡಿತು.

ರಷ್ಯಾ ತನಗಾದ ಹಿನ್ನಡೆಯನ್ನು ಒಪ್ಪಲಿಲ್ಲ. ಆದರೆ ರಷ್ಯಾಕ್ಕೆ ಆದ ಹಿನ್ನಡೆ ಅದು ತೆಗೆದುಕೊಂಡ ನಿಲುವಿನಲ್ಲಿ ಪ್ರತಿಫಲಿಸುತ್ತಿತ್ತು. ಮೊದಲಿಗೆ ಕೀವ್ ನಗರದತನಕ ಹೆಜ್ಜೆ ಇರಿಸಿದ್ದ ರಷ್ಯಾ ಪಡೆಗಳು ನಂತರ ಡಾನ್ ಬಾಸ್ ಭಾಗಕ್ಕಷ್ಟೇ ಸೀಮಿತಗೊಂಡವು. ಹೆಚ್ಚುವರಿಯಾಗಿ ಮೀಸಲು ಪಡೆಯನ್ನು ಯುದ್ಧಸನ್ನದ್ಧಗೊಳಿಸುವ ಆದೇಶಕ್ಕೆ ಪುಟಿನ್ ಅಂಕಿತ ಹಾಕಿದರು. ‘ರಷ್ಯಾದ ಪ್ರಾದೇಶಿಕ ಸಮಗ್ರತೆಗೆ ಧಕ್ಕೆ ಉಂಟಾದರೆ ನಮ್ಮ ಬಳಿ ಇರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ಖಂಡಿತವಾಗಿ ಬಳಸುತ್ತೇವೆ’ ಎನ್ನುವ ಮೂಲಕ ಅಣ್ವಸ್ತ್ರ ಬಳಸುವ ಧಮಕಿ ಹಾಕಿದರು. ರಷ್ಯಾದ ಸೇನೆಯ ಹಿಡಿತದಲ್ಲಿದ್ದ ನಾಲ್ಕು ಪ್ರಾಂತ್ಯಗಳಲ್ಲಿ ಕೂಡಲೇ ಜನಾಭಿಪ್ರಾಯ ಸಂಗ್ರಹ ನಡೆಸಲಾಯಿತು. ನಿರೀಕ್ಷಿಸಿದ್ದ ಫಲಿತಾಂಶ ಬಂತು. ಎರಡೇ ದಿನದಲ್ಲಿ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ದಾಖಲೆ ಪತ್ರಗಳಿಗೆ ಪುಟಿನ್ ಅಂಕಿತ ಹಾಕಿದರು. ಕ್ಷಿಪ್ರವಾಗಿ ನಡೆದ ಈ ಬೆಳವಣಿಗೆಗಳು ರಷ್ಯಾಕ್ಕೆ ಆದ ಹಿನ್ನಡೆಯನ್ನು, ಪುಟಿನ್ ಅವರು ಹುಡುಕಿಕೊಂಡ ಮುಖ ಉಳಿಸಿಕೊಳ್ಳುವ ಮಾರ್ಗವನ್ನು, ರಷ್ಯಾದ ನೂತನ ತಂತ್ರಗಾರಿಕೆಯನ್ನು ಹೇಳುತ್ತಿವೆ.

ಹಾಗಾದರೆ ಈ ಸಂಘರ್ಷ ಮುಂದಿನ ದಿನಗಳಲ್ಲಿ ಯಾವ ದಿಕ್ಕಿನತ್ತ ಹೊರಳಬಹುದು? ಮೊದಲನೆಯದು, ಮಾತುಕತೆಯ ಹಾದಿ. ಕ್ರೆಮ್ಲಿನ್‌ನ ಸೇಂಟ್ ಜಾರ್ಜ್ ಸಭಾಂಗಣದಲ್ಲಿ ನಾಲ್ಕು ಪ್ರದೇಶಗಳ ಸ್ವಾಧೀನ ಪ್ರಕ್ರಿಯೆಗೆ ಅಂಕಿತ ಹಾಕಿ ಮಾತನಾಡಿರುವ ಪುಟಿನ್, ಉಕ್ರೇನನ್ನು ಮಾತುಕತೆಗೆ ಆಹ್ವಾನಿಸಿದ್ದಾರೆ. ಆದರೆ ಈ ನಾಲ್ಕು ಪ್ರದೇಶಗಳ ಕುರಿತು ಯಾವುದೇ ಚೌಕಾಶಿಗೆ ಸಿದ್ಧವಿಲ್ಲ ಎಂಬ ಷರತ್ತನ್ನೂ ವಿಧಿಸಿದ್ದಾರೆ. ಯುದ್ಧ ಆರಂಭವಾದ ಬಳಿಕ ಟರ್ಕಿ ಮಧ್ಯಸ್ಥಿಕೆಯಲ್ಲಿ ಒಂದು ಹಂತದ ಮಾತುಕತೆ ನಡೆದಿತ್ತು. ಫೆಬ್ರುವರಿ 24ರ ಪೂರ್ವಸ್ಥಿತಿಗೆ ಮರಳಿದರಷ್ಟೇ ಮಾತುಕತೆ ಮತ್ತು ಕದನವಿರಾಮ ಸಾಧ್ಯ ಎಂದು ಉಕ್ರೇನ್ ಪಟ್ಟು ಹಿಡಿದಾಗ ಮಾತುಕತೆ ಮುರಿದುಬಿತ್ತು. ಇದೀಗ ತನ್ನ ನಾಲ್ಕು ಪ್ರದೇಶಗಳ ಸ್ವಾಧೀನ ಪ್ರಕ್ರಿಯೆಯನ್ನು ರಷ್ಯಾ ಆರಂಭಿಸಿರುವಾಗ ರಷ್ಯಾದ ಜೊತೆ ಉಕ್ರೇನ್ ಮಾತುಕತೆಗೆ ಕೂರಲು ಸಾಧ್ಯವೇ? ಇದು ಪುಟಿನ್ ಅವರಿಗೂ ತಿಳಿದಿದೆ. ಅವರ ಲೆಕ್ಕಾಚಾರ ಬೇರೆಯೇ ಇದೆ.

ಸದ್ಯದ ಮಟ್ಟಿಗೆ ಉಕ್ರೇನ್ ಬೆಂಬಲಕ್ಕೆ ಐರೋಪ್ಯ ರಾಷ್ಟ್ರಗಳು ಇಡಿಯಾಗಿ ನಿಂತಿವೆ. ಈ ಒಗ್ಗಟ್ಟನ್ನು ಮುರಿಯುವುದು ಪುಟಿನ್ ಅವರ ತಂತ್ರ. ಆರ್ಥಿಕವಾಗಿ ಮತ್ತು ಸೇನಾ ದೃಷ್ಟಿಯಿಂದ ಐರೋಪ್ಯ ರಾಷ್ಟ್ರಗಳು ಇದೀಗ ಚೈತನ್ಯ ಉಳಿಸಿಕೊಂಡಿಲ್ಲ. ಈ ಸಂಘರ್ಷ ಅಂತ್ಯಗೊಂಡರೆ ಸಾಕು ಎಂದು ಕಾಯುತ್ತಿವೆ. ಚಳಿಗಾಲ ಎದುರಿರುವಾಗ ಐರೋಪ್ಯ ರಾಷ್ಟ್ರಗಳಿಗೆ ನೈಸರ್ಗಿಕ ಅನಿಲ ಪೂರೈಕೆಯನ್ನು ರಷ್ಯಾ ಸಂಪೂರ್ಣವಾಗಿ ನಿಲ್ಲಿಸಿದರೆ, ಇಂಧನ ದರ ಏರುತ್ತದೆ, ಕಾರ್ಖಾನೆಗಳು ಮುಚ್ಚುವ ಸಂದರ್ಭ ಬರುತ್ತದೆ, ಹಣದುಬ್ಬರ ಆಕಾಶಕ್ಕೆ ಜಿಗಿಯುತ್ತದೆ. ಚಳಿ ಪ್ರದೇಶಗಳ ಜನ ಬೆಚ್ಚಗಿರಬೇಕಾದರೆ ಹೀಟರ್‌ಗಳಿಗೆ ಇಂಧನ ಅಗತ್ಯ. ಹಾಗಾಗಿ, ಪುಟಿನ್ ಈ ಪರಿಸ್ಥಿತಿಯನ್ನು ತಮ್ಮ ಹಿತಕ್ಕೆ ಬಳಸಿಕೊಳ್ಳಬಹುದು. ಈ ನಾಲ್ಕು ಪ್ರಾಂತ್ಯಗಳನ್ನು ಮತ್ತು ಕ್ರಿಮಿಯಾವನ್ನು ರಷ್ಯಾದ ಭಾಗವೆಂದು ಅನುಮೋದಿಸುವ ರಾಷ್ಟ್ರಗಳಿಗೆ ಇಂಧನ ಪೂರೈಸುವುದಾಗಿ ಹೇಳಬಹುದು. ಆಗ ಐರೋಪ್ಯ ರಾಷ್ಟ್ರಗಳಲ್ಲಿ ಅಮೆರಿಕದ ನಿಲುವಿನ ಕುರಿತು ಅಪಸ್ವರ ಏಳಬಹುದು. ಒಗ್ಗಟ್ಟು ಮುರಿಯಬಹುದು. ರಷ್ಯಾದ ಷರತ್ತಿಗೆ ಒಪ್ಪಿ ಮಾತುಕತೆಯ ಮೇಜಿಗೆ ಬರುವುದು ಉಕ್ರೇನಿಗೆ ಅನಿವಾರ್ಯ ಆಗಬಹುದು. ನ್ಯಾಟೊ ಸೇರುವ ಬಯಕೆಯನ್ನು ಬಿಡಬೇಕಾಗಬಹುದು. ರಷ್ಯಾಕ್ಕೆ ಬೇಕಿರುವುದು ಇದೇ. ಪುಟಿನ್ ಈ ಸಾಧ್ಯತೆಯ ಕುರಿತು ಗಮನ ನೆಟ್ಟಂತಿದೆ.

ಎರಡನೆಯದು, ಸಂಘರ್ಷದ ಹಾದಿ. ಪುಟಿನ್ ಅವರ ಸೇನೆ ಕಳೆಗುಂದಿದೆ, ಉಕ್ರೇನ್ ಸೇನೆಯ ಪ್ರತಿದಾಳಿಗೆ ತತ್ತರಿಸುತ್ತಿದೆ. ಪುಟಿನ್ ಅವರಿಗೆ ಪಾಠ ಕಲಿಸಲು ಟೊಂಕ ಕಟ್ಟಿರುವ ಬೈಡನ್ ಆಡಳಿತ, ಉಕ್ರೇನ್ ಬತ್ತಳಿಕೆ ಬರಿದಾಗದಂತೆ ನೋಡಿಕೊಳ್ಳುತ್ತಿದೆ. ಹಾಗಾಗಿ ಅಮೆರಿಕ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಶಕ್ತಿಯನ್ನು ಉಕ್ರೇನ್ ಸೇನೆಗೆ ತುಂಬಬಹುದು, ರಷ್ಯಾವನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಲು ಪ್ರಚೋದಿಸಬಹುದು. ಒಂದೊಮ್ಮೆ ಹೀಗಾದರೆ ಸಂಘರ್ಷ ತಾರಕಕ್ಕೇರುತ್ತದೆ. ನಾಲ್ಕು ಪ್ರದೇಶಗಳ ಸ್ವಾಧೀನ ಪ್ರಕ್ರಿಯೆಗೆ ಅಂಕಿತ ಹಾಕಿ, ರಷ್ಯನ್ನರ ಎದುರು ಕಾಲರ್ ಏರಿಸಿಕೊಂಡಿರುವ ಪುಟಿನ್ ಅವರಿಗೆ ಮುಖಭಂಗವಾಗುತ್ತದೆ. ಅಮೆರಿಕಕ್ಕೆ ಬೇಕಿರುವುದು ಇದೇ.


ಇಂತಹ ಪರಿಸ್ಥಿತಿಯಲ್ಲಿ ಪುಟಿನ್ ಅಂತಿಮವಾಗಿ ಅಣ್ವಸ್ತ್ರದ ಮೊರೆ ಹೋಗಬಹುದೇ? ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ಪ್ಯಾರಿಸ್ ಶಾಂತಿ ಮಾತುಕತೆಯ ವೇಳೆ ಅಮೆರಿಕ ಮುಂದಿರಿಸಿದ್ದ ಷರತ್ತುಗಳಿಗೆ ವಿಯೆಟ್ನಾಂ ಮಣಿಯದಿದ್ದರೆ ಅಣ್ವಸ್ತ್ರ ದಾಳಿ ನಡೆಸುವ ಬೆದರಿಕೆಯನ್ನು ಅಮೆರಿಕದ ಅಂದಿನ ಅಧ್ಯಕ್ಷ ರಿಚರ್ಡ್ ನಿಕ್ಸನ್ ಒಡ್ಡಿದ್ದರು. ಹಾಗಾಗಿ ಉಕ್ರೇನನ್ನು ಮಾತುಕತೆಯ ಮೇಜಿಗೆಳೆಯಲು ಅಣ್ವಸ್ತ್ರ ದಾಳಿಯ ಬೆದರಿಕೆಯನ್ನು ಪುಟಿನ್ ಒಡ್ಡುತ್ತಿರಬಹುದು ಎಂದು ಭಾವಿಸಿದರೂ, ಕೈ ಸೋತಾಗ ಪುಟಿನ್ ದುಸ್ಸಾಹಸಕ್ಕೆ ಮುಂದಾದರೆ ಎಂಬ ದಿಗಿಲಂತೂ ಇದೆ.

ಹಾಗಾಗಿ ರಷ್ಯಾದ ಅಣ್ವಸ್ತ್ರ ದಾಳಿಯ ಬೆದರಿಕೆಗೆ ಅಮೆರಿಕ ಪ್ರತಿತಂತ್ರ ರೂಪಿಸಬಹುದು. ಉಕ್ರೇನಿಗೆ ತಾಗಿಕೊಂಡ ನ್ಯಾಟೊ ರಾಷ್ಟ್ರಗಳಲ್ಲಿ ತನ್ನ ಅಣ್ವಸ್ತ್ರ ಕ್ಷಿಪಣಿಗಳನ್ನು ರಷ್ಯಾದತ್ತ ಮುಖಮಾಡಿ ನಿಲ್ಲಿಸಿ ಅಮೆರಿಕ ತೊಡೆ ತಟ್ಟಿದರೆ ಅಚ್ಚರಿಯಿಲ್ಲ. 1962ರಲ್ಲಿ ಅಮೆರಿಕ ಮತ್ತು ಸೋವಿಯತ್ ರಷ್ಯಾದ ನಡುವೆ ಇಂತಹದೇ ಬಿಕ್ಕಟ್ಟು ಏರ್ಪಟ್ಟಿತ್ತು. ಸೋವಿಯತ್ ರಷ್ಯಾವು ಅಮೆರಿಕದ ಬಗಲಿಗಿರುವ ಕ್ಯೂಬಾದಲ್ಲಿ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತು ಚಿಮ್ಮಬಲ್ಲ ಕ್ಷಿಪಣಿ ವ್ಯವಸ್ಥೆಗಳನ್ನು ಸಜ್ಜಾಗಿ ನಿಲ್ಲಿಸಿತ್ತು. ಸೋವಿಯತ್ ಕಡೆ ಮುಖ ಮಾಡಿದ್ದ ಅಮೆರಿಕದ ಕ್ಷಿಪಣಿಗಳು ಇಟಲಿ ಮತ್ತು ಟರ್ಕಿಯಲ್ಲಿ ಆದೇಶಕ್ಕೆ ಕಾದು ನಿಂತಿದ್ದವು. ಕೊನೆಗೆ ಹಿಂಬಾಗಿಲಿನ ಮಾತುಕತೆ ನಡೆದು ಪರಿಸ್ಥಿತಿ ತಿಳಿಗೊಂಡಿತ್ತು. ಇದೀಗ ಅಮೆರಿಕ ಅದೇ ತಂತ್ರದ ಮೊರೆಹೋದರೆ, ಆತಂಕ ಹೆಚ್ಚಬಹುದು.

ಅದೇನೇ ಇರಲಿ, ಉಕ್ರೇನ್– ರಷ್ಯಾ ನಡುವಿನ ಸಂಘರ್ಷವು ಇದೀಗ ಎರಡು ದೇಶಗಳ ನಡುವಿನ ಸಂಘರ್ಷವಾಗಿ ಉಳಿದಿಲ್ಲ. ಹಲವು ಹಿತಾಸಕ್ತಿಗಳು ಹಿಂದೆ ನಿಂತು ದಾಳ ಉರುಳಿಸುತ್ತಿವೆ. ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ರಷ್ಯಾದ ವಿರುದ್ಧ ಬಳಸಬಹುದಾದ ಎಲ್ಲ ರೀತಿಯ ದಿಗ್ಬಂಧನದ ಅಸ್ತ್ರವನ್ನು ಇದೀಗ ಬಳಸಿಯಾಗಿದೆ. ರಷ್ಯಾದ ರಟ್ಟೆ ಗಟ್ಟಿಯಾಗಿರುವಂತೆ ಚೀನಾ ನೋಡಿಕೊಳ್ಳುತ್ತಿದೆ. ಉಕ್ರೇನ್ ಬಸವಳಿಯದಂತೆ ಅಮೆರಿಕ ಪೊರೆಯುತ್ತಿದೆ. ಹಾಗಾಗಿ ದಿನ ಕಳೆದಂತೆ ಸಂಘರ್ಷ ಹೊಸ ರೂಪವನ್ನು ತಳೆಯುತ್ತಿದೆ. ಆತಂಕವನ್ನು ಹೆಚ್ಚಿಸುತ್ತಿದೆ. ಯುದ್ಧದ ಪರಿಣಾಮ ಜಗತ್ತಿನ ಜನರನ್ನು ಬಾಧಿಸುತ್ತಿದೆ. ಎಲ್ಲ ಆತಂಕಗಳು ಕರಗಿ ಜಗತ್ತಿನಲ್ಲಿ ಶಾಂತಿ ನೆಲೆಸಲಿ ಎಂದು ನಾವು ವಿಜಯದಶಮಿಯ ಸಂದರ್ಭದಲ್ಲಿ ಹಾರೈಸಬೇಕಿದೆ.



ಚುರುಮುರಿ



ಸತ್ಯಮ್ಮನ ಜಂಜಾಟ

• ಲಿಂಗರಾಜು ಡಿ.ಎಸ್.

ವತ್ತರೇಗೆ ವಾಕಿಂಗ್ ಹೋಗಿಬರುವಾಗ ಯಾರೋ ‘ಲೋ ಮಗಾ ಬಯ್ಯ ಇಲ್ಲಿ!’ ಅಂತ ಕರೆದಂಗಾಯ್ತು. ತಿರುಗಿ ನೋಡಿದರೆ ಮುರಿದೋದ ಆಯುಧ ಹಿಡಕಂದು ಒಂದು ಸೊರಗಿದ ಎಣ್ಣೆಂಗ್ಸು ನಿಂತುತ್ತು. ಗುರುತಾಗಲಿಲ್ಲ!

‘ನಾನು ಸತ್ಯದೇವತೆ ಕಪ್ಪಾ. ಮರೆತೋಗಿದ್ದೀಯ? ಮರೀಲೇಬೇಕು ಬುಡೂ’ ಅಂತ ಮಾತಾಡಿಸಿದಳು.

‘ಇದ್ಯಾಕ ತಾಯಿ ಹಂಗಂದೀಯೆ! ನಾವು ಸತ್ಯಕ್ಕೋಸ್ಕರ ಬದುಕ್ತಾ ಇವಿ’ ಅಂತಂದೆ.

‘ಮಗನೇ ನನಗೂ ಸುಳ್ಳಮ್ಮನೀಗು ಪಂದ್ಯ ಬಿದ್ದದ. ‘ಎಲೆ ನನ್ನ ಸವತಿ, ರಾಜಕಾರಣಿಗಳು, ಅಧಿಕಾರಸ್ತರೆಲ್ಲಾ ಸುಳ್ಳು, ಭ್ರಷ್ಟಾಚಾರಕ್ಕೆ ಪಾಟಾಗಿ ನಿನ್ನ ಮರತೋಗ್ಯವರೆ’ ಅಂತ ಸುಳ್ಳವ್ವ ನಿಗರಾಡಕ್ಕೆ ಹತ್ತೌಳೆ. ನಾನು ಇದೇನು ಗಾಳಿಗಂಟಲು ನೋಡುಮಾ ಅಂತ ಬರುವಾಗ ದಾರಿಯಾಗೆ ಜನ ನೆರೆ ಹೊಂಟಂಗೆ ನಡಕೋಯ್ತಿದ್ರು’.

‘ಆಮೇಲೇನಾತವ್ವ?’

‘ಮುಂದಿದ್ದೋರು ನಿನ್ನಂಗೇ ‘ಯಾರವ್ವ ನೀನು?’ ಅಂತ ಕೇಳಿದ್ರಾ, ನಾನು ಈಥರಕೀತರ ಅಂತ ನನ್ನ ಕಥೆ ಹೇಳಿದೇಟಿಗೆ ಎಲ್ಲ ಬಂದು ನನ್ನ ಹಿಡಕಂದು ‘ನಾವು ಜೋಡುಸಕ್ಕೆ ಹೊಂಟಿದ್ದೀವಿ. ಈಗ ನೀನೆ ನಮ್ಮ ಅಧ್ಯಕ್ಸೆ ಆಗಬಕು’ ಅಂತ ಜುಲುಮೆ ಮಾಡಿದ್ರು. ಇನ್ನೊಂದಷ್ಟು ಜನ ಬಂದೋರು ‘ಇದು ನಮ್ಮವ್ವ ಕನ್ರೀ! ನೀವು ಯಂಗೆ ಕರಕೋದೀರಿ?’ ಅಂತ ಎಳೆದಾಡಿದ್ರು ಕಪ್ಪ’.

‘ಇದ್ಯಾಕೋ ಊರ್ಜಿತಾಯ್ತಿಲ್ಲ’.

‘ಹ್ಞೂಂ ಕಪ್ಪಾ, ಇನ್ಯಾರೋ ಬಂದು ‘ನಾವು ಮಣ್ಣಿನ ಮಕ್ಕಳು. ಸತ್ಯವೇ ನಮ್ಮವ್ವ, ಧಮ್ಮಿದ್ರೆ, ತಾಕತ್ತಿದ್ರೆ ಕರಕೋಗ್ರಿ’ ಅಂತ ಮೂರು ಗುಂಪೂ ಬೋದಾಡಕ್ಕೆ ನಿಂತುಬುಟ್ವೋ’ ಅಂತ ನೊಂದ್ಕತ್ತು.

‘ಸರಿ ಕವ್ವಾ ಈಗ ನಾನೇನು ಮಾಡನೆ?’ ಅಂತ ಕೇಳಿದೆ.

‘ನನ್ನಪ್ಪ, ರಾಜಕೀಯದೋರಿಗೆ ಸುಳ್ಳೇ ಮನೆ ದೇವರಾಗ್ಯದೆ. ಇವರು ನನ್ನ ಗಾವು ಥರ ಸಿಗಿಯಕ್ಕೆ ಮೊದಲು ಇಲ್ಲಿಂದ ಕರಕೋಗಪ್ಪಾ’ ಅಂತ ಗೋಗರೆಯಿತು ಸತ್ಯಮ್ಮ. ಅಷ್ಟರಲ್ಲಿ ಯಾರೋ ‘ಸತ್ಯಮ್ಮ ಇಲ್ಲಿದ್ದಂಗದಾ!’ ಅಂತಿದ್ದಂಗೇ ಸತ್ಯಮ್ಮ ಪಣ್ಣನೆ ಮಾಯವಾಗೋಯ್ತು.

ದಿನದ ಟ್ವೀಟ್

ನ್ಯಾಯ ಬೇಕಾಗಿದೆ



ಲಖೀಂಪುರ ಖೀರಿ ಪ್ರಕರಣದ ಹುತಾತ್ಮರಿಗೆ ಸಿಗಬೇಕಾದ ನ್ಯಾಯಕ್ಕಾಗಿ ನಾವು ಆಗ್ರಹಿಸುತ್ತೇವೆ! ಜೊತೆಗೆ, ಒಂದು ವರ್ಷದಿಂದ ಜೈಲುಗಳಲ್ಲಿ ಇರಿಸಿರುವ ರೈತರನ್ನು ಬಿಡುಗಡೆ ಮಾಡಬೇಕು.
#Justice4LakhimpurFarmers #kisanektazindabaad

ಯುವರಾಜ್ ಮಟ್ಟು, ಎನ್‌ಎಸ್‌ಯುಐ ರಾಜ್ಯ ಕಾರ್ಯದರ್ಶಿ, ದೆಹಲಿ

ಕಿಡಿನುಡಿ



ಖರ್ಗೆ ಅವರ ಹಿಂದೆ ಸಾಲುಗಟ್ಟಿ ನಿಲ್ಲುತ್ತಿರುವ ಕಾಂಗ್ರೆಸ್ ನಾಯಕರು, ಶಶಿ ತರೂರ್ ಅವರನ್ನು ‘ಎಲೀಟಿಸ್ಟ್’ ಎಂದು ಕರೆಯುತ್ತಿದ್ದಾರೆ. ಚೆನ್ನಾಗಿ ಇಂಗ್ಲಿಷ್ ಮಾತನಾಡುವುದು, ಜಾಗತಿಕ ದೃಷ್ಟಿಕೋನವನ್ನು ಹೊಂದಿರುವುದು, ಸಾಂವಿಧಾನಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಯಾವಾಗ ‘ಎಲೀಟಿಸ್ಟ್’ ಆಯಿತು? ಹಾಗಿದ್ದರೆ, ನಮ್ಮ ಅನೇಕ ಅತ್ಯುನ್ನತ ಸ್ವಾತಂತ್ರ್ಯ ಹೋರಾಟಗಾರರೂ ಆ ವರ್ಗದವರೇ ಆಗಿರುತ್ತಾರೆ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 4-10-1997

● **ಭಾರತ – ಪಾಕ್ ಮಾತುಕತೆಗೆ ಅಮೆರಿಕ ಬೆಂಬಲ**

ನ್ಯೂಯಾರ್ಕ್, ಅಕ್ಟೋಬರ್ 3 (ಪಿಟಿಐ)– ಮಾತುಕತೆ ಮೂಲಕ ಭಿನ್ನಾಭಿಪ್ರಾಯಗಳನ್ನು ಭಾರತ ಹಾಗೂ ಪಾಕಿಸ್ತಾನವು ಪರಿಹರಿಸಿಕೊಳ್ಳಲು ತನ್ನ ಬೆಂಬಲವನ್ನು ಪುನರುಚ್ಚರಿಸಿರುವ ಅಮೆರಿಕವು, ಈ ದೇಶಗಳ ದ್ವಿಪಕ್ಷೀಯ ಮಾತುಕತೆಯಲ್ಲಿ ಹಸ್ತಕ್ಷೇಪ ಮಾಡುವ ಇಚ್ಛೆ ತನಗಿಲ್ಲ ಎಂದು ಮತ್ತೆ ಘೋಷಿಸಿದೆ.

‘ಆದರೂ ಉಭಯ ದೇಶಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ತಾನೇನು ಮಾಡಲು ಸಾಧ್ಯವೋ ಅದಕ್ಕೆ ಸಿದ್ಧ’ ಎಂಬ ಅಮೆರಿಕದ ನಿಲುವನ್ನು ಅದರ ವಿದೇಶಾಂಗ ಕಾರ್ಯದರ್ಶಿ ಮೆಡಿಲಿನ್ ಆಲ್‌ಬ್ರೈಟ್ ಅವರು ನಿನ್ನೆ ತಮ್ಮನ್ನು ಭೇಟಿ ಮಾಡಿದ ಪಾಕಿಸ್ತಾನದ ವಿದೇಶಾಂಗ ಸಚಿವ ಗೊಹರ್ ಅಯೂಬ್ ಖಾನ್ ಅವರಿಗೆ ಇಲ್ಲಿ ಸ್ಪಷ್ಟಪಡಿಸಿದರು.

● **ಚುನಾವಣೆ: ಶಿಕ್ಷೆ ವಿವರ ಮುಚ್ಚಿಟ್ಟರೆ ಜೈಲು**

ಮುಂಬೈ, ಅಕ್ಟೋಬರ್ 3 (ಪಿಟಿಐ)– ‘ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣಪತ್ರದಲ್ಲಿ ತಾವು ಹಿಂದೆ ಅನುಭವಿಸಿರುವ ಶಿಕ್ಷೆ ಬಗ್ಗೆ ಮಾಹಿತಿಗಳನ್ನು ಮುಚ್ಚಿಟ್ಟರೆ ಅಂಥವರು ಭಾರತೀಯ ದಂಡ ಸಂಹಿತೆ ಅನ್ವಯ 3 ವರ್ಷಗಳವರೆಗೆ ಜೈಲು ಶಿಕ್ಷೆ ಅನುಭವಿಸಬೇಕಾದೀತು’ ಎಂದು ಚುನಾವಣಾ ಆಯುಕ್ತ ಜಿ.ವಿ.ಜಿ. ಕೃಷ್ಣಮೂರ್ತಿ ಎಚ್ಚರಿಕೆ ನೀಡಿದ್ದಾರೆ.

ಇಲ್ಲಿನ ರಾಜಭವನದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದರು.

50 ವರ್ಷಗಳ ಹಿಂದೆ

ಬುಧವಾರ, 4-10-1972

● **ಅಭಾವ ಪರಿಸ್ಥಿತಿ ಕಾರಣ ದಸರಾ ಮೆರವಣಿಗೆ, ಪಂಜಿನ ಪರೇಡ್ ರದ್ದು**

ಬೆಂಗಳೂರು, ಅಕ್ಟೋಬರ್ 3– ಮೈಸೂರಿನಲ್ಲಿ ದಸರಾ ಉತ್ಸವದ ಅಂಗವಾಗಿ ವಿಜಯ ದಶಮಿ ದಿನ ನಡೆಸಲು ಉದ್ದೇಶಿಸಲಾಗಿದ್ದ ಮೆರವಣಿಗೆ ಮತ್ತು ಪಂಜಿನ ಪರೇಡ್ ಅನ್ನು ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿ ಕಾರಣ ರದ್ದುಗೊಳಿಸಲಾಗಿದೆ.

ಅನಾವೃಷ್ಟಿಯ ಪರಿಣಾಮವಾಗಿ ದಸರಾ ಉತ್ಸವ ಸಂಬಂಧದ ವೆಚ್ಚವನ್ನು ಕಡಿಮೆ ಮಾಡಲು ನಿರ್ಧರಿಸಲಾಗಿದೆ.

ಇಂದು ಇಲ್ಲಿ ಸೇರಿದ್ದ ಉತ್ಸವ ಸಮಿತಿಯ ತುರ್ತು ಸಭೆಯಲ್ಲಿ ಕೈಗೊಂಡ ಈ ನಿರ್ಧಾರಗಳನ್ನು ಸಮಿತಿಯ ಅಧ್ಯಕ್ಷ ಹಾಗೂ ಕಾರ್ಮಿಕ ಸಚಿವ ಅಜೀಜ್ ಸೇಠ್‌ರವರು ಸಂಜೆ ಸುದ್ದಿಗಾರರಿಗೆ ತಿಳಿಸಿದರು.

● **‘ಭಾರತದ ಶಾಂತಿಪರ, ಮೈತ್ರಿ ನೀತಿಗೆ ಹೊಸ ಸಮರ್ಥನೆ ಅನಗತ್ಯ’**

ಬೊಕಾರೋ, ಅಕ್ಟೋಬರ್ 3– ಪಾಕಿಸ್ತಾನವೂ ಸೇರಿ ಎಲ್ಲ ರಾಷ್ಟ್ರಗಳೊಡನೆಯೂ ಮೈತ್ರಿಯಿಂದಿರಬೇಕೆಂಬುದೇ ಭಾರತದ ಅಪೇಕ್ಷೆ; ಅದಕ್ಕೆ ಹೊಸ ಸಮರ್ಥನೆ ಅನಗತ್ಯ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಪುನಃ ಒತ್ತಿ ನುಡಿದರು.

ಈ ಉಕ್ಕು ಕಾರ್ಖಾನೆಯ ನಗರದಲ್ಲಿ ಎರಡೂವರೆ ಲಕ್ಷಕ್ಕಿಂತ ಹೆಚ್ಚು ಜನರು ಸೇರಿದ್ದ ಸಭೆಯಲ್ಲಿ ಭಾಷಣ ಮಾಡಿದ ಅವರು, ಭಾರತ ಉಪಖಂಡದಲ್ಲಿ ಶಾಂತಿ ಸ್ಥಾಪನೆ ವಿಷಯದಲ್ಲಿ ಭಾರತಕ್ಕೆ ಅಷ್ಟು ಆಸಕ್ತಿ ಇಲ್ಲವೆಂಬ ಹಾಗೂ ಅದಕ್ಕೆ ಆತ್ಮಸಾಕ್ಷಿಯಾಗಿ ಪಾಕಿಸ್ತಾನದ ಜತೆ ಮೈತ್ರಿಯ ಅಭಿಲಾಷೆ ಇಲ್ಲವೆಂಬ ಪತ್ರಿಕಾ ವರದಿಗಳನ್ನು ಪ್ರಸ್ತಾಪಿಸಿದರು.

ಸಂಗತ

ಮಕ್ಕಳ ಪಾಲನೆ: ಸಾಂಸ್ಕೃತಿಕ ಲೋಕದ ಹೊಣೆ!

ಮಕ್ಕಳ ಮನೋವಿಕಾಸಕ್ಕೆ ಸಹಾಯಕವಾಗುವಂತಹ ಸಾಹಿತ್ಯ ಮತ್ತು ಸಿನಿಮಾಗಳು ಕನ್ನಡ ಭಾಷೆಯಲ್ಲಿ ಸಮೃದ್ಧವಾಗಿ ರಚನೆಯಾಗಬೇಕಾಗಿದೆ

• ರಾಜಕುಮಾರ ಕುಲಕರ್ಣಿ

ಮಕ್ಕಳ ಮೊಬೈಲ್ ಗೀಳು ಕೊರೊನಾ ನಂತರದ ಕಾಲದ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಕೊರೊನಾ ಸಂದರ್ಭದ ಅನಿವಾರ್ಯ ಈಗ ಸಂಕಷ್ಟವಾಗಿ ರೂಪಾಂತರಗೊಂಡಿದೆ. ಸದ್ಯದ ಪರಿಸ್ಥಿತಿಯಲ್ಲಿ ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಬೇಕಾದ ಮಹತ್ವದ ಜವಾಬ್ದಾರಿ ಪಾಲಕರು ಮತ್ತು ಶಿಕ್ಷಕರದು ಮಾತ್ರವಲ್ಲದೆ ಸಾಂಸ್ಕೃತಿಕ ಲೋಕ ಕೂಡ ಈ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿದೆ. ಅತ್ಯುತ್ತಮ ಪುಸ್ತಕಗಳ ಓದು ಹಾಗೂ ಸದಭಿರುಚಿಯ ಸಿನಿಮಾಗಳ ವೀಕ್ಷಣೆಗೆ ಮಕ್ಕಳನ್ನು ಒಳಗಾಗಿಸುವುದು ಈ ಸಮಸ್ಯೆಯ ಪರಿಹಾರಕ್ಕಿರುವ ಒಂದು ಸೂಕ್ತ ಮಾರ್ಗ.

‘ಯೌವನದ ದಿನಗಳಲ್ಲಿ ಮಾಡಿದ ತಪ್ಪನ್ನು ಒಪ್ಪಿಕೊಂಡು ಪ್ರಾಯಶ್ಚಿತ್ತ ಹೊಂದಲು ಬಾಲ್ಯದಲ್ಲಿ ಓದಿದ ಉತ್ತಮ ಪುಸ್ತಕಗಳು, ನೋಡಿದ ನಾಟಕಗಳ ಪ್ರಭಾವ ನನಗೆ ನೆರವಾಯಿತು’ ಎಂದು ಗಾಂಧೀಜಿ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಆತಂಕದ ಸಂಗತಿ ಎಂದರೆ, ಮಕ್ಕಳ ಮಾನಸಿಕ ವಿಕಾಸಕ್ಕೆ ನೆರವಾಗಬಲ್ಲ ಪುಸ್ತಕಗಳು ಮತ್ತು ಸಿನಿಮಾಗಳ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ.

ಮಕ್ಕಳ ಮನೋವಿಕಾಸದ ನಿರ್ಮಾಣದಲ್ಲಿ ಸಾಹಿತ್ಯ ಮತ್ತು ಸಿನಿಮಾದ ಪಾತ್ರ ಅತ್ಯಂತ ಮಹತ್ವದ್ದು. ಶಾಲೆಯು ನಾಲ್ಕು ಗೋಡೆಗಳ ನಡುವೆ ಮಗುವಿನ ವ್ಯಕ್ತಿತ್ವವನ್ನು ರೂಪಿಸುವ ಒಂದು ವ್ಯವಸ್ಥೆಯಾದರೆ, ಸಿನಿಮಾ ಮತ್ತು ಸಾಹಿತ್ಯವು ಆ ಗೋಡೆಗಳ ಹೊರಗೆ ಮಗುವಿನ ವ್ಯಕ್ತಿತ್ವವನ್ನು ರೂಪಿಸುತ್ತವೆ. ಜೊತೆಗೆ ಅತ್ಯುತ್ತಮ ಶಿಕ್ಷಕರಂತೆ ಮಕ್ಕಳ ಸರ್ವಾಂಗೀಣ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಮಕ್ಕಳನ್ನು ಸಾಹಿತ್ಯದ ಓದುಗರನ್ನಾಗಿಸುವುದು ಅತ್ಯಂತ ಅವಶ್ಯಕವಾಗಿದೆ. ಸಾಹಿತ್ಯದ ಮೂಲಕವೇ ಮಗು ಪ್ರೀತಿ ಮತ್ತು ಅಂತಃಕರಣ ತುಂಬಿರುವ ಭಾಷೆಯನ್ನು ಕಲಿಯಬೇಕಿದೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ಜೋಸೆಫ್ ಬ್ರಾಡ್‌ಸ್ಕಿ ‘ಸಾಹಿತ್ಯದಲ್ಲಿ ಭಾಷೆ ಬಳಕೆಯಾಗುವುದಿಲ್ಲ, ಸೃಷ್ಟಿಯಾಗುತ್ತದೆ’ ಎನ್ನುತ್ತಾರೆ.

ಒಂದು ಕಾಲದಲ್ಲಿ ಕನ್ನಡ ಭಾಷೆಯಲ್ಲಿ ಸಮೃದ್ಧವಾಗಿ ಮಕ್ಕಳ ಪುಸ್ತಕಗಳು ಪ್ರಕಟಗೊಂಡಿವೆ. ಎಂ.ಎಸ್. ಪುಟ್ಟಣ್ಣನವರ ‘ನೀತಿ ಚಿಂತಾಮಣಿ’, ಕುವೆಂಪು ಅವರ ‘ಬೊಮ್ಮನಹಳ್ಳಿಯ ಕಿಂದರಿಜೋಗಿ’ ಮತ್ತು ‘ಮೋಡಣ್ಣನ ತಮ್ಮ’ ಮಕ್ಕಳ ಮೆಚ್ಚಿನ ಕೃತಿಗಳಾಗಿವೆ. ಪಂಜೆ ಮಂಗೇಶರಾಯರು, ಶಿವರಾಮ ಕಾರಂತ, ಜಿ.ಪಿ.ರಾಜರತ್ನಂ, ನಾ.ಕಸ್ತೂರಿ, ಚಿ.ಸದಾಶಿವಯ್ಯ, ಸಿಸು ಸಂಗಮೇಶ, ಜಯವಂತ ಕಾಡದೇವರ, ಕಂಚ್ಯಾಣಿ ಶರಣಪ್ಪ ಅವರು ಕನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದವರಲ್ಲಿ ಪ್ರಮುಖರು. ಎ.ಆರ್. ಕೃಷ್ಣಶಾಸ್ತ್ರಿಯವರ ‘ನಿರ್ಮಲ ಭಾರತೀ’ ಕೃತಿಯು ಮಕ್ಕಳ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ಎಂದು ಪರಿಗಣಿತವಾಗಿದೆ. ಅನುಪಮಾ ನಿರಂಜನ ಅವರ ‘ದಿನಕ್ಕೊಂದು ಕಥೆ’ ಮಕ್ಕಳಿಗಾಗಿ ಬರೆದ 365 ಕಥೆಗಳ ಸಂಪುಟ. ಶಿವರಾಮ ಕಾರಂತರು ‘ಬಾಲ ಪ್ರಪಂಚ’ದ ಮೂಲಕ ಮಕ್ಕಳಿಗಾಗಿ ವಿಜ್ಞಾನಲೋಕದ ವಿಸ್ಮಯಗಳನ್ನು ಮನೆ ಮನೆಗೂ ಮುಟ್ಟಿಸಿದರು.

ಪರಂಪರೆಯ ಸಮೃದ್ಧ ಹಿನ್ನೆಲೆ ಇರುವ ಮಕ್ಕಳ ಸಾಹಿತ್ಯ ಈಗ ನಿಂತ ನೀರಾಗಿದೆ. ಜನಪ್ರಿಯ ಮಾದರಿಯನ್ನು ಮೈಗೂಡಿಸಿಕೊಂಡಿರುವ ಕನ್ನಡ ಸಾಹಿತ್ಯವಲಯ ಮಕ್ಕಳ ಆಸಕ್ತಿ ಮತ್ತು ಅಭಿರುಚಿಯ ಕಡೆಗೆ ಗಮನ ನೀಡುತ್ತಿಲ್ಲ. ಪತ್ರಿಕೆಗಳಲ್ಲಿ ಅರ್ಧ ಪುಟಕ್ಕಷ್ಟೇ ಮಕ್ಕಳ ಸಾಹಿತ್ಯ ಸೀಮಿತವಾಗುತ್ತಿದೆ. ಸಾಹಿತ್ಯ ಸಮ್ಮೇಳನಗಳ ಕಾರ್ಯಕ್ರಮಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ವೇದಿಕೆ ದೊರೆಯುತ್ತಿಲ್ಲ. ಈ ಮೊದಲು ಪ್ರಕಟವಾದ ಮಕ್ಕಳ ಪುಸ್ತಕಗಳನ್ನು ಪುನರ್ ಮುದ್ರಿಸುವ ಕೆಲಸಕ್ಕೆ ಸಾಹಿತ್ಯ ಪರಿಷತ್ತು ಚಾಲನೆ ನೀಡಬೇಕಿದೆ.



ಇನ್ನು ಮಕ್ಕಳ ಸಿನಿಮಾ ವಿಷಯದಲ್ಲಿ ಆಶಾದಾಯಕ ಬೆಳವಣಿಗೆ ಕಾಣಿಸುತ್ತಿಲ್ಲ. ‘ಪುಟಾಣಿ ಏಜೆಂಟ್ 1 2 3’, ‘ಸಿಂಹದ ಮರಿಸೈನ್ಯ’, ‘ಮಕ್ಕಳಸೈನ್ಯ’, ‘ಬೆಟ್ಟದ ಹೂವು’, ‘ನಾಗರಹೊಳೆ’, ‘ಚಿನ್ನಾರಿಮುತ್ತ’ದಂತಹ ಅತ್ಯುತ್ತಮ ಮಕ್ಕಳ ಸಿನಿಮಾಗಳು ನಿರ್ಮಾಣಗೊಂಡ ಕನ್ನಡ ಭಾಷೆಯಲ್ಲಿ ಈಗ ಮಕ್ಕಳ ಸಿನಿಮಾಗಳ ಕ್ಷಾಮ ದಟ್ಟವಾಗಿ ಆವರಿಸಿದೆ. ಮಕ್ಕಳ ಸಿನಿಮಾದಲ್ಲಿನ ‘ಸ್ವಾಮಿದೇವನೆಲೋಕಪಾಲನೆ’ ಎನ್ನುವ ಹಾಡು ಒಂದು ಕಾಲದಲ್ಲಿ ಶಾಲೆಗಳಲ್ಲಿ ಪ್ರಾರ್ಥನಾ ಗೀತೆಯಾಗಿತ್ತು. ಡಾ. ರಾಜ್‌ಕುಮಾರ್ ಅವರಂತಹ ಜನಪ್ರಿಯ ಕಲಾವಿದ ಮಕ್ಕಳ ಸಿನಿಮಾದ ಪ್ರಾಮುಖ್ಯವನ್ನು ಅರಿತು ‘ಭಕ್ತ ಪ್ರಹ್ಲಾದ’ ಮತ್ತು ‘ಎರಡು ನಕ್ಷತ್ರಗಳು’ ಎನ್ನುವ ಮಕ್ಕಳ ಸಿನಿಮಾಗಳಲ್ಲಿ ನಟಿಸಿದರು.

ಇತ್ತೀಚಿನ ಮಕ್ಕಳ ಸಿನಿಮಾಗಳು ಮಕ್ಕಳ ಅಭಿರುಚಿ ಮತ್ತು ಆಸಕ್ತಿಗೆ ಪೂರಕವಾಗಿ ನಿರ್ಮಾಣವಾಗುತ್ತಿಲ್ಲ. ಬಾಲಕಲಾವಿದರು ಅಭಿನಯಿಸುತ್ತಿರುವ ಪಾತ್ರಗಳು ವಾಸ್ತವಿಕತೆಗೆ ದೂರವಾಗಿರುತ್ತವೆ. ಬಾಲಕ, ಬಾಲಕಿಯ ನಡುವೆ ಪ್ರೇಮಾಂಕುರ, ಚಿಕ್ಕವಯಸ್ಸಿನಲ್ಲಿ ಅಪರಾಧ ಪ್ರಪಂಚ ಪ್ರವೇಶಿಸುವುದು, ಅಪಾಯಕಾರಿ ಆಯುಧಗಳನ್ನು ಬಳಸುವಂತಹ ದೃಶ್ಯಗಳಲ್ಲಿ ಅಭಿನಯಿಸಲು ಬಾಲಕಲಾವಿದರನ್ನು ಬಳಸಿಕೊಳ್ಳಲಾಗುತ್ತಿದೆ. ಮಕ್ಕಳ ಮನೋವಿಕಾಸಕ್ಕೆ ಪೂರಕವಾದ ಸಿನಿಮಾಗಳ ಸಂಖ್ಯೆ ಕ್ಷೀಣಿಸುತ್ತಿದೆ.

ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳು ಮನರಂಜನೆಯ ಹೆಸರಿನಲ್ಲಿ ಮಕ್ಕಳನ್ನು ದಾರಿ ತಪ್ಪಿಸುತ್ತಿವೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಮಕ್ಕಳ ಮನೋವಿಕಾಸಕ್ಕೆ ಸಹಾಯಕವಾಗುವಂತಹ ಮಕ್ಕಳ ಸಾಹಿತ್ಯ ಮತ್ತು ಸಿನಿಮಾಗಳು ಕನ್ನಡ ಭಾಷೆಯಲ್ಲಿ ಸಮೃದ್ಧವಾಗಿ ರಚನೆಯಾಗಬೇಕು. ಅಂತಹ ಸಿನಿಮಾ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸಿ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಬೆಳೆಸುವ ಹೊಣೆಗಾರಿಕೆ ಮತ್ತು ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ವಾಚಕರ ವಾಣಿ

ರಾಜ್ಯ ಸರ್ಕಾರ ಈಗಲಾದರೂ ಬದ್ಧತೆ ಪ್ರದರ್ಶಿಸಲಿ

ಬಳ್ಳಾರಿ ಮೀಸಲು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಹಾದುಹೋಗಿರುವ ಕರ್ನಾಟಕ– ಆಂಧ್ರಪ್ರದೇಶ ಅಂತರರಾಜ್ಯ ಗಡಿಯ ಗುರುತುಗಳು ಅಕ್ರಮ ಗಣಿಗಾರಿಕೆಯಿಂದ ನಾಶವಾಗಿ 15 ವರ್ಷಗಳಿಗೂ ಹೆಚ್ಚು ಕಾಲ ಆಗಿದೆ. ಅಕ್ರಮ ಗಣಿಗಾರಿಕೆಯ ಪರಿಣಾಮವಾಗಿ ಎರಡೂ ರಾಜ್ಯಗಳ ನಡುವಿನ ಗಡಿಯೇ ಕಣ್ಮರೆಯಾಗಿದೆ. ಇದರಿಂದ ಕರ್ನಾಟಕಕ್ಕೆ ಅಪಾರ ನಷ್ಟವಾಗಿದೆ ಎಂಬುದನ್ನು ಲೋಕಾಯುಕ್ತ, ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಸಿಬಿಐ ತನಿಖೆಗಳು ರುಜುವಾತುಪಡಿಸಿವೆ. 15 ವರ್ಷಗಳ ಬಳಿಕ ಸ್ಥಳದಲ್ಲಿ ಗಡಿ ಗುರುತಿಸಲು ಆರು ವಾರಗಳ ಗಡುವನ್ನು ಸುಪ್ರೀಂ ಕೋರ್ಟ್ ವಿಧಿಸಿರುವ ಸುದ್ದಿ ಹೊರಬಿದ್ದಿದೆ (ಪ್ರ.ವಾ., ಅ. 3).

ಅಂತರರಾಜ್ಯ ಗಡಿ ಗುರುತಿಸಲು 2010ರಿಂದಲೂ ಹಲವು ಆದೇಶಗಳಾದರೂ ಈವರೆಗೂ ಪ್ರಕ್ರಿಯೆ ಪೂರ್ಣಗೊಂಡಿಲ್ಲ. 2021ರ ಫೆಬ್ರುವರಿಯಲ್ಲೇ ಸರ್ವೆ ಪೂರ್ಣಗೊಂಡಿದ್ದರೂ ಕರ್ನಾಟಕವು ನಕ್ಷೆಗೆ ಸಹಿ ಮಾಡದೇ ಇದ್ದ ಕಾರಣ ಸ್ಥಳದಲ್ಲಿ ಗಡಿ ಗುರುತುಗಳನ್ನು ಅಳವಡಿಸುವ ಕೆಲಸ ಆಗಿರಲಿಲ್ಲ. ಈಗ ರಾಜ್ಯ ಸರ್ಕಾರದ ಪರವಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ನಿಖಿಲ್ ಗೋಯಲ್ ಅವರೇ ಆರು ವಾರಗಳಲ್ಲಿ ಗಡಿ ಗುರುತಿಸುವ ಕೆಲಸ ಪೂರ್ಣಗೊಳಿಸುವುದಾಗಿ ಸುಪ್ರೀಂ ಕೋರ್ಟ್ ಮುಂದೆ ಒಪ್ಪಿಕೊಂಡಿದ್ದಾರೆ. ಈ ವಿಚಾರದಲ್ಲಿ ವಿಳಂಬ ಆಗದಂತೆ ರಾಜ್ಯ ಸರ್ಕಾರ ಎಚ್ಚರಿಕೆ ವಹಿಸಬೇಕು.

ಅಂತರರಾಜ್ಯ ಗಡಿ ಗುರುತಿಸುವ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು. ಗಡಿ ಭಾಗದಲ್ಲಿ ನಡೆದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಬಾಕಿ ಇರುವ ತನಿಖೆಯನ್ನು ಪೂರ್ಣಗೊಳಿಸುವುದಕ್ಕೂ ಅಗತ್ಯ ಕ್ರಮ ವಹಿಸಬೇಕು. ಗಡಿ ನಾಶ ಮತ್ತು ಅಕ್ರಮ ಗಣಿಗಾರಿಕೆ ಮೂಲಕ ನಷ್ಟ ಉಂಟುಮಾಡಿದವರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು.

ಸಿದ್ದಪ್ಪ ಎಚ್., ಬಳ್ಳಾರಿ

ವಿನೂತನ ವಿಧಾನವಷ್ಟೇ ಸಾಲದು

ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಬಿಜೆಪಿ ಶಾಸಕ ಅರವಿಂದ ಬೆಲ್ಲದ ಅವರು ಹುಬ್ಬಳ್ಳಿಯ ಗಾಮನಗಟ್ಟಿಯಲ್ಲಿ ಪೌರಕಾರ್ಮಿಕರ ಪಾದಪೂಜೆ ಮಾಡಿದ ಚಿತ್ರ ಪ್ರಕಟವಾಗಿದೆ (ಪ್ರ.ವಾ., ಅ. 3). ಇದು, ಸಮಾಜದಲ್ಲಿ ಪೌರಕಾರ್ಮಿಕರನ್ನು ಗೌರವದಿಂದ ಕಾಣಬೇಕು ಎಂಬ ಸಂದೇಶ ಕೊಡುತ್ತದೆ, ಗೌರವಿಸೋಣ. ಆದರೆ, ಸಾರ್ವಜನಿಕವಾಗಿ ಆಚರಿಸುವ ಜನ್ಮದಿನಗಳಲ್ಲಿ ವಿನೂತನ ವಿಧಾನವನ್ನಷ್ಟೇ ಅನುಸರಿಸಿದರೆ ಸಾಲದು. ಇಂಥ ಸಂದರ್ಭವನ್ನು ಸಾಮಾಜಿಕ ಬದಲಾವಣೆಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಚಿಂತನೆಗಳಾಗಬೇಕು.

ಈ ದಿಸೆಯಲ್ಲಿ, ಮುಂದಿನ ವರ್ಷದ ಮೋದಿಯವರ ಜನ್ಮದಿನಾಚರಣೆಯಂದು ಅವರ ಅನುಯಾಯಿಗಳು ದಿನವಿಡೀ ಪೌರಕಾರ್ಮಿಕರೊಂದಿಗೆ ಸೇರಿ ಸ್ವಚ್ಛತೆ ಕಾರ್ಯದಲ್ಲಿ ತೊಡಗುವುದು, ಅವರಿಗೆ ಮಾಸ್ಕ್ ಮತ್ತು ಕೈಗವಸಿನಂತಹ ಸುರಕ್ಷಾ ಸಾಧನಗಳನ್ನು ಒದಗಿಸುವುದು, ಅವುಗಳ ಬಳಕೆಯಿಂದ ಆಗುವ ಪ್ರಯೋಜನಗಳ ಬಗ್ಗೆ ಅರಿವನ್ನು ಉಂಟು ಮಾಡುವಂತಹ ಕೆಲಸಗಳಲ್ಲಿ ತೊಡಗಿದರೆ ಹೆಚ್ಚು ಪ್ರಯೋಜನವಾಗುತ್ತದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಇತಿಹಾಸ ಓದಲಿ, ಟೀಕೆ ಸಲ್ಲದು

ಜಗತ್ತು ಕಂಡ ಮಹಾನ್ ನಾಯಕರಲ್ಲಿ ಗಾಂಧೀಜಿ ಅಗ್ರಸ್ಥಾನದಲ್ಲಿದ್ದಾರೆ. ತಮ್ಮ ಜೀವನದುದ್ದಕ್ಕೂ ಸತ್ಯ, ಅಹಿಂಸೆಯ ಪಾಠವನ್ನು ಇಡೀ ಜಗತ್ತಿಗೆ ಸಾರಿದವರು ಅವರು. ಗಾಂಧೀಜಿಯ ಹತ್ಯೆಯಾದಾಗ ವಿಶ್ವಸಂಸ್ಥೆಯು ಭಾರತದ ಧ್ವಜದ ಜೊತೆಗೆ ಜಗತ್ತಿನ ಎಲ್ಲ ದೇಶಗಳ ಧ್ವಜಗಳನ್ನು ಮತ್ತು ತನ್ನ ಧ್ವಜವನ್ನು ಅರ್ಧಕ್ಕೆ ಇಳಿಸಿ ಮಹಾತ್ಮನಿಗೆ ಗೌರವ ಸಲ್ಲಿಸಿತು. ಒಂದು ದೇಶದ ರಾಷ್ಟ್ರಪತಿ ಅಥವಾ ಪ್ರಧಾನಮಂತ್ರಿ ಮರಣ ಹೊಂದಿದಾಗ ವಿಶ್ವಸಂಸ್ಥೆಯು ಆ ದೇಶದ ಧ್ವಜವನ್ನು ಮಾತ್ರ ಅರ್ಧಕ್ಕೆ ಇಳಿಸಿ ಗೌರವ ಸೂಚಿಸುತ್ತದೆ. ಆದರೆ ಯಾವ ಅಧಿಕಾರವೂ ಇರದಿದ್ದ ಗಾಂಧೀಜಿಗೆ ದೊರೆತ ಆ ಗೌರವ ನಮ್ಮ ದೇಶದ ಹೆಮ್ಮೆ.

ಭಾರತದ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್ ಮೌಂಟ್ ಬ್ಯಾಟನ್, ‘ಗಾಂಧೀಜಿಯನ್ನು ನೋಡಿದರೆ ನನಗೆ ಜೀಸಸ್ ನೆನಪಾಗುತ್ತಾರೆ’ ಎಂದಿದ್ದರು. ಆದರೆ ಇಂದು, ಗಾಂಧೀಜಿ ಬಗ್ಗೆ ಪರಿಪೂರ್ಣವಾಗಿ ಅರಿಯದೆ, ಕೆಲವರು ರಾಜಕೀಯ ಲಾಭಕ್ಕಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುವ ಅಪಕ್ವ ಮಾಹಿತಿಯನ್ನು ಆಧರಿಸಿ ಗಾಂಧಿ ಅವರನ್ನು ಟೀಕೆ ಮಾಡುವ ಪರಿಪಾಟ ಹೆಚ್ಚಿದೆ. ನಮ್ಮ ರಾಜಕೀಯ ನಾಯಕರಂತೂ ಇತಿಹಾಸ ಓದಿದಂತೆ ಕಾಣುವುದಿಲ್ಲ. ಜೂನಿಯರ್ ಮಾರ್ಟಿನ್ ಲೂಥರ್ ಕಿಂಗ್, ‘ನನಗೆ ಇಬ್ಬರು ದೇವರು. ಒಬ್ಬರು ನನಗೆ ಬದುಕು ಕೊಟ್ಟ ಜೀಸಸ್, ಇನ್ನೊಬ್ಬರು ನನಗೆ ಬದುಕುವ ರೀತಿಯನ್ನು ತೋರಿಸಿಕೊಟ್ಟ ಗಾಂಧೀಜಿ’ ಎಂದು ಹೇಳಿದ್ದರು. ಇಂತಹ ಮಹಾನ್ ನಾಯಕನನ್ನು ಇಡೀ ಜಗತ್ತೇ ಗೌರವದಿಂದ ಕಾಣುತ್ತಿರುವಾಗ, ನಾವೇ ಅವಹೇಳನ ಮಾಡುತ್ತಿರುವುದು ಎಷ್ಟು ಸರಿ?

ಬಸವರಾಜ ನರಗಟ್ಟಿ, ಧಾರವಾಡ

ಬೈನರಿ ಧೋರಣೆ ಮತ್ತು ಮೌಲ್ಯಗಳ ಕುಸಿತ

ಯಂತ್ರಗಳ ಭಾಷೆ ಎಂದು ಪರಿಗಣಿಸಲಾಗಿದ್ದ ಬೈನರಿ ಭಾಷೆಯು ಇಂದು ಮನುಷ್ಯರ ಭಾಷೆಯೂ ಆಗುತ್ತಿರುವುದರ ಕುರಿತ ಎಚ್.ಕೆ.ಶರತ್ ಅವರ ಲೇಖನ (ಸಂಗತ, ಅ. 3) ಅರ್ಥಪೂರ್ಣವಾಗಿದೆ. ಹಣಕ್ಕೆ ಇನ್ನಿಲ್ಲದ ಪ್ರಾಧಾನ್ಯ ದೊರೆತಿರುವುದು, ನೈತಿಕತೆಯಲ್ಲಿ ಆಗಿರುವ ಕುಸಿತ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆ, ಕೂಡು ಕುಟುಂಬ ವ್ಯವಸ್ಥೆ ಶಿಥಿಲಗೊಂಡಿರುವುದು, ಎದುರಿಗೆ ತೆರೆದುಕೊಳ್ಳುತ್ತಿರುವ ಮಾಹಿತಿಯ ರಾಶಿ... ಇವೆಲ್ಲ ಇದಕ್ಕೆ ಕಾರಣವಾಗುವ ಅಂಶಗಳು. ಈ ಬೈನರಿ ಧೋರಣೆಯು ಹತ್ತಿರದವರನ್ನು ಕೂಡ ದೂರ ಮಾಡುತ್ತಿದೆ.

ಪ್ರೊ. ಸಂಜೀವ ದೇಶಪಾಂಡೆ, ಧಾರವಾಡ

Printed and published by B.A.Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಯುಧಪೂಜೆ: ಋಣಮುಕ್ತಿಗೆ ದಾರಿ

• ರಾಮಸುಬ್ರಾಯ ಶೇಟ್



ಮಾನವನು ಗರ್ಭಾವಸ್ಥೆಯಿಂದಲೇ ಒಂದಲ್ಲಾ ಒಂದು ಋಣದಲ್ಲಿ ಬದುಕಬೇಕಾಗುತ್ತದೆ. ಅಮ್ಮನ ಔದಾರ್ಯದಿಂದ ಭೂಮಿಯ ಮೇಲೆ ಬೆಳೆಯುತ್ತಿದ್ದಂತೆ ಪ್ರತಿಯೊಂದು ಹಂತದಲ್ಲಿಯೂ ಪರಾವಲಂಬಿಯಾಗಿಯೇ ಇರುತ್ತಾನೆ; ತಾಯಿಯ ಸಂರಕ್ಷಣೆ, ತಂದೆಯ ಪೋಷಣೆ, ಗುರುಗಳಿಂದ ಅರಿವು, ಉದ್ಯೋಗದಾತರಿಂದ ವೃತ್ತಿ – ಹೀಗೆ ಜೀವಿತದುದ್ದಕ್ಕೂ ಇತರರ ಆಶ್ರಯದಲ್ಲಿಯೇ ಬದುಕುತ್ತಾನೆ. ಈ ರೀತಿಯ ಋಣದ ಭಾರದಲ್ಲಿ ಬದುಕುತ್ತಿರುವ ಮಾನವನಿಗೆ ಆಯುಧಪೂಜೆಯು ಋಣವನ್ನು ತೀರಿಸುವ ಒಂದು ಸಾಧನ ಮತ್ತು ಅವಕಾಶ.

ನವರಾತ್ರಿಯ ಆಶ್ವಿಜಶುದ್ಧ ನವಮಿಯನ್ನು ‘ಆಯುಧಪೂಜೆ’ ಎಂದು ಆಚರಿಸಿದರೂ ಅದು ಕೇವಲ ಶಸ್ತ್ರಾಸ್ತ್ರಗಳ ಪೂಜೆಗೆ ಸೀಮಿತವಾದುದಲ್ಲ. ನಾವು ಪ್ರಯೋಜನ ಪಡೆಯುವ ಎಲ್ಲ ಪದಾರ್ಥಗಳ ಮಹತ್ವವನ್ನು ಸಂಭ್ರಮಿಸುವ ಸಂದರ್ಭ. ಭಾರತದ ಭವ್ಯ ಪರಂಪರೆಯಲ್ಲಿ ಉಪಕಾರ ಸ್ಮರಣೆಗೆ ಹೆಚ್ಚು ಅದ್ಯತೆ ಇದೆ. ನಮ್ಮ ವಿಜಯಕ್ಕೆ ಕಾರಣವಾಗುವ ಬಿಲ್ಲು, ಬಾಣ, ಕತ್ತಿ, ಬಂದೂಕು – ಇವುಗಳನ್ನು ಪೂಜಿಸುವುದು ರಾಜಮಹಾರಾಜರ ಪಾರಂಪರಿಕ ಸಂಪ್ರದಾಯವಾದರೂ, ಇದರ ಅರ್ಥವ್ಯಾಪ್ತಿಯು ಅಗಾಧವಾದ ವಿಸ್ತಾರವನ್ನು ಹೊಂದಿದೆ. ಒಬ್ಬ ರಾಜನಿಗೆ ಅಥವಾ ಯೋಧನಿಗೆ ಆಯುಧವೇ ಪ್ರಧಾನವಾದರೆ, ಒಬ್ಬ ಕೃಷಿಕನಿಗೆ ನೇಗಿಲು ಎತ್ತು ಗಾಡಿಗಳು ಪ್ರಧಾನ ಸಾಧನಗಳು. ಒಬ್ಬ ವಾಹನ ಚಾಲಕನಿಗೆ ವಾಹನವೇ ಅನ್ನನೀಡುವ ಸಾಧನ. ಹಾಗೆಯೇ ವ್ಯಾಪಾರಿಗೆ ಅಳತೆ ಮಾಡುವ ಸಾಧನಗಳು ಮುಖ್ಯವಾದವು. ಇವುಗಳಿಗೆಲ್ಲಾ ಪ್ರತಿನಿತ್ಯ ಪೂಜಿಸುವ ಪರಿಪಾಠವಿದ್ದರೂ, ಈ ದಿನ ವಿಶೇಷ ರೀತಿಯಲ್ಲಿ ಪೂಜಿಸಿ ಕೃತಜ್ಞತೆ ಸಲ್ಲಿಸುವ ಶ್ರೇಷ್ಠ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದೇವೆ. ನಮ್ಮ ಪೂರ್ವಜರು ಎಷ್ಟೋ ಕಾಲದ ಅನುಭವಗಳಿಂದ, ಪ್ರಯೋಗಗಳಿಂದ, ಸಾಧಕ-ಬಾಧಕಗಳಿಂದ ತಿಳಿದು ಶಾಸ್ತ್ರದ ಆಧಾರದ ಮೇಲೆ ನಿಯಮಗಳನ್ನು ರೂಪಿಸಿದ್ದಾರೆ. ಪ್ರತಿಯೊಂದೂ ಎಲ್ಲರ ಒಳಿತಿಗಾಗಿಯೇ ಇದೆಯೇ ವಿನಾ ಕೆಲವೇ ಜನರ ಒಳಿತಿಗಾಗಿ ಅಲ್ಲ.

ಶರನ್ನವರಾತ್ರಿಯ ವಿಶೇಷತೆಯಲ್ಲಿ ದುರ್ಗಾಷ್ಟಮಿಗೆ ಅದರದೇ ಆದ ಮಹತ್ವವಿದೆ. ಜಗನ್ಮಾತೆಯು ಸಜ್ಜನರಿಗೆ ಎಷ್ಟು ಸೌಮ್ಯಳಾಗಿ ಕೃಪೆದೋರುವಳೋ ದುರ್ಜನರಿಗೆ ಅಷ್ಟೇ ಕ್ರೂರಿಯಾಗಿ, ಉಗ್ರರೂಪೀ ಕಾಳಿಯಾಗಿ, ಚಂಡಿಯಾಗಿ, ದುರ್ಗೆಯಾಗುತ್ತಾಳೆ. ಬ್ರಹ್ಮ ವಿಷ್ಣು ಮಹೇಶ್ವರರಿಂದಲೂ ಸಂಹರಿಸಲಾಗದ ಚಂಡ, ಮುಂಡ, ಕೋಲಾಸುರ, ಮಹಿಷಾಸುರ ಮುಂತಾದ ಲೋಕಕಂಟಕರನ್ನು ಸದೆಬಡಿದು ಲೋಕರಕ್ಷಕಳಾಗುತ್ತಾಳೆ. ಹೀಗೆ ದುರ್ಗೆಯನ್ನು ಆರಾಧಿಸಿ ಮರುದಿನ ಆಯುಧಗಳನ್ನೆಲ್ಲಾ ಅಣಿಗೊಳಿಸಿ ಪೂಜಿಸಲಾಗುತ್ತದೆ. ಅದರ ಮರುದಿನ ವಿಜಯದ ಶಮೀಪೂಜೆ ಪೂರೈಸಿ ಗೆಲುವನ್ನು ಸಾಧಿಸುವ ಮಹೋದ್ದೇಶದಿಂದ ವಿಜಯದಶಮಿಯನ್ನು ಆಚರಿಸಲಾಗುತ್ತದೆ. ಹೀಗೆ ಕೃತಜ್ಞತೆಯನ್ನು ಸಲ್ಲಿಸಿ ಋಣಮುಕ್ತರಾಗುವ ಸತ್ಸಂಪ್ರದಾಯ ಹೊಂದಿದ ನಾವೇ ಧನ್ಯರಲ್ಲವೇ? ಬೇರೆ ಬೇರೆ ಕಡೆ ಬೇರೆ ಬೇರೆ ರೀತಿಯ ಪೂಜಾ ವಿಧಾನಗಳಿರಬಹುದು; ಆದರೆ ಉದ್ದೇಶ ಮಾತ್ರ ಒಂದೇ.

ಮಹಾನವಮಿಯ ಮರುದಿನದ ವಿಜಯದಶಮಿಯಂದು ಶ್ರೀರಾಮನು ರಾವಣನ ಮೇಲೆ ವಿಜಯ ಸಾಧಿಸಿದ್ದು ಎಂಬ ನಂಬಿಕೆಯಿದೆ. ಈ ದಿನವೇ ಪಾಂಡವರು ಅಜ್ಞಾತವಾಸ ಪೂರೈಸಿ ಮರಳಿ ಬಂದಿದ್ದರು ಎಂಬ ಪ್ರತೀತಿಯೂ ಇದೆ. ಒಟ್ಟಾರೆ ಜಗನ್ಮಾತೆಯ ಕೃಪೆ ಇದ್ದರೆ, ಸತ್ಕಾರ್ಯಗಳನ್ನು ಸುಲಭದಿಂದ ಸಾಧಿಸಬಹುದು ಎಂಬ ಬೋಧನೆ ಹಬ್ಬದ ಆಚರಣೆಯಲ್ಲಿದೆ. ❖

ಹಿಂಸಾಚಾರಕ್ಕೆ ಆಡಳಿತ ಪಕ್ಷ ಬೆಂಬಲ: ತೀಸ್ತಾ ಆರೋಪ

ಅಹಮದಾಬಾದ್ (ಪಿಟಿಐ): ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿ ದೇಶದಲ್ಲಿ ನಡೆಯುವ ಹಿಂಸಾಚಾರ ಪ್ರಕರಣಗಳಲ್ಲಿ ಸರ್ಕಾರವೇ ಹೊಣೆ ಹೊತ್ತಿರುವುದು ವಿರಳ. ಇಂತಹ ಹಿಂಸಾಚಾರಗಳಲ್ಲಿ ಬದುಕುಳಿದವರು ಮತ್ತು ಇವರನ್ನು ಬೆಂಬಲಿಸುವ ನಾಗರಿಕರು ಪ್ರತಿಕೂಲ ಪರಿಣಾಮ ಎದುರಿಸಬೇಕಾಗಿದೆ ಎಂದು ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ಹೇಳಿದ್ದಾರೆ.

ಭಾನುವಾರ ಇಲ್ಲಿ ನಡೆದ ಗಿರೀಶ್ ಪಟೇಲ್ ಸ್ಮರಣಾಂಜಲಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ಹಿಂಸಾಚಾರದ ಕಥೆ ಶುರುವಾಗುವುದೇ ದ್ವೇಷದ ಭಾಷಣಗಳು ಮತ್ತು ದ್ವೇಷದ ಬರಹಗಳೊಂದಿಗೆ ಎಂದರು.

ಹಿಂಸಾಚಾರ ಮತ್ತು ಅಧಿಕಾರದಲ್ಲಿರುವ ಪಕ್ಷವು ಹಿಂಸಾಚಾರಕ್ಕೆ ತನ್ನ ಬೆಂಬಲ ನೀಡುತ್ತಿರುವ ಪ್ರಕ್ರಿಯೆಗೆ ದೇಶ ಸಾಕ್ಷಿಯಾಗುತ್ತಿದೆ. ಇದಕ್ಕೆ ಹಳೆಯ ಇತಿಹಾಸವೂ ಇದೆ ಎಂದರು.

ಮಹಾತ್ಮ ಗಾಂಧಿ ಕುರಿತು ಮಾತನಾಡಿದ ಅವರು, ಸ್ವಾತಂತ್ರ್ಯ ನಂತರದ ಇತಿಹಾಸ ಪುನಃ ಬರೆಯುವ ಮೊದಲ ಪ್ರಯತ್ನವೆಂದರೆ ಗಾಂಧೀಜಿಯ ಹತ್ಯೆಗೆ ಸಂಬಂಧಿಸಿದ್ದಾಗಿರಲಿದೆ. ದಲಿತ ಮತ್ತು ಹರಿಜನರ ಮೇಲಿನ ದೌರ್ಜನ್ಯಕ್ಕೆ ಪಶ್ಚಾತ್ತಾಪ ಪಡುವಂತೆ ಮತ್ತು ಭಾರತವನ್ನು ಜಾತ್ಯತೀತ ದೇಶವೆಂದು ಕರೆಯುವಂತೆ ಸನಾತನ ಹಿಂದೂ ಧರ್ಮವನ್ನು ಒತ್ತಾಯಿಸಿ ಮಾಡಿದ ಭಾಷಣವೇ ಗಾಂಧಿ ಹತ್ಯೆಗೆ ಕಾರಣವಾಯಿತು ಎಂದರು.

ದೇಶದಲ್ಲಿ ಜೈಲುಗಳ ಸುಧಾರಣೆ, ಜೈಲುಗಳ ಮೇಲ್ವಿಚಾರಣೆ ಹಾಗೂ ಜಾಮೀನುಗಳ ಬಗ್ಗೆ ನ್ಯಾಯಾಲಯಗಳು ಗಮನ ಹರಿಸುವ ಅಗತ್ಯವಿದೆ ಎಂದು ತೀಸ್ತಾ ಹೇಳಿದರು.




ಹಿಂಸಾಚಾರದಲ್ಲಿ ಬದುಕುಳಿದವರು ಅಪರಾಧಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ನಾನಾ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. 1984 (ಸಿಖ್ ದಂಗೆ), 1992 (ಬಾಬರಿ ಮಸೀದಿ ಧ್ವಂಸ) ಮತ್ತು 2002ರ ಗುಜರಾತ್ ಗಲಭೆಯಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಇವು ನಮ್ಮ ಮುಂದಿರುವ ಪ್ರಶ್ನೆಗಳು

ತೀಸ್ತಾ ಸೆಟಲ್‌ವಾಡ್
ಸಾಮಾಜಿಕ ಹೋರಾಟಗಾರ್ತಿ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಇಂಡೊನೇಷ್ಯಾದಲ್ಲಿ ಫುಟ್‌ಬಾಲ್ ಪಂದ್ಯದ ವೇಳೆ ನಡೆದ ಹಿಂಸಾಚಾರ ಕ್ರೀಡಾ ಮನೋಭಾವಕ್ಕೆ ಧಕ್ಕೆ ಅನಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 241

ಜಗತ್ತಿನ ಸತ್ಯ ತಿಳಿಸಿದ ಜಗನ್ನಾಥ

ಗಿರಿಜೆ ಹೇಳಿದ್ದನ್ನು ಕೇಳಿದ ಸದಾಶಿವ ಪ್ರೀತಿಯಿಂದ ಹೇಳಿದ, ‘ಎಲೈ ಪಾರ್ವತೀದೇವಿ, ನಿನ್ನ ಮಾತಿನಂತೆ ವಿವಾಹಸಂಬಂಧವಾದ ಮಂಗಳ ಕಾರ್ಯಗಳೆಲ್ಲವೂ ವಿಧಿವತ್ತಾಗಿ ನಡೆಯುವಂತೆ ಮಾಡುತ್ತೇನೆ. ಆದರೆ, ಜಗತ್ತಿನ ಸತ್ಯ ನಿನ್ನ ಗಮನಕ್ಕೆ ತರುತ್ತೇನೆ ಕೇಳು. ಬ್ರಹ್ಮ ಸೇರಿದಂತೆ ಎಲ್ಲಾ ದೇವತೆಗಳು, ಮಾನವರು, ಪ್ರಾಣಿಗಳು ಜೀವರಹಿತವಾದ ಭೌತಿಕ ವಸ್ತುಗಳೆಲ್ಲವೂ ಅನಿತ್ಯವಾದವು, ಕಾಲಾನುಕಾಲಕ್ಕೆ ನಾಶವಾಗುವುವು. ಎಲೈ ದೇವಿ, ನಾನು ಓರ್ವನೇ ಪುರುಷನಾದರೂ, ಪ್ರಕೃತಿಯಾದ ನಿನ್ನ ಮಹಿಮೆಯಿಂದ ಅನೇಕ ರೂಪಗಳಿಂದ ಪ್ರಕಟವಾಗುತ್ತೇನೆ. ನಿರ್ಗುಣನಾದರೂ ಸಗುಣನಾದ ಪರಮೇಶ್ವರನಾಗಿದ್ದೇನೆ. ನಾನು ಸ್ವಪ್ರಕಾಶದಿಂದ ಬೆಳಗುವವನಾದರೂ, ಪರಪ್ರಕಾಶವುಳ್ಳವನಾಗಿದ್ದೇನೆ. ನಿನ್ನಿಂದ ನಾನು ಸ್ವತಂತ್ರನೂ ಪರತಂತ್ರನೂ ಆಗಿರುವೆ. ನೀನು ಜಗತ್ತಿನ ನಿರ್ಮಾಣಕಾರಳು, ಪರಿಣಾಮಕಾರಳು. ಆದಿಮಾಯೆಯಾದ ನಿನ್ನಿಂದಲೇ ಜಗತ್ತು ಜೀವವೈವಿಧ್ಯದಿಂದ ಸಾಗುತ್ತಿದೆ. ನಿನ್ನ ಕರ್ತೃತ್ವ ಶಕ್ತಿ ಈ ಜಗತ್ತನ್ನು ಪೊರೆಯುತ್ತಿದೆ.

‘ವಸ್ತುತಃ ಕಾಣುವ ಜಗತ್ತೆಲ್ಲವೂ ನಿಜವಲ್ಲ. ಮಾಯಾಮಯವಾದ ಈ ಜಗತ್ತು ಮಿಥ್ಯವಾದುದು. ಪರಮಾತ್ಮವಸ್ತುವೊಂದೇ ಸತ್ಯವಾದುದು. ಈ ಜಗತ್ತಿನ ಸತ್ಯವನ್ನು ಸಾಮಾನ್ಯರು ಅರ್ಥೈಸಲಾರರು. ಎಲ್ಲೆಲ್ಲೂ ಪರಮಾತ್ಮವಸ್ತುವನ್ನೇ ನೋಡುವಂತಹ ಅಸಾಮಾನ್ಯ ಜ್ಞಾನಿಗಳಷ್ಟೇ ತಿಳಿಯಬಲ್ಲರು. ಆದರೆ ಮಾಯಾಮಯವಾದ ಗುಣಗಳಿಂದ ಕೂಡಿದ ಆತ್ಮನು, ತನ್ನ ತಪೋಸಾಧನೆಯಿಂದ ಮಾತ್ರ ಮಾಯಾಭ್ರಮೆ ಕಳೆದುಕೊಳ್ಳುತ್ತಾನೆ. ಮಾಯೆಯಿಂದ ಹೊರಬಂದ ಸಾಮಾನ್ಯ ಆತ್ಮನೂ, ಪರಮಾತ್ಮನಾಗಿ, ಜಗತ್ಕಾರ್ಯಗಳನ್ನು ಮಾಡುತ್ತಾನೆ. ತಪೋಸಿದ್ಧಿಯಿಂದ ಮಾಯಾ ಭ್ರಮೆ ಕಳೆದುಕೊಂಡಿರುವ ನಮಗೆ ಗ್ರಹಗಳಾವುದು? ಅದರ ಗ್ರಹಗತಿ ದೋಷಗಳಾವುದು? ಅದರ ಪರಿಣಾಮಗಳು ನಮಗೆಲ್ಲಿ ತಟ್ಟುವುದು? ಮಂಗಳಾರ್ಥವಾಗಿ ನೀನು ಹೇಳಿದ ವಿಧಿಪೂರ್ವಕ ಮದುವೆ ಕಾರ್ಯವಾದರೂ ನಮಗೆಲ್ಲಿ ಅಂಟುವುದು? ನಾವೀರ್ವರೂ ಭಕ್ತರಿಗಾಗಿ ಗುಣಕರ್ಮಗಳ ಭೇದದಿಂದ ಬೇರೆಬೇರೆಯಾಗಿ ಈ ಜಗತ್ತಿನಲ್ಲಿ ಅವಿರ್ಭವಿಸಿರುವೆವು ಅಷ್ಟೆ. ನೀನು ಸೂಕ್ಷ್ಮಪ್ರಕೃತಿಯು. ನಿನ್ನಲ್ಲಿ ರಜಸ್ಸು, ತಮಸ್ಸು, ಸತ್ವ ಎಂಬ ಮೂರು ಗುಣಗಳಿರುವುವು. ಸದಾ ನೀನು ಕಾರ್ಯವನ್ನು ಮಾಡುತ್ತಿರುವೆ. ಸಗುಣರೂಪಳೂ ಮತ್ತು ನಿರ್ಗುಣರೂಪಳೂ ಆಗಿರುವೆ. ನಾನು ಎಲ್ಲಾ ಪ್ರಾಣಿಗಳಿಗೂ ಆತ್ಮನು. ಕಾಮ-ಕ್ರೋಧಗಳ ವಿಕಾರಗಳು ನನಗಿಲ್ಲ. ಭಕ್ತರಿಗಾಗಿ ಲೀಲಾವಿಗ್ರಹವನ್ನು ಧರಿಸಿರುವೆ.’

ಶಂಕರನ ಮಾತು ಕೇಳಿ ಗಿರಿಜೆ ಭಕ್ತಿಯಿಂದ ನಮಸ್ಕರಿಸುತ್ತಾ ಹೇಳಿದಳು, “ಓ ದೇವ, ನೀನು ಆತ್ಮನು. ನಾನು ಪ್ರಕೃತಿಯು. ಇದರಲ್ಲಿ ಸಂಶಯವಿಲ್ಲ. ನಾವು ಸ್ವತಂತ್ರರಾದರೂ ಭಕ್ತಪರಾಧೀನರು. ನಿರ್ಗುಣರಾದರೂ ಭಕ್ತರಿಗಾಗಿ ಸಗುಣರಾಗುವೆವು. ಆದ್ದರಿಂದ ಲೋಕಾರೂಢಿಯಂತೆ ನಮ್ಮ ವಿವಾಹಕಾರ್ಯ ನಡೆಯಬೇಕು. ಇದಕ್ಕಾಗಿ ಹಿಮವಂತನನ್ನು ನನಗಾಗಿ ನೀನು ಯಾಚಿಸಿ, ನಮ್ಮ ಮದುವೆಯ ಕಾರ್ಯ ಸುಗಮಗೊಳಿಸು’ ಎಂದು ಶಿವನಿಗೆ ಶಿರ ಬಾಗಿಸಿ ಪ್ರಾರ್ಥಿಸಿದಳು.

ಮಹೇಶ್ವರ ನಸುನಗುತ್ತಾ, ‘ನಾವು ಲೋಕಕ್ಕೆ ಅತೀತರಾದರೂ ನಾವು ಲೋಕಾರೂಢಿಯಂತೆ ನಡೆಯುವುದು ಸರಿಯಾದ ಕ್ರಮ. ನಿನ್ನ ಮಾತಿನಂತೆಯೇ ಆಗಲಿ’ ಎಂದು ಸಂತೋಷದಿಂದ ಅಂಗೀಕರಿಸಿ, ಅಲ್ಲಿಂದ ಅಂತರ್ಧಾನನಾಗಿ ಕೈಲಾಸಕ್ಕೆ ಬಂದ. ಅಲ್ಲಿ ನಂದಿ ಮೊದಲಾದ ಗಣಗಳಿಗೆ ನಡೆದ ಸಮಾಚಾರವೆಲ್ಲವನ್ನೂ ತಿಳಿಸಿದ. ಶಿವ-ಪಾರ್ವತಿ ವಿವಾಹವಾಗುವುದನ್ನು ತಿಳಿದ ಭೈರವ ಮೊದಲಾದ ಗಣಗಳು ಹರ್ಷೋದ್ಗಾರ ಮಾಡಿದವು ಎಂಬಲ್ಲಿಗೆ ಪಾರ್ವತೀಖಂಡದ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ. •

‘ಅಲ್ಪಸಂಖ್ಯಾತ ಸಚಿವಾಲಯ ರದ್ದು ಮಾಡುವುದಿಲ್ಲ’

ನವದೆಹಲಿ (ಪಿಟಿಐ): ‘ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವನ್ನು ರದ್ದುಗೊಳಿಸುವುದಿಲ್ಲ. ಅಂತಹ ಯಾವ ಪ್ರಸ್ತಾವನೆಯೂ ನಮ್ಮ ಎದುರಿಲ್ಲ’ ಎಂದು ಕೇಂದ್ರ ಸರ್ಕಾರ ಸೋಮವಾರ ಸ್ಪಷ್ಟಪಡಿಸಿದೆ.

ಕೇಂದ್ರವು ಅಲ್ಪಸಂಖ್ಯಾತ ಸಚಿವಾಲಯವನ್ನು ರದ್ದುಗೊಳಿಸಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜೊತೆ ವಿಲೀನಗೊಳಿಸಲಿದೆ ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಅಲ್ಪಸಂಖ್ಯಾತ ಸಚಿವಾಲಯವನ್ನು ರದ್ದುಗೊಳಿಸುವ ಪ್ರಸ್ತಾವನೆ ಕೇಂದ್ರದ ಎದುರಿಗಿಲ್ಲ ಎಂದು ಪಿಐಬಿ ಫ್ಯಾಕ್ಟ್ ಚೆಕ್ ಟ್ವೀಟ್ ಮಾಡಿದೆ. ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಇದನ್ನು ಮರು ಟ್ವೀಟ್ ಮಾಡಿದ್ದಾರೆ.

ಹಲವು ವೈಶಿಷ್ಟ್ಯಗಳ ‘ಪ್ರಚಂಡ’

ಹಿಂದುಸ್ತಾನ್ ಏರೊನಾಟಿಕ್ಸ್ ವಿನ್ಯಾಸ ಮಾಡಿ, ನಿರ್ಮಿಸಿರುವ ಲಘು ಯುದ್ಧ ಹೆಲಿಕಾಪ್ಟರ್ ‘ಪ್ರಚಂಡ’ ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಅತ್ಯಂತ ಎತ್ತರದ, ಇಕ್ಕಟ್ಟಾದ ಮತ್ತು ಪ್ರತಿಕೂಲ ಹವಾಮಾನ ಇರುವ ಸಂದರ್ಭದಲ್ಲೂ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಈ ಹೆಲಿಕಾಪ್ಟರ್‌ಗೆ ಇದೆ. ವಿಶ್ವದ ಅತ್ಯಂತ ಎತ್ತರದ ಸೇನಾ ನೆಲೆ ಸಿಯಾಚಿನ್‌ನ ದುರ್ಗಮ ಪ್ರದೇಶದಲ್ಲೂ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಇದಕ್ಕಿದೆ. ಪ್ರಚಂಡಕ್ಕೆ ಈ ಬಲವನ್ನು ತಂದುಕೊಟ್ಟಿರುವ ತಂತ್ರಜ್ಞಾನ ಮತ್ತು ಸವಲತ್ತುಗಳು ಇಂತಿವೆ

1. ಟ್ರೈಸೈಕಲ್ ಮಾದರಿಯ ವಿನ್ಯಾಸ: ಮುಂಬದಿಯಲ್ಲಿ ಎರಡು ಮತ್ತು ಹಿಂಬದಿಯಲ್ಲಿ ಒಂದು ಚಕ್ರವಿರುವ ಈ ಸ್ವರೂಪದ ವಿನ್ಯಾಸವು ತುರ್ತು ಸಂದರ್ಭದಲ್ಲಿ ನೆರವಿಗೆ ಬರುತ್ತದೆ. ಹೈಡ್ರಾಲಿಕ್ ಸಸ್ಪೆನ್ಷನ್ ಇರುವ ಕಾರಣ, ತುರ್ತು ಭೂಸ್ಪರ್ಶ ಮಾಡಿದಾಗ ನೆಲಕ್ಕೆ ಅಪ್ಪಳಿಸಿದರೂ ಆ ಅಘಾತವನ್ನು ಹೆಲಿಕಾಪ್ಟರ್ ತಡೆದುಕೊಳ್ಳುವಂತೆ ಇದು ಮಾಡುತ್ತದೆ

2. ಗಾಜಿನ ಕಾಕ್‌ಪಿಟ್: ಕಾಕ್‌ಪಿಟ್‌ನ ಮೂರೂ ಕಡೆ ಗಾಜು ಇದೆ. ಹೀಗಾಗಿ ಪೈಲಟ್‌ಗಳು, ಎಡ–ಬಲ ಮತ್ತು ಮೇಲ್ಭಾಗದಲ್ಲಿ ಏನಾಗುತ್ತಿದೆ ಎಂಬುದನ್ನು ಗ್ರಹಿಸಲು ಸಾಧ್ಯವಾಗುತ್ತದೆ

3. ಬಲಿಷ್ಠ ತಳಭಾಗ: ಹೆಲಿಕಾಪ್ಟರ್‌ನ ತಳಭಾಗವನ್ನು ಹೆಚ್ಚು ಬಲಿಷ್ಠಗೊಳಿಸಲಾಗಿದೆ. ತುರ್ತು ಭೂಸ್ಪರ್ಶದ ಸಂದರ್ಭದಲ್ಲಿ ಹೆಲಿಕಾಪ್ಟರ್‌ಗೆ ಹೆಚ್ಚು ಹಾನಿ ಆಗುವುದನ್ನು ಇದು ತಡೆಯುತ್ತದೆ

4. ಕ್ಷಿಪಣಿಗಳು: ವಿಮಾನ ಮತ್ತು ಹೆಲಿಕಾಪ್ಟರ್‌ಗಳ ಮೇಲೆ ದಾಳಿ ನಡೆಸುವ ‘ಏರ್ ಟು ಏರ್’ ವರ್ಗದ ಕ್ಷಿಪಣಿಗಳನ್ನು ಅಳವಡಿಸಬಹುದು. ನೆಲದಲ್ಲಿರುವ ಗುರಿಗಳ ಮೇಲೆ, ಆಗಸದಿಂದಲೇ ದಾಳಿ ನಡೆಸಬಹುದಾದ ‘ಏರ್ ಟು ಸರ್ಫೇಸ್’ ಕ್ಷಿಪಣಿಗಳನ್ನೂ ಇದರಲ್ಲಿ ಅಳವಡಿಸಬಹುದು. ನಿರ್ದಿಷ್ಟವಾದ ಕಾರ್ಯಾಚರಣೆ ಒಂದಕ್ಕೆ ಅಗತ್ಯವಿರುವಂತೆ ಶಸ್ತ್ರಾಸ್ತ್ರಗಳನ್ನು ಹೊಂದಿಸಿಕೊಳ್ಳಬಹುದು

- **ಮರುದಾಳಿ ತಂತ್ರಜ್ಞಾನ:** ಎದುರಾಳಿ ಪಡೆಯ ಹೆಲಿಕಾಪ್ಟರ್ ಅಥವಾ ವಿಮಾನವು ದಾಳಿ ನಡೆಸಿದಾಗ, ಅದರಿಂದಾದ ಅಪಾಯವನ್ನು ಈ ವ್ಯವಸ್ಥೆ ಅತ್ಯಂತ ಕ್ಷಿಪ್ರವಾಗಿ ಪತ್ತೆ ಮಾಡುತ್ತದೆ. ಜತೆಗೆ ಆ ದಾಳಿಯಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದನ್ನು ಈ ವ್ಯವಸ್ಥೆ ಸೂಚಿಸುತ್ತದೆ
- **ರೇಡಾರ್ ಮತ್ತು ಇನ್ಫ್ರಾ ರೆಡ್ ನಿರೋಧಕ ವ್ಯವಸ್ಥೆ:** ಎದುರಾಳಿ ಪಡೆಯ ರೇಡಾರ್‌ಗಳ ಕಣ್ತಪ್ಪಿಸುವ ಸಾಮರ್ಥ್ಯ ಈ ಹೆಲಿಕಾಪ್ಟರ್‌ಗೆ ಇದೆ. ಇನ್ಫ್ರಾ ರೆಡ್ ಗ್ರಾಹಕಗಳಲ್ಲಿ ತನ್ನ ಕುರುಹು ಬಿಡದಂತೆ, ಉಷ್ಣಾಂಶವನ್ನು ಕುಗ್ಗಿಸುವ ಕೆಲಸವನ್ನು ಈ ವ್ಯವಸ್ಥೆ ಮಾಡುತ್ತದೆ



21,300 ಅಡಿ. ಕಾರ್ಯಾಚರಣೆಯ ಅತ್ಯಂತ ಗರಿಷ್ಠ ಎತ್ತರ: ಇದು ಲಘು ಯುದ್ಧ ಹೆಲಿಕಾಪ್ಟರ್; ಅತ್ಯಂತ ಎತ್ತರದಲ್ಲಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿದೆ. ಹೀಗಾಗಿ ಇದನ್ನು ಹಿಮಾಲಯ ಪರ್ವತಗಳಲ್ಲೂ ಕಾರ್ಯಾಚರಣೆಗೆ ಬಳಸಲು ಸಾಧ್ಯವಿದೆ

5,800 ಕೆ.ಜಿ ಹೆಲಿಕಾಪ್ಟರ್‌ನ ಒಟ್ಟು ತೂಕ

268 ಕಿ.ಮೀ ಹೆಲಿಕಾಪ್ಟರ್‌ನ ಕಾರ್ಯಾಚರಣೆಯ ಗರಿಷ್ಠ ವೇಗ

550 ಕಿ.ಮೀ. ಒಮ್ಮೆ ಇಂಧನ ಭರ್ತಿ ಮಾಡಿದರೆ ಕ್ರಮಿಸುವ ಗರಿಷ್ಠ ದೂರ

ಆಧಾರ: ಎಚ್‌ಎಎಲ್, ಐಎಎಫ್

ಇರಾನ್‌ನ ಮಹಾನ್ ಏರ್ ವಿಮಾನಕ್ಕೆ ಬಾಂಬ್ ಬೆದರಿಕೆ

ಐಎಎಫ್ ತುರ್ತು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

- ಇರಾನ್‌ನ ವಿಮಾನವು ಭಾರತದ ವಾಯು ಪ್ರದೇಶವನ್ನು ದಾಟುವವರೆಗೂ ದೆಹಲಿ ಎಟಿಸಿಯು ವಾಯು ಪಡೆಯ ಸಂಪರ್ಕದಲ್ಲಿತ್ತು
- ಇರಾನ್‌ನ ವಿಮಾನದ ಮೇಲೆ ಭಾರತೀಯ ವಾಯು ಪಡೆಯು ರೇಡಾರ್ ಮೂಲಕ ಕಣ್ಗಾವಲು ಇರಿಸಿತ್ತು
- ಭಾರತದ ವಾಯು ಪ್ರದೇಶವನ್ನು ದಾಟುವುದಕ್ಕೆ ಅನುಮತಿ ನೀಡುವ ಮೊದಲು ಇರಾನ್‌ನ ವಿಮಾನವು 40 ನಿಮಿಷ ಭಾರತದಲ್ಲೇ ಹಾರಾಡಿತು
- ಫ್ಲೈಟ್‌ಅವೇರ್ ಡಾಟ್ ಕಾಮ್ ವೆಬ್‌ಸೈಟ್ ಪ್ರಕಾರ ವಿಮಾನವು ಸುರಕ್ಷಿತವಾಗಿ ಚೀನಾವನ್ನು ತಲುಪಿದೆ
- ವಿಮಾನದಲ್ಲಿ ಎಷ್ಟು ಮಂದಿ ನಾಗರಿಕರು ಇದ್ದರು ಎನ್ನುವ ಕುರಿತು ಯಾವುದೇ ಅಧಿಕೃತ ಮಾಹಿತಿ ಈ ವರೆಗೆ ಬಂದಿಲ್ಲ
- ಇದು ಸುಳ್ಳು ಎಚ್ಚರಿಕೆ: ಭಾರತೀಯ ವಾಯು ಪಡೆ ಅಧಿಕಾರಿಗಳ ಹೇಳಿಕೆ



ನವದೆಹಲಿ: ಭಾರತದ ವಾಯು ಪ್ರದೇಶವನ್ನು ಹಾದು ಚೀನಾಕ್ಕೆ ತೆರಳುತ್ತಿದ್ದ ಇರಾನ್‌ನ ನಾಗರಿಕ ವಿಮಾನಕ್ಕೆ ಬಾಂಬ್ ಬೆದರಿಕೆ ಬಂದ ಕಾರಣ ಭಾರತೀಯ ವಾಯು ಪಡೆಯು ಸೋಮವಾರ ತುರ್ತು ಕಾರ್ಯಾಚರಣೆ ನಡೆಸಿತು.

‘ನಮ್ಮ ಯುದ್ಧ ವಿಮಾನಗಳು, ಇರಾನ್‌ನ ವಿಮಾನವನ್ನು ತಕ್ಕ ಅಂತರದಲ್ಲಿ ಹಿಂಬಾಲಿಸಿದವು. ದೆಹಲಿಯ ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ) ಅಧಿಕಾರಿಗಳು ಜೈಪುರ ಅಥವಾ ಚಂಡೀಗಢದಲ್ಲಿ ತುರ್ತು ಭೂಸ್ಪರ್ಶ ಮಾಡುವಂತೆ ಇರಾನ್ ವಿಮಾನದ ಪೈಲಟ್‌ಗೆ ಸಲಹೆ ನೀಡಿದರು. ಆದರೆ, ಪೈಲಟ್ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಲು ನಿರಾಕರಿಸಿದರು’ ಎಂದು ಐಎಎಫ್ ಹೇಳಿದೆ.

‘ವಿಮಾನವನ್ನು ತುರ್ತು ಭೂಸ್ಪರ್ಶ ಮಾಡುವುದಕ್ಕೆ ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ನಾಗರಿಕ ವಿಮಾನಯಾನ ಭದ್ರತೆ ಬ್ಯೂರೊದೊಂದಿಗೆ ಸೇರಿ ಕೈಗೊಳ್ಳಲಾಗಿತ್ತು’ ಎಂದು ತಿಳಿಸಿದೆ.

‘ಇರಾನ್‌ನ ವಿಮಾನವು ಭಾರತದ ವಾಯು ಪ್ರದೇಶವನ್ನು ಹಾದು ಹೋಗುವವರೆಗೂ ವಾಯು ಪಡೆಯ ಯುದ್ಧ ವಿಮಾನಗಳು ಪಂಜಾಬ್ ಮತ್ತು ರಾಜಸ್ಥಾನದ ವಾಯುನೆಲೆಯಿಂದ ಹಿಂಬಾಲಿಸಿದವು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ವಾಯು ಪಡೆಯು ಈ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿರುವ ಹೊತ್ತಿನಲ್ಲಿ ಬಾಂಬ್ ಬೆದರಿಕೆಯನ್ನು ನಿರ್ಲಕ್ಷಿಸಿ ಎಂದು ಟೆಹರಾನ್‌ನಿಂದ ಸೂಚನೆ ಬಂದಿತು. ಆದ್ದರಿಂದ ವಿಮಾನವು ಭಾರತದಲ್ಲಿ ಭೂಸ್ಪರ್ಶ ಮಾಡದೆ ತನ್ನ ಪ್ರಯಾಣವನ್ನು ಮುಂದುವರಿಸಿತು’ ಎಂದು ವಾಯುಪಡೆಯ ಅಧಿಕಾರಿಗಳು ಹೇಳಿದ್ದಾರೆ.

ಲಾಹೋರ್‌ನಿಂದ ಮಾಹಿತಿ: ಇರಾನ್‌ನ ಮಹಾನ್ ಏರ್ ವಿಮಾನಕ್ಕೆ ಬಾಂಬ್ ಬೆದರಿಕೆ ಇರುವ ಕುರಿತು ಬೆಳಿಗ್ಗೆ 9.20ರ ಸುಮಾರಿಗೆ ಲಾಹೋರ್ ಎಟಿಸಿ ಅಧಿಕಾರಿಗಳು ದೆಹಲಿ ಎಟಿಸಿಗೆ ಮಾಹಿತಿ ನೀಡಿದರು. ತಕ್ಷಣವೇ ಮಹಾನ್ ವಿಮಾನದ ಪೈಲಟ್‌ಗೆ ಈ ಮಾಹಿತಿ ನೀಡಲಾಯಿತು.

ಜೆಇಇ ಮೇನ್ಸ್ ಅಕ್ರಮ: ರಷ್ಯಾ ನಾಗರಿಕ ವಶಕ್ಕೆ

ನವದೆಹಲಿ (ಪಿಟಿಐ): ಜೆಇಇ ಮೇನ್ಸ್ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು ಭಾರತಕ್ಕೆ ಬಂದಿಳಿದ ರಷ್ಯಾದ ನಾಗರಿಕರೊಬ್ಬರನ್ನು ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿದ್ದಾರೆ.

ಈ ವ್ಯಕ್ತಿಯ ಕುರಿತು ಸಿಬಿಐ ಲುಕ್ ಔಟ್ ನೋಟಿಸ್ ಹೊರಡಿಸಿತ್ತು. ಪರೀಕ್ಷೆ ಅಕ್ರಮ ಪ್ರಕರಣದಲ್ಲಿ ಈತನೇ ಮುಖ್ಯ ಹ್ಯಾಕರ್ ಎಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ಮಾಹಿತಿ ನೀಡಿದರು.

ರಷ್ಯಾ ನಾಗರಿಕನನ್ನು ತನಿಖೆಗೆ ಒಳಪಡಿಸಲಾಗಿದೆ. ಈತನನ್ನು ಬಂಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಬದುಕಿನ ಸೂತ್ರಗಳು

ನಗು ಮನದಿ ಲೋಗರ ವಿಕಾರಂಗಳನು ನೋಡಿ |
ಬಿಗಿ ತುಟಿಯ, ದುಡಿವಂದು ನೋವಪಡುವಂದು ||
ಪೊಗು, ವಿಶ್ವಜೀವನದ ಜೀವಾಂತರಂಗದಲಿ |
ನಗುನಗುತ ಬಾಳ್, ತೆರಳು – ಮಂಕುತಿಮ್ಮ ||
728 ||

ಪದ-ಅರ್ಥ: ಲೋಗರ = ಲೋಕದ ಜನರ, ದುಡಿವಂದು = ದುಡಿವ + ಅಂದು, ಪೊಗು = ಸೇರು

ವಾಚ್ಯಾರ್ಥ: ಲೋಕದ ಜನ ವಿಕಾರಗಳನ್ನು ಕಂಡು ಮನಸ್ಸಿನಲ್ಲಿಯೇ ನಗು. ನೀನು ದುಡಿಯುವಾಗ, ನೋವುಪಡುವಾಗ ತುಟಿಯನ್ನು ಬಿಗಿ. ವಿಶ್ವಜೀವನದ ಅಂತರಂಗದಲ್ಲಿ ಸೇರಿ ಹೋಗು. ನಗುನಗುತ್ತ ಬಾಳು, ತೆರಳು.

ವಿವರಣೆ: ವೈಯಕ್ತಿಕವಾಗಿ, ನನ್ನ ಮಟ್ಟಿಗೆ ಹೇಳುವುದಾದರೆ, ಇದೊಂದು ಅತ್ಯದ್ಭುತ ಚೌಪದಿ. ಇಡೀ ಬದುಕಿನ ರೀತಿಯನ್ನು ನಾಲ್ಕೇ ಸಾಲುಗಳಲ್ಲಿ ಹೇಳಿಬಿಡುವ ಸಂಕ್ಷೇಪಣಾ ಶಕ್ತಿಗೆ ಶರಣು ಎನ್ನಬೇಕು.ಈ ಕಗ್ಗದಲ್ಲಿ ನಾಲ್ಕು ಬಹುದೊಡ್ಡ ವಿಷಯಗಳನ್ನು ಡಿ.ವಿ.ಜಿ ನಮ್ಮ ಮುಂದೆ ಇಡುತ್ತಾರೆ.

1. ಜನರ ಮಧ್ಯೆ ಕೆಲಸಮಾಡುವಾಗ ಅನೇಕರ ನಿಸ್ವಾರ್ಥ, ಸಮಾಜ ಪ್ರೇರಕವಾದ ಕೆಲಸಗಳು ಕಣ್ಣಿಗೆ ಬೀಳುವುದರೊಂದಿಗೆ, ಕೆಲವರ ಸಣ್ಣತನಗಳು, ವಿಕಾರಗಳೂ ತೋರುತ್ತವೆ. ಆಗ ನಾವು ಏನು ಮಾಡಬಹುದು? ನಮಗೆ ಎರಡು ಆಯ್ಕೆಗಳು. ಮೊದಲನೆಯದು ಅವರ ತಪ್ಪುಗಳನ್ನು ನೋಡಿ ನಕ್ಕು, ಎಲ್ಲರ ಮುಂದೆ ಹೇಳಿ ಅಪಹಾಸ್ಯ ಮಾಡುವುದು. ಎರಡನೆಯದು, ಮತ್ತೊಬ್ಬರ ದೋಷಗಳನ್ನು ಕಂಡು ಅಟ್ಟಹಾಸ ಮಾಡಿ ನಗುವುದು ಬೇಡ, ಮನದಲ್ಲೇ ನಕ್ಕು ಅದನ್ನು ಮರೆತುಬಿಡುವುದು. ಕಗ್ಗ ಎರಡನೆಯದನ್ನು ಸೂಚಿಸುತ್ತದೆ. ಮತ್ತೊಬ್ಬರ ತಪ್ಪನ್ನು ಎತ್ತಿ ಟೀಕೆ ಮಾಡಲು ನಾವು ಯಾರು? ನಮಗೆ ಆ ಅಧಿಕಾರವಿದೆಯೆ?

2. ನಾವು ಕಷ್ಟಪಟ್ಟು ದುಡಿಯುವಾಗ, ಯಾವುದೇ ಕಾರಣಕ್ಕೆ, ಮನಸ್ಸಿಗೆ ನೋವಾದರೆ ಜಗತ್ತಿಗೆಲ್ಲ ಸಾರಿಕೊಂಡು ಬರುತ್ತೇವೆ. ನಮ್ಮ ಕಷ್ಟ ಕೋಟಲೆಗಳನ್ನೆಲ್ಲ ಹೇಳಿಕೊಂಡು ಬೇರೆಯವರ ಅನುಕಂಪೆಯನ್ನು ಅಪೇಕ್ಷಿಸುತ್ತೇವೆ. ಅನುಕಂಪೆಯನ್ನು ಅಪೇಕ್ಷಿಸುವಷ್ಟು ಕೀಳುತನ ಮತ್ತೊಂದಿರಲಾರದು. ಅದು ನಮ್ಮ ಆತ್ಮವಿಶ್ವಾಸವನ್ನು, ಪ್ರಯತ್ನಶೀಲತೆಯನ್ನು ಹೊಸಕಿಹಾಕುತ್ತದೆ. ಜಗತ್ತಿಗೆ ಅಳುಮೋರೆ, ದೈನ್ಯ ಬೇಕಿಲ್ಲ. ಒಂದೆರಡು ಬಾರಿ ಸಹಾನುಭೂತಿಯ ಮಾತನಾಡಿದವರೂ ಕೂಡ, ನಂತರ ಮುಖ ತಪ್ಪಿಸುತ್ತಾರೆ, ಬಂತಪ್ಪ ಅಳುಮುಂಜಿ ಎನ್ನುತ್ತಾರೆ. ಆದ್ದರಿಂದ ತುಟಿ ಬಿಗಿದು, ನಮ್ಮ ಕರ್ಮಫಲವನ್ನು ನಾವೇ ಧೈರ್ಯದಿಂದ ಎದುರಿಸಬೇಕು.

3. ಜಗತ್ತಿನಲ್ಲಿ ಕಾರ್ಯಮಾಡುವಾಗ ನೋವಾದೀತು, ಕಷ್ಟವಾದೀತು ಎಂದು ಯಾವ ಕರ್ತವ್ಯವನ್ನೂ ಮಾಡದೆ ಕುಳಿತುಕೊಳ್ಳುವುದು ಸರಿಯಲ್ಲ. ಈ ವಿಶ್ವಜೀವನದ ಅಂತರಂಗಕ್ಕೇ ಹೋಗಿ, ನಮ್ಮ ಕೈಲಾದ ಕರ್ತವ್ಯಗಳನ್ನು ನಿರ್ವಂಚನೆಯಿಂದ, ಪ್ರೀತಿಯಿಂದ ಮಾಡತಕ್ಕದ್ದು. ಇದು ಯಾರದೋ ಜಗತ್ತಲ್ಲ, ನಮ್ಮದೇ. ಇರುವತನಕ ಅದರ ಶ್ರೇಯಸ್ಸಿಗೆ ದುಡಿಯುವುದು ಧರ್ಮ.

4. ಬದುಕಿರುವವರೆಗೆ ನಗುನಗುತ್ತ ಬಾಳಬೇಕು. ಇದು ನಮ್ಮ ಬದುಕು. ಸ್ವಂತದ್ದು, ಬಾಡಿಗೆಯದಲ್ಲ. ಬದುಕು ಸಂಭ್ರಮವಾಗಬೇಕು. ಹಾಗೆ ಬದುಕಿದರೆ ಸಾವೂ ಸಂಭ್ರಮವಾದೀತು. ಅದಕ್ಕೇ ನಗುನಗುತ್ತ ಬದುಕಿ,ನಗುನಗುತ್ತ ತೆರಳಬೇಕು. ಇವು ಮನುಷ್ಯನ ಆದರ್ಶ ಬದುಕಿನ ಸೂತ್ರಗಳು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಮಂಗಳವಾರ ಅಕ್ಟೋಬರ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ನವಮಿ ಗಂ. 14-21 ನಕ್ಷತ್ರ: ಉತ್ತರಾಷಾಢ ಗಂ. 22-51 ಯೋಗ: ಅತಿಗಂಡಗಂ. 11-23, ಕರಣ: ಕೌಲವ ಗಂ. 14-21, ಕನ್ಯಾ ಮಾಸದ 17 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 – 04:30 ಸೂರ್ಯೋದಯ : 06-23 ಸೂರ್ಯಾಸ್ತ : 06-15
ಮುಸ್ಲಿಂ ದಿನಾಂಕ : 07 ರಬಿಉಲ್ಲಾವಲ್
ದಿನ ವಿಶೇಷ : ಮಹಾನವಮಿ, ಆಯುಧ ಪೂಜಾ
ಅದೃಷ್ಟ ಸಂಖ್ಯೆ : 1, 3

ಮೇಷ: ನಿಮ್ಮ ಸಂಗಡಿಗರು ಮಾಡಿದ ತಪ್ಪಿನಿಂದ ಹೊಸ ನಿರ್ಧಾರ ಕೈಗೊಳ್ಳಬೇಕಾಗುವುದು. ಕೇವಲ ಯಶಸ್ಸಿನ ಮೇಲೆ ಗಮನವಹಿಸುವುದಕ್ಕಿಂತ ಪರಿಶ್ರಮದ ಮೇಲೂ ಗಮನಹರಿಸಬೇಕಾಗುತ್ತದೆ. ಹಳೇ ಭೀತಿಗಳಿಂದ ಹೊರಬರುವಿರಿ.

ವೃಷಭ: ಕಳೆದು ಹೋದ ಅತೀ ಅಮೂಲ್ಯ ವಸ್ತು ಬಹಳ ದಿನದ ನಂತರ ನಿಮ್ಮ ಕೈ ಸೇರಲಿದೆ. ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿ ಇರುವುದಿಲ್ಲ.

ಮಿಥುನ: ಮಗಳ ಮದುವೆಯ ನಿಶ್ಚಯ ಹೆಚ್ಚಿನ ಸಂತೋಷವನ್ನು ಉಂಟುಮಾಡುತ್ತದೆ. ರೈಲ್ವೆ ಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಳವಾಗುವ ಸಾಧ್ಯತೆಗಳಿವೆ. ಸುಬ್ರಮಣ್ಯನ ಸೇವೆ ಮಾಡಿರಿ.

ಕರ್ಕಾಟಕ: ಪತಿ-ಪತ್ನಿಯರಲ್ಲಿ ಆದಷ್ಟು ತಾಳ್ಮೆ, ಸಮಾಧಾನ ಇರುವುದು ಒಳ್ಳೆಯದು. ವಾದ ಮಾಡುವ ಬದಲು ಕುಟುಂಬದ ನೆಮ್ಮದಿಗಾಗಿ ಪರಸ್ಪರ ಸೋಲನ್ನು ಒಪ್ಪಿಕೊಳ್ಳುವುದು ಉತ್ತಮ. ಹಣ್ಣುಗಳ ವ್ಯಾಪಾರಿಗಳಿಗೆ ಲಾಭ.

ಸಿಂಹ: ಸ್ನೇಹಿತನ ಮೇಲಿದ್ದ ಸಂಶಯ, ಅಪನಂಬಿಕೆಯ ಮನಸ್ಥಿತಿಗೆ ಪುಷ್ಟಿ ಸಿಗುವ ಸನ್ನಿವೇಶಗಳು ನಡೆಯಲಿದೆ. ಅವಿವಾಹಿತರಿಗೆ ವಿವಾಹ ಯೋಗ ಕೂಡಿ ಬರುತ್ತದೆ. ತಂದೆ ತಾಯಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿರಿ.

ಕನ್ಯಾ: ವೈಯಕ್ತಿಕ ಪ್ರಗತಿ, ಅಭಿವೃದ್ಧಿಯಿಂದ ಮನಸ್ಸಿಗೆ ಸಂತೋಷವಿರುವುದು. ತರಕಾರಿ ಬೆಳೆಗಾರರಿಗೆ ದುಪ್ಪಟ್ಟು ಲಾಭಕರವಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದು ಕೃಷಿಕರ ಬಾಳಿನಲ್ಲಿ ಆಶಾಕಿರಣ ಮೂಡಿ ಬರಲಿದೆ.

ತುಲಾ: ವಿರೋಧಿಗಳ ಉಪಟಳದ ನಡುವೆ ಬದುಕಲು ಕಷ್ಟವಾಗಲಿದೆ. ಪದೇಪದೇ ಕಂಡು ಬರುವ ಅಡ್ಡಿ-ಆತಂಕ, ಭೀತಿ ಹಾಗೂ ಮನೋವ್ಯಾಕುಲಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಪುತ್ರರೊಡನೆ ಸಮಾಲೋಚನೆ ನಡೆಸಿ.

ವೃಶ್ಚಿಕ: ಜಾಣ್ಮೆಯಿಂದ ವ್ಯವಹರಿಸುವ ಫಲವಾಗಿ ಸಮಾಜದಲ್ಲಿ ಹೆಚ್ಚಿನ ಗೌರವವನ್ನು ಪಡೆಯುವಿರಿ. ವೈವಾಹಿಕ ಮಾತುಕತೆಗಳಲ್ಲಿ ಹಿತಕರವಾದ ಬೆಳವಣಿಗೆ ಇರುವುದು. ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗುವಿರಿ.

ಧನು: ಹವ್ಯಾಸಿ ಛಾಯಾಗ್ರಾಹಕರಿಗೆ ಉತ್ತಮವಾದ ಅವಕಾಶಗಳು ಸಿಗುವುದು. ಹೃದಯ ಶ್ರೀಮಂತಿಕೆಯಿಂದ ಕೈಗೊಂಡ ಕಾರ್ಯಗಳನ್ನು ನಿರಾತಂಕವಾಗಿ ನೆರವೇರಿಸುವಿರಿ. ಸಾಂಸ್ಕೃತಿಕ ರಂಗದಲ್ಲಿ ಮೇಲ್ಮಟ್ಟದ ಸಾಧನೆ ಮಾಡಬಹುದು.

ಮಕರ: ಆಸ್ತಿ ಮಾರಾಟಗಳ ವಹಿವಾಟುಗಳಲ್ಲಿ ಎಣಿಕೆಗೂ ಮೀರಿದ ಲಾಭ ಕಾಣುವಿರಿ. ಹೆಚ್ಚಿನ ಅಧ್ಯಯನಕ್ಕೆ ಮನೆಯವರಿಂದ ಉತ್ತೇಜನ ದೊರೆಯುತ್ತದೆ. ಸಾಹಿತ್ಯದಲ್ಲಿ ಅಭಿರುಚಿ ಹೆಚ್ಚುತ್ತದೆ. ಶಸ್ತ್ರ ಚಿಕಿತ್ಸೆ ಅನಿವಾರ್ಯ.


ಕುಂಭ: ಕೆಲಸದ ಒತ್ತಡಕ್ಕೆ ಕರ್ತವ್ಯ ನಿಷ್ಠೆಯಿಂದ ಮೇಲಧಿಕಾರಿಗಳ ಗಮನಕ್ಕೆ ಬಂದಿರುವುದೇ ಮೂಲ ಕಾರಣವಾಗುತ್ತದೆ. ಮರದ ವ್ಯವಹಾರ ಮಾಡುವವರಿಗೆ ಉತ್ತಮ ಆರ್ಥಿಕ ಮುನ್ನಡೆ ತೋರಿಬರುತ್ತದೆ.

ಮೀನ: ಮಕ್ಕಳ ಒಡನಾಟದಿಂದ ಹೆಚ್ಚಿನ ಸಂತೃಪ್ತಿ ನಿಮಗೆ ಈ ದಿನ ದೊರೆಯಲಿದೆ. ಮಕ್ಕಳ ಭವಿಷ್ಯದ ಮಾರ್ಗವನ್ನು ಗಮನಿಸಿ. ದಾನ-ಧರ್ಮ ಪ್ರವೃತ್ತಿಯನ್ನು ರೂಢಿಸಿಕೊಳ್ಳುವುದರಿಂದ ಶುಭ ಫಲಗಳು ಅನುಭವಕ್ಕೆ ಬರಲಿವೆ.

ಪದಬಂಧ 5099
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತವಾಗಿ ಬಂದಿರುವ ವ್ಯಕ್ತಿ (4)
3.ಈ ಪರಿ ಕಾಣುತ್ತಿದೆ ಕಾರ್ಯದ ಫಲ! (4)
5.ಸರ ತರಲು ಹಚ್ಚಿದ ಪಾಳಿ! (3)
6.ವನದ ಕೊನೆಗೆ ಮಾಡಿದ ಹೋಮ (3)
8.ಅತ್ತಿಂದಿತ್ತ ತೂಗಾಡುವ ವಸ್ತು (3)
9. ಪತ್ರದಲ್ಲಿ ನಿರ್ಮಲವಾದುದು ಕಾಣುತ್ತಿದೆ (3)
10.ಬನದ ಹತ್ತಿರ ನೀಡಿದ ಮುತ್ತು (3)
11.ಧಾನ್ಯ ಶೇಖರಿಸುವ ಸ್ಥಳ (3)
12.ಹೆಚ್ಚು ಪದದ ವಿರುದ್ಧ ಪದ (3)
14.ಬದಿಯಲ್ಲಿ ಕಾಣುತ್ತಿರುವ ಜೈನ ದೇವಾಲಯ (3)
16.ಕಣದಲ್ಲಿ ಹಾಕಿದ ಲಗಾಮು (4)
17.ಮಧ್ಯರಾತ್ರಿಯಿದು (4)

ಮೇಲಿಂದ ಕೆಳಕ್ಕೆ
1.ಆ ಗ್ರಹ ಕಾಣುತ್ತಲೇ ಮಾಡಿದ ಹಟ! (3)
2.ಕನಸಲ್ಲಿ ಕಾಣುತ್ತಿರುವ ಕೊಳೆ! (2)
3.ಪದಾತಿ ಜೊತೆಯಿರುವ ಗಂಡ (2)
4.ಕರುವಿಗೆ ತೋರಿದ ದಯೆ (3)
7.ಇದು ತಾರೆಗಳ ಗುಂಪು (5)
8.ಅಯಸ್ಕಾಂತವನ್ನು ಹೀಗೂ ಕರೆವರು (5)
11.ತಿರುಗಿಸಿದರೂ ಇದು ಚಿನ್ನ (3)
13.ಮೆದು ಮಾತಿನವನ ಮಸ್ತಿಷ್ಕ! (3)
14.ಬಡಗಣ ದಿಕ್ಕಿನಲ್ಲಿ ನೆರೆದಿರುವ ಗುಂಪು (2)
15.ಇಪ್ಪತ್ನಾಲ್ಕು ಗಂಟೆಗಳ ಅವಧಿ (2)



5098ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಕಲನ 2.ಪ್ರಗತಿ
4.ಕಣಕ 6.ಉದರ
7.ನಾಮಕರಣ 10.ಕಲ್ಯಾಣ
11.ಶರಧಿ 13.ಗರುಡ
14.ತಪರಾಕು

ಮೇಲಿಂದ ಕೆಳಕ್ಕೆ:
1.ಸಂದೂಕ 2.ಪ್ರಚಾರ
3.ತಿಕ್ಕಲು 5.ಕವಿನಾ
6.ಉಪಕರಣ 8.ಣರಶ
9.ಸುರಂಗ 10.ಕನ್ನಡ
12.ಧಿಮಾಕ

ಸುಡೊಕು 5485

	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5484 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

'ಅನುಕಂಪದ ನೌಕರಿ ಹಕ್ಕು ಅಲ್ಲ'



ನವದೆಹಲಿ (ಪಿಟಿಐ): ಅನುಕಂಪದ ಆಧಾರದಲ್ಲಿ ನೀಡಲಾಗುವ ನೌಕರಿ ಹಕ್ಕು ಅಲ್ಲ; ಉದ್ಯೋಗಿ ಅಕಾಲ ಮರಣಕ್ಕೆ ಈಡಾದಾಗ, ಆ ವ್ಯಕ್ತಿಯ ಕುಟುಂಬವು ಸಂಕಷ್ಟದಿಂದ ಹೊರಬರಬೇಕು ಎಂಬ ಉದ್ದೇಶದಿಂದ ನೀಡಲಾಗುವ ನೆರವು ಮಾತ್ರ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವಂತೆ ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿದ್ದ ಏಕಸದಸ್ಯ ಪೀಠವು, ಅರ್ಜಿ ನೀಡುವ ಬಗ್ಗೆ ಪರಿಶೀಲನೆ ನಡೆಸುವಂತೆ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್, ಟ್ರಾವಂಕೋರ್ ಕಂಪನಿಗೆ ಸೂಚಿಸಿತ್ತು. ಈ ಆದೇಶವನ್ನು ಕೇರಳ ಹೈಕೋರ್ಟ್‌ನ ವಿಭಾಗೀಯ ಪೀಠ ಅನುಮೋದಿಸಿತ್ತು.

ಆದರೆ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಕೃಷ್ಣ ಮುರಾರಿ ಅವರ ಪೀಠವು ಕೇರಳ ಹೈಕೋರ್ಟ್‌ನ ಈ ಆದೇಶವನ್ನು ವಜಾ ಮಾಡಿದೆ.


'ಅರ್ಜಿದಾರ ಮಹಿಳೆಯ ತಂದೆಯು 1995ರಲ್ಲಿ ಉದ್ಯೋಗದಲ್ಲಿದ್ದ ಸಮಯದಲ್ಲಿ ಮೃತಪಟ್ಟಿದ್ದಾರೆ. ಆದರೆ ಮೃತರ ಪತ್ನಿಯು (ಅರ್ಜಿದಾರರ ತಾಯಿ) ಉದ್ಯೋಗದಲ್ಲಿದ್ದರು. ಹೀಗಾಗಿ ಅರ್ಜಿದಾರರು ಅನುಕಂಪದ ಆಧಾರದಲ್ಲಿ ನೌಕರಿ ಪಡೆಯಲು ಅರ್ಹರಲ್ಲ' ಎಂದು ಸುಪ್ರೀಂ ಕೋರ್ಟ್ ಪೀಠ ಸ್ಪಷ್ಟಪಡಿಸಿದೆ.

'ನೌಕರ ಮೃತಪಟ್ಟು 24 ವರ್ಷಗಳಷ್ಟು ಸುದೀರ್ಘ ಸಮಯ ಕಳೆದಿದ್ದು, ಅರ್ಜಿದಾರ ಮಹಿಳೆಯು ಅನುಕಂಪದ ಆಧಾರದಲ್ಲಿ ಉದ್ಯೋಗ ಪಡೆಯಲು ಆಗದು ಎಂದು ನ್ಯಾಯಮೂರ್ತಿಗಳು ಸೆ.30ರಂದು ನೀಡಿದ್ದ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ ಮಾರ್ಗಸೂಚಿ ಪ್ರಕಟ; ಪದಾಧಿಕಾರಿಗಳಿಗೆ ನಿಯಮ

ಹುದ್ದೆ ತೊರೆದರೆ ಪ್ರಚಾರಕ್ಕೆ ಅವಕಾಶ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೀಯ ಚುನಾವಣೆಗೆ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿದೆ. ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಲು ಬಯಸುವ ಪದಾಧಿಕಾರಿಗಳು ಪಕ್ಷದ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಪ್ರಚಾರ ಕಣಕ್ಕೆ ಇಳಿಯಬೇಕು ಎಂಬ ನಿಯಮವನ್ನು ರೂಪಿಸಲಾಗಿದೆ.



ಮಲ್ಲಿಕಾರ್ಜುನ ಖರ್ಗೆ



ಶಶಿ ತರೂರ್

ಮಲ್ಲಿಕಾರ್ಜುನ ಖರ್ಗೆ ಹಾಗೂ ಶಶಿ ತರೂರ್ ಅವರು ಚುನಾವಣಾ ಕಣದಲ್ಲಿದ್ದು, ಪದಾಧಿಕಾರಿಗಳು ತಮ್ಮ ಇಷ್ಟದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಬಹುದು ಎಂದು ಪಕ್ಷದ ಚುನಾವಣಾ ಪ್ರಾಧಿಕಾರ ತಿಳಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು, ಉಸ್ತುವಾರಿಗಳು, ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು, ಸಂಘಟನೆಯ ವಿವಿಧ ವಿಭಾಗಗಳು ಹಾಗೂ ಘಟಕಗಳ ಮುಖ್ಯಸ್ಥರು ಹಾಗೂ ಎಲ್ಲ ಅಧಿಕೃತ ವಕ್ತಾರರು ಯಾವುದೇ ಅಭ್ಯರ್ಥಿಯ ಪರವಾಗಿ ಅಥವಾ ವಿರುದ್ಧವಾಗಿ ಪ್ರಚಾರ ನಡೆಸುವಂತಿಲ್ಲ ಎಂದು ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ.



ವಿವಿಧ ಪ್ರದೇಶ ಕಾಂಗ್ರೆಸ್ ಸಮಿತಿಗಳ (ಪಿಸಿಸಿ) 9,000ಕ್ಕೂ ಹೆಚ್ಚು ಪದಾಧಿಕಾರಿಗಳು ಮತದಾನದ ಹಕ್ಕು ಹೊಂದಿದ್ದು, ಅ.17ರಂದು ಚುನಾವಣೆ ನಡೆಯಲಿದೆ. ಎರಡು ದಿನಗಳ ಬಳಿಕ ಫಲಿತಾಂಶ ಪ್ರಕಟವಾಗಲಿದೆ.

ರಾಜ್ಯಗಳಿಗೆ ಚುನಾವಣಾ ಪ್ರಚಾರಕ್ಕೆ ತೆರಳುವ ಅಭ್ಯರ್ಥಿಗೆ ಅಲ್ಲಿನ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ನೆರವು ನೀಡಬೇಕು. ಆದರೆ, ಅಭ್ಯರ್ಥಿಯ ಪರವಾಗಿ ಪಿಸಿಸಿ ಅಧ್ಯಕ್ಷರೇ ಸಭೆ ಕರೆಯುವಂತಿಲ್ಲ. ಅಭ್ಯರ್ಥಿಯು ಬಯಸಿದಲ್ಲಿ, ಅವರಿಗೆ ಸಭೆ ನಡೆಸಲು ಬೇಕಾಗುವ ಸಭಾಂಗಣ, ಕುರ್ಚಿ, ಪ್ರಚಾರ ಸಲಕರಣೆಗಳನ್ನು ಒದಗಿಸಬಹುದು ಎಂದು ಮಾರ್ಗಸೂಚಿ ಸ್ಪಷ್ಟಪಡಿಸಿದೆ.

ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯ ಸೂಚಕರು ಅಥವಾ ಸಂಭಾವಿತರು ಸಭೆ ಕರೆಯಬಹುದು. ಅಭ್ಯರ್ಥಿಗಳು ಆಸಕ್ತಿಕರ ಕರಪತ್ರ ಪ್ರಚಾರವನ್ನಾಗಲೀ, ಮತದಾನದ ಸಮಯದಲ್ಲಿ ಮತದಾರರನ್ನು ಕರೆತರಲು ವಾಹನ ವ್ಯವಸ್ಥೆಯನ್ನಾಗಲೀ ಕಲ್ಪಿಸುವಂತಿಲ್ಲ ಎಂದು ತಿಳಿಸಲಾಗಿದೆ.

ಮಾರ್ಗಸೂಚಿಯ ಅಂಶಗಳನ್ನು ಸ್ವಾಗತಿಸುವುದಾಗಿ ಶಶಿ ತರೂರ್ ಹೇಳಿದ್ದಾರೆ. ವ್ಯತಿರಿಕ್ತವಾಗಿ ಕಾಂಗ್ರೆಸ್ ಮುಖ್ಯಸ್ಥ ಹುದ್ದೆಗೆ ತಾವು ರಾಜೀನಾಮೆ ಸಲ್ಲಿಸಿರುವುದಾಗಿ ಅವರು ತಿಳಿಸಿದ್ದಾರೆ.

ಇದು ನಮ್ಮ ಗುದ್ದಾಟವಲ್ಲ: ತರೂರ್

ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅಪಾರ ಗೌರವವಿದ್ದು, ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಲ್ಲ ಎಂದು ಶಶಿ ತರೂರ್ ಅವರು ಸೋಮವಾರ ಹೇಳಿದ್ದಾರೆ. ಬಿಜೆಪಿಯನ್ನು ಎದುರಿಸಬೇಕಾದರೆ, ಕಾಂಗ್ರೆಸ್ ಪಕ್ಷವು ಪುನಶ್ಚೇತನಗೊಳ್ಳುವ ಅಗತ್ಯ ಇದೆ ಎಂದು ಅವರು ಪ್ರತಿಪಾದಿಸಿದ್ದಾರೆ.

'ನಾವೆಲ್ಲರೂ ಕಾಂಗ್ರೆಸ್ ಪಕ್ಷದಲ್ಲಿದ್ದು, ಬಿಜೆಪಿ ವಿರುದ್ಧ ಹೋರಾಟ ನಡೆಸಬೇಕೇ ಹೊರತು ಪರಸ್ಪರ ಅಲ್ಲ. ಈ ಹೋರಾಟ ಎಷ್ಟು ಪರಿಣಾಮಕಾರಿಯಾಗಿ 'ಇರಬೇಕು' ಎಂದು ನಿರ್ಧರಿಸುವುದು ಮತದಾರರ ಮೇಲಿದೆ' ಎಂದು ಅವರು ಹೈದರಾಬಾದ್‌ನಲ್ಲಿ ಹೇಳಿದ್ದಾರೆ.

'ದೇಶದಲ್ಲಿ ಕಾಂಗ್ರೆಸ್ ಪುನರುತ್ಥಾನ ಆಗಬೇಕು ಎಂಬುದು ನಮ್ಮ ಬಯಕೆ. ಬಿಜೆಪಿಯನ್ನು ಎದುರಿಸುವಲ್ಲಿ ಹಾಗೂ ಅದು ಅನುಸರಿಸುತ್ತಿರುವ ಅಸಾಧಾರಣ ಚುನಾವಣಾ ತಂತ್ರಗಳನ್ನು ಮೀರಿಸುವಲ್ಲಿ ಕಾಂಗ್ರೆಸ್ ಪಕ್ಷ ಎದುರಿಸುತ್ತಿರುವ ಸವಾಲುಗಳನ್ನು ಹೇಗೆ ಮೆಟ್ಟಿ ನಿಲ್ಲಬೇಕು ಎಂಬ ವಿಚಾರದಲ್ಲಿ ಈ ಚುನಾವಣೆ ಉಳಿದವುಗಳಿಗಿಂತ ಭಿನ್ನವಾಗಿದೆ. ಈ ಚುನಾವಣೆಯು ಕುಟುಂಬದೊಳಗಿನ ಚರ್ಚೆ ಇದ್ದಂತೆ. ಇಲ್ಲಿ ಯಾವುದೇ ಗುದ್ದಾಟ ಇಲ್ಲ. ಖರ್ಗೆ ಅವರು ಅಪಾರ ಅನುಭವ, ಸಾಮರ್ಥ್ಯ ಹಾಗೂ ಜ್ಞಾನ ಹೊಂದಿದ್ದಾರೆ. ಚುನಾವಣೆಯಲ್ಲಿ ಯಾರೇ ಗೆದ್ದರೂ, ಅದು ಕಾಂಗ್ರೆಸ್‌ನ ಅತಿದೊಡ್ಡ ಗೆಲುವು' ಎಂದು ತರೂರ್ ಹೇಳಿದ್ದಾರೆ.

ಪಾಕ್ ಮೀನುಗಾರಿಕೆ ದೋಣಿ ವಶ

ಅಹಮದಾಬಾದ್ (ಪಿಟಿಐ): ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಗಸ್ತು ತಂಡವು ಗುಜರಾತ್‌ನ ಕಚ್ ಜಿಲ್ಲೆಯ 'ಹರಾಮಿ ನಲ್ಲಾ' ಕ್ರೀಕ್‌ನಲ್ಲಿ ಪಾಕಿಸ್ತಾನದ ಮೀನುಗಾರಿಕಾ ದೋಣಿಯನ್ನು ಸೋಮವಾರ ವಶಪಡಿಸಿಕೊಂಡಿದೆ.

ಬಿಎಸ್‌ಎಫ್ ಸಿಬ್ಬಂದಿ ಸ್ಥಳಕ್ಕೆ ತೆರಳುತ್ತಿದ್ದಂತೆ ಕೆಲವು ಮೀನುಗಾರರು ಪಾಕಿಸ್ತಾನದತ್ತ ಪರಾರಿಯಾದರು. ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದರು.



ದೆಹಲಿ ಹೊರವಲಯ ಗುರುಗ್ರಾಮದ ಹಳೆಯ ಕಾರ್ಖಾನೆ ಕಟ್ಟಡವೊಂದನ್ನು ಸೋಮವಾರ ನೆಲಸಮಗೊಳಿಸುತ್ತಿದ್ದ ವೇಳೆ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಮೂರು ಅಂತಸ್ತಿನ ಕಟ್ಟಡವನ್ನು ಧ್ವಂಸಗೊಳಿಸುವ ಕಾರ್ಯದಲ್ಲಿ ಆರು ಮಂದಿ ಕಾರ್ಮಿಕರು ತೊಡಗಿಕೊಂಡಿದ್ದರು. ಈ ವೇಳೆ ಕಟ್ಟಡ ಕುಸಿದಿದೆ — ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

'200 ರೈಲು ನಿಲ್ದಾಣಗಳು ಮೇಲ್ದರ್ಜೆಗೆ: ಯೋಜನೆ'



ಅಶ್ವಿನಿ ವೈಷ್ಣವ್

ಜಿರಾಕಪುರ (ಪಿಟಿಐ): ಆಧುನಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ದೇಶದಾದ್ಯಂತ ಸುಮಾರು 200 ರೈಲ್ವೆ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸೋಮವಾರ ಇಲ್ಲಿ ತಿಳಿಸಿದರು.

'ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಬೋಗಿ ನಿರ್ವಹಣಾ ಕಾರ್ಖಾನೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಅವರು, ಮೇಲ್ದರ್ಜೆಗೆ ಏರಿಸುವ ಕಾಮಗಾರಿ 32 ನಿಲ್ದಾಣಗಳಲ್ಲಿ ಆರಂಭವಾಗಿದೆ. 47 ನಿಲ್ದಾಣಗಳಿಗೆ ಸಂಬಂಧಿಸಿ ಟೆಂಡರ್ ಕರೆಯಲಾಗಿದೆ' ಎಂದರು.

ಒಟ್ಟು 200 ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲು ಕ್ರಿಯಾಯೋಜನೆ ರೂಪಿಸಲಾಗಿದೆ. ಫುಡ್‌ಕೋರ್ಟ್, ಪ್ರಯಾಣಿಕರ ನಿರೀಕ್ಷಣಾ ಕೊಠಡಿಗಳ ನಿರ್ಮಾಣ, ಮಕ್ಕಳಿಗೆ ಮನರಂಜನೆ ತಾಣ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು.

ಬೆಟ್ಟಿಂಗ್ ಜಾಹೀರಾತು ಪ್ರಸಾರ ಬೇಡ: ಕೇಂದ್ರ

ನವದೆಹಲಿ (ಪಿಟಿಐ): ವಿದೇಶಿ ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್‌ಗಳ ಜಾಹೀರಾತುಗಳನ್ನು ಸುದ್ದಿ ವೆಬ್‌ಸೈಟ್‌ಗಳು, ಒಟಿಟಿ ವೇದಿಕೆಗಳು ಹಾಗೂ ಉಪಗ್ರಹ ವಾಹಿನಿಗಳು ಪ್ರಸಾರ ಮಾಡಬಾರದು ಎಂದು ಕೇಂದ್ರ ಸರ್ಕಾರ ಸೋಮವಾರ ಸಲಹೆ ನೀಡಿದೆ. ಭಾರತೀಯ ವೀಕ್ಷಕರನ್ನು ತಲುಪಬೇಕು ಎಂಬ ಉದ್ದೇಶದಿಂದ ಜಾಹೀರಾತು ಪ್ರಸಾರ ಮಾಡುವುದು ಬೇಡ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಜಾಹೀರಾತು ನೀಡುತ್ತಿರುವ ವೆಬ್‌ಸೈಟ್‌ಗಳ ಪಟ್ಟಿಯನ್ನು ಸಚಿವಾಲಯ ಹಂಚಿಕೊಂಡಿದೆ.

ಸಿಸಿಯುನಲ್ಲಿ ಮುಲಾಯಂ ಸಿಂಗ್

ಗುರುಗ್ರಾಮ (ಪಿಟಿಐ): ಉತ್ತರಪ್ರದೇಶ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಅವರು ಇಲ್ಲಿನ ಮೇದಾಂತ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿಯೇ (ಸಿಸಿಯು) ಇದ್ದು, ತಜ್ಞರ ತಂಡವು ನಿಗಾವಹಿಸಿದೆ ಎಂದು ಆಸ್ಪತ್ರೆಯ ಹೇಳಿಕೆ ತಿಳಿಸಿದೆ.



ಮುಲಾಯಂ ಸಿಂಗ್

82 ವರ್ಷದ ಮುಲಾಯಂ ಸಿಂಗ್ ಅವರು ಆಗಸ್ಟ್ 22ರಿಂದಲೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜುಲೈ ತಿಂಗಳಲ್ಲಿಯೂ ಅವರು ಕೆಲದಿನ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ಹೇಳಿಕೆಯು ತಿಳಿಸಿದೆ.

ಪುತ್ರ ಅಖಿಲೇಶ್ ಯಾದವ್, ಸೊಸೆ ಡಿಂಪಲ್ ಯಾದವ್, ಸಹೋದರ ಶಿವಪಾಲ್ ಸಿಂಗ್ ಆಸ್ಪತ್ರೆಗೆ ಭೇಟಿ ನೀಡಿದ್ದರು. 'ಆರೋಗ್ಯದ ಸ್ಥಿತಿ ಕುರಿತು ಕಾಲಕಾಲಕ್ಕೆ ಮಾಹಿತಿ ನೀಡಲಾಗುವುದು' ಎಂದು ಸಮಾಜವಾದಿ ಪಕ್ಷವು ಟ್ವೀಟ್ ಮಾಡಿದೆ.

ಲಖೀಂಪುರ ಖೀರಿ ಹಿಂಸಾಚಾರಕ್ಕೆ ಒಂದು ವರ್ಷ

ವಿರೋಧ ಪಕ್ಷಗಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ವರ್ಷದ ಅ. 3ರಂದು ಉತ್ತರ ಪ್ರದೇಶದ ಲಖೀಂಪುರ ಖೀರಿ ಜಿಲ್ಲೆಯ ಟಿಕುನಿಯಾ ಗ್ರಾಮದಲ್ಲಿ ನಡೆದಿದ್ದ ಹಿಂಸಾಚಾರಕ್ಕೆ ಒಂದು ವರ್ಷ ಪೂರ್ಣಗೊಂಡಿದ್ದು, ಹಿಂಸಾಚಾರದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿಸಿ ವಿರೋಧ ಪಕ್ಷಗಳು ಹಾಗೂ ರೈತ ಸಂಘಟನೆಗಳು ಕೇಂದ್ರ ಸರ್ಕಾರದ ವಿರುದ್ಧ ಸೋಮವಾರ ಕಿಡಿಕಾರಿವೆ.

ಉತ್ತರ ಪ್ರದೇಶದ ಆಗಿನ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಭೇಟಿಯನ್ನು ವಿರೋಧಿಸಿ ಧರಣಿ ನಡೆಸುತ್ತಿದ್ದ ರೈತರ ಮೇಲೆ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಕಾರು ಚಲಾಯಿಸಿದ್ದರು. ಘಟನೆಯಲ್ಲಿ ನಾಲ್ವರು ಮೃತಪಟ್ಟಿದ್ದರು. ಬಳಿಕ ನಡೆದ ಹಿಂಸಾಚಾರದಲ್ಲಿ ಪತ್ರಕರ್ತ ಸೇರಿ ನಾಲ್ವರು ಅಸುನೀಗಿದ್ದರು.

> ಉತ್ತರ ಪ್ರದೇಶ ಸರ್ಕಾರಕ್ಕೆ ಕಾನೂನು ವ್ಯವಸ್ಥೆ ಅಥವಾ ಸಂವಿಧಾನದ ಮೇಲೆ ನಂಬಿಕೆ ಇಲ್ಲ. ಸರ್ಕಾರವು ಅಧಿಕಾರ ದುರ್ಬಳಕೆ ಮಾಡಿಕೊಂಡಿದೆ
> **ರಾಕೇಶ್ ಟಿಕಾಯತ್,** ಭಾರತೀಯ ಕಿಸಾನ್ ಯೂನಿಯನ್‌ನ ರಾಷ್ಟ್ರೀಯ ವಕ್ತಾರ

'ಕೇಂದ್ರವು ಜಾರಿಗೊಳಿಸಲು ಮುಂದಾಗಿದ್ದ ಕೃಷಿ ಮಸೂದೆಗಳ ವಿರುದ್ಧ ಧರಣಿ ನಡೆಸುತ್ತಿದ್ದವರ ಮೇಲೆ ಕಾರು ಹರಿಸಿ ನಾಲ್ವರನ್ನು ಹತ್ಯೆ ಮಾಡಿದ್ದು ದುರದೃಷ್ಟಕರ. ಇದು ರೈತರಿಗೆ ಮಾಡಿದ ಅವಮಾನ. ಪ್ರಕರಣದ ಆರೋಪಿ ಅಜಯ್ ಮಿಶ್ರಾ ಅವರನ್ನು ಸಚಿವ ಸ್ಥಾನದಲ್ಲಿ ಉಳಿಸಿಕೊಂಡಿರುವುದು ದುರ್ದೈವದ ಸಂಗತಿ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಸಿಂಗ್, 'ಲಖೀಂಪುರ ಖೀರಿ ಹತ್ಯಾಕಾಂಡವು ಮರೆಯಲು ಸಾಧ್ಯವಾಗದಂಥದ್ದು' ಎಂದಿದ್ದಾರೆ.

'ದೇಶದ ರೈತರು ಆ ಘಟನೆಯನ್ನು ಎಂದಿಗೂ ಮರೆಯುವುದಿಲ್ಲ. ಮೃತರ ಕುಟುಂಬಗಳಿಗೆ ನ್ಯಾಯ ಒದಗಿಸಲು ಸರ್ಕಾರ ವಿಳಂಬ ಮಾಡುತ್ತಿದೆ' ಎಂದು ಬಿಕೆಯುನ ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಆರೋಪಿಸಿದ್ದಾರೆ.

ಉತ್ತರ ಪ್ರದೇಶ: ವಿದ್ಯಾರ್ಥಿಗಳ ಮುಂದೆ ಮದ್ಯ ಕುಡಿದ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಲಖನೌ: ತರಗತಿಯಲ್ಲಿ ವಿದ್ಯಾರ್ಥಿಗಳ ಎದುರೇ ಮದ್ಯ ಕುಡಿದ ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯ ಪ್ರಾಥಮಿಕ ಶಾಲೆಯೊಂದರ ಶಿಕ್ಷಕನ ವಿಡಿಯೊವೊಂದು ಸೋಮವಾರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಶಿಕ್ಷಕನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಶಿಕ್ಷಕನನ್ನು ಶೈಲೇಂದರ್ ಸಿಂಗ್ ಗೌತಮ್ ಎಂದು ಗುರುತಿಸಲಾಗಿದೆ.

ಈ ವಿಡಿಯೊವನ್ನು ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಅವರು ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಹಂಚಿಕೊಂಡಿದ್ದು ಶಿಕ್ಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸರಲ್ಲಿ ಆಗ್ರಹ ಪಡಿಸಿದ್ದಾರೆ.

'ಘಟನೆಯ ಕುರಿತ ತನಿಖೆಗಾಗಿ ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ. ವರದಿ ಬಂದ ಬಳಿಕ ಶಿಕ್ಷಕನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಲೆಯ ಆಡಳಿತ ಮಂಡಳಿ ತಿಳಿಸಿದೆ.

ವಿಡಿಯೊದಲ್ಲಿ ಏನಿದೆ?: ಶಾಲೆಯ ತರಗತಿಯಲ್ಲಿ ಇರಿಸಿದ್ದ ಟೇಬಲ್ ಕೆಳಗೆ ಮತ್ತು ತಮ್ಮ ಬೆನ್ನ ಹಿಂದೆ ಬಿಯರ್ ಬಾಟಲಿಗಳನ್ನು ಮುಚ್ಚಿಟ್ಟುಕೊಂಡು, ಶೈಲೇಂದರ್ ಅವರು ವಿದ್ಯಾರ್ಥಿಗಳೊಂದಿಗೆ ತರಗತಿಯಲ್ಲಿರುವ ದೃಶ್ಯಗಳು ವಿಡಿಯೊದಲ್ಲಿವೆ.

ವಿಡಿಯೊವನ್ನು ಯಾರು ಚಿತ್ರೀಕರಿಸಿದ್ದಾರೆ ಎನ್ನುವ ಬಗ್ಗೆ ಖಾತರಿ ಇಲ್ಲ. ಆದರೆ, ಶೈಲೇಂದರ್ ಅವರ ನಡೆಯನ್ನು ವಿರೋಧಿಸಿದ ವ್ಯಕ್ತಿಯೊಂದಿಗೆ, ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಶೈಲೇಂದರ್ ವಾದಿಸುತ್ತಿರುವ ದೃಶ್ಯ ಸೆರೆಯಾಗಿದೆ. ವಿಡಿಯೊ ಮಾಡಬೇಡಿ ಎಂದು ಮನವಿ ಮಾಡುತ್ತಿರುವ ದೃಶ್ಯವೂ ವಿಡಿಯೊದಲ್ಲಿದೆ. ಈ ವೇಳೆ ಶೈಲೇಂದರ್ ಪಕ್ಕದಲ್ಲೇ ಇರುವ ಶಿಕ್ಷಕಿಯೊಬ್ಬರು ನಶೆಯಲ್ಲಿರುವುದು ವಿಡಿಯೊದಲ್ಲಿದೆ.

ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಲು ಪರಿಸರವಾದಿಗಳ ಒತ್ತಾಯ • ನಿರ್ಧಾರ ಕೈಗೊಳ್ಳದ ವನ್ಯಜೀವಿ ಮಂಡಳಿ • ಆನ್‌ಲೈನ್ ಅಭಿಯಾನಕ್ಕೆ ಬೆಂಬಲ

ಹೆಸರಘಟ್ಟ: ಉಳಿದೀತೆ ಹಸಿರು ಪಟ್ಟ?

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ವೈವಿಧ್ಯಮಯ ಮತ್ತು ವಿಭಿನ್ನ ಜಾತಿಯ ಪಕ್ಷಿ ಮತ್ತು ಪ್ರಾಣಿಗಳ ಸಂಕುಲಕ್ಕೆ ಆಶ್ರಯ ತಾಣವಾಗಿರುವ ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎನ್ನುವ ಪರಿಸರವಾದಿಗಳ ಒತ್ತಾಸೆಗೆ ಸರ್ಕಾರ ದಿಟ್ಟ ನಿಲುವು ಪ್ರದರ್ಶಿಸದೆ ಮೀನಮೇಷ ಎಣಿಸುತ್ತಿದೆ.

ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಈ ಪ್ರದೇಶವನ್ನು ಸಮೃದ್ಧ ಹಸಿರು ತಾಣವನ್ನಾಗಿಯೇ ಉಳಿಸಿ, ಬೆಳೆಸಬೇಕು. ಇದು ಕೇವಲ ಹಸಿರು ಪ್ರದೇಶವಷ್ಟೇ ಅಲ್ಲ, ಸಮೃದ್ಧ 'ಆಮ್ಲಜನಕ ತಾಣ'ವೂ ಹೌದು ಎಂದು ಪರಿಸರವಾದಿಗಳು ಪ್ರತಿಪಾದಿಸುತ್ತಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯ ಕರ್ನಾಟಕ ರಾಜ್ಯ ರಾಜ್ಯ ವನ್ಯಜೀವಿ ಮಂಡಳಿ ಸ್ಪಷ್ಟವಾದ ನಿಲುವು ತೆಗೆದುಕೊಳ್ಳಲು ಇದುವರೆಗೂ ಸಾಧ್ಯವಾಗಿಲ್ಲ. ಮಂಡಳಿಯ ಸಭೆಯಲ್ಲಿ ಈ ವಿಷಯ ಕುರಿತಾದ ಕಾರ್ಯಸೂಚಿಯಲ್ಲಿ ಹಲವು ಬಾರಿ ಪ್ರಸ್ತಾಪವಾಗಿದೆ. ಆದರೆ, ಈ ವಿಷಯ ಚರ್ಚೆಗೆ ಕೈಗೆತ್ತಿಕೊಳ್ಳುವ ಮುನ್ನವೇ ಸಭೆಯನ್ನು ಮುಂದೂಡಿದ್ದೇ ಹೆಚ್ಚು. ಜನಪ್ರತಿನಿಧಿಗಳ ಒತ್ತಡದಿಂದಲೂ ಹಸಿರು ಉಳಿಸುವ ಕಾರ್ಯಕ್ಕೆ ವಿಘ್ನಗಳೇ ಹೆಚ್ಚಾಗಿವೆ.

'ಸಂರಕ್ಷಿತ ಪ್ರದೇಶವಾಗಿ ಘೋಷಿಸಿದರೆ ಮಾತ್ರ ಈ ಹುಲ್ಲುಗಾವಲು ಪ್ರದೇಶವನ್ನು ಉಳಿಸಿಕೊಳ್ಳಲು ಸಾಧ್ಯ. ಈ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಿಸಬೇಕು ಎನ್ನುವ ಪ್ರಸ್ತಾವವೂ ಈ ಹಿಂದೆ ಚರ್ಚೆಯಾಗಿತ್ತು. ಇದೇ ರೀತಿ ಮನಃಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಕಾಂಕ್ರೀಟ್ ಕಾಡು ನಿರ್ಮಾಣವಾಗಹುದು' ಎನ್ನುವ ಆತಂಕವನ್ನು ಪರಿಸರವಾದಿಗಳು ವ್ಯಕ್ತಪಡಿಸಿದ್ದಾರೆ.

ಹೆಸರಘಟ್ಟ ಸುತ್ತಮುತ್ತಲಿನ ಒಟ್ಟು 5,010 ಎಕರೆ ಪ್ರದೇಶವನ್ನು 'ಗ್ರೇಟರ್ ಹೆಸರಘಟ್ಟ ಸಂರಕ್ಷಿತ ಹುಲ್ಲುಗಾವಲು ಪ್ರದೇಶ' ಎಂದು ಘೋಷಿಸುವ ಪ್ರಸ್ತಾವ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಗೆ ಸಲ್ಲಿಕೆಯಾಗಿತ್ತು. ಈ ಪ್ರಸ್ತಾವವನ್ನು ಮಂಡಳಿಯು 2021ರ ಜನವರಿ 19ರಂದು ನಡೆದ ಸಭೆಯಲ್ಲಿ ತಿರಸ್ಕರಿಸಿತ್ತು. ಈ ನಿರ್ಧಾರ ಪ್ರಶ್ನಿಸಿ ಬೆಂಗಳೂರಿನ ವಿಜಯ್ ನಿಶಾಂತ್, ದೇವನಹಳ್ಳಿಯ ಎಂ.ಆರ್. ಸೀತಾರಾಮ್, ಕೋಡಿಹಳ್ಳಿಯ ಮಹೇಶ್ ಭಟ್ಟ, ಬೆಂಗಳೂರಿನ ಶ್ರೀನಿವಾಸನ್ ರಾಮಕೃಷ್ಣನ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ವನ್ಯಜೀವಿ (ರಕ್ಷಣೆ) ಕಾಯ್ದೆ–1972ರ ಸೆಕ್ಷನ್ 36ಎ ಅಡಿಯಲ್ಲಿ ಸಂರಕ್ಷಿತ ಮೀಸಲು ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಕೋರಿದ್ದರು. ಈ ಪ್ರಸ್ತಾವದ ಕುರಿತು ಪುನಃ ಚರ್ಚಿಸಿ ನಿರ್ಧಾರ ಕೈಗೊಳ್ಳುವಂತೆ ಹೈಕೋರ್ಟ್ ಮಂಡಳಿಗೆ ನಿರ್ದೇಶನ ನೀಡಿತ್ತು.

'ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಈ ಪ್ರದೇಶವು ಸಮೃದ್ಧ ಸಸ್ಯ ಸಂಪತ್ತನ್ನು ಹೊಂದಿದ್ದು, ಇಲ್ಲಿ ಅನೇಕ ಪ್ರಭೇದಗಳ ಪ್ರಾಣಿ, ಪಕ್ಷಿ ಮತ್ತು ಕೀಟಗಳಿವೆ. ಇದೊಂದು ಅತ್ಯುತ್ತಮ ಹುಲ್ಲುಗಾವಲು. ಚಳಿಗಾಲದಲ್ಲಿ ಹಿಮಾಲಯ ಮತ್ತು ಮಧ್ಯ ಏಷ್ಯಾದಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ' ಎಂಬ ಅಂಶವನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿತ್ತು.

ಸೆಪ್ಟೆಂಬರ್ 5ರಂದು ನಡೆಯಬೇಕಾಗಿದ್ದ ವನ್ಯಜೀವಿ ಮಂಡಳಿ ಸಭೆಯ ಕಾರ್ಯಸೂಚಿಯಲ್ಲಿ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಿತ ಪ್ರದೇಶ ಘೋಷಣೆ ಕುರಿತು ಕಾರ್ಯಸೂಚಿಯಲ್ಲಿ ಪ್ರಸ್ತಾವವಿತ್ತು. ಆದರೆ, ಈ ಸಭೆ ನಡೆಯಲಿಲ್ಲ.

ಶಿವಕೋಟೆ, ಹುರುಳಿಚಿಕ್ಕನಹಳ್ಳಿ, ಅರಕೆರೆ, ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಈ ಹುಲ್ಲುಗಾವಲು ಪ್ರದೇಶವು ರೈತರ ದನಕರುಗಳಿಗೆ ಮೇವಿನ ತಾಣವಾಗಿದೆ. ಇದನ್ನು ರಕ್ಷಿಸುವ ಜವಾಬ್ದಾರಿ ನಮ್ಮ ಮೇಲೆಯೂ ಇದೆ ಎಂದು ಸ್ಥಳೀಯರು ಹೇಳುತ್ತಾರೆ.

ಆನ್‌ಲೈನ್ ಅಭಿಯಾನಕ್ಕೆ ಬೆಂಬಲ: ಹೆಸರಘಟ್ಟ ಹುಲ್ಲುಗಾವಲು ರಕ್ಷಿಸಿ, ಪರಿಸರ ಉಳಿಸಿ ಎನ್ನುವ ಅಭಿಯಾನಕ್ಕೂ ಮತ್ತಷ್ಟು ಬಲ ದೊರೆತಿದೆ. ಎಲ್ಲ ವರ್ಗದ ಜನರು ಈ ಅಭಿಯಾನಕ್ಕೆ ಬೆಂಬಲ ಸೂಚಿಸಿದ್ದಾರೆ. ಈಗಾಗಲೇ ಲಕ್ಷಾಂತರ ಮಂದಿ ಸಹಿ ಹಾಕಿದ್ದಾರೆ.



ಹೆಸರಘಟ್ಟ ಹುಲ್ಲುಗಾವಲು ಪ್ರದೇಶ ಪ್ರಜಾವಾಣಿ ಚಿತ್ರ/ ರಂಜು ಪಿ



ವೈವಿಧ್ಯಮಯ ಪ್ರದೇಶ

ಬೆಂಗಳೂರಿನಲ್ಲಿ ಉಳಿದಿರುವ ಕೊನೆಯ ಹುಲ್ಲುಗಾವಲು ಆವಾಸಸ್ಥಾನ.

1912 ಎಕರೆ ಒಟ್ಟು ಕೆರೆ ಪ್ರದೇಶ

- ವಿವಿಧ ಜಾತಿಯ ಗಿಡ–ಮರಗಳು
- 235ಕ್ಕೂ ಹೆಚ್ಚು ಪ್ರಭೇದದ ಪಕ್ಷಿಗಳು
- 400 ಪ್ರಭೇದದ ಕೀಟಗಳು ಮತ್ತು ಚಿಟ್ಟೆಗಳು
- 356 ಎಕರೆ ಹುಲ್ಲುಗಾವಲು ಪ್ರದೇಶ

'ಹುಲ್ಲುಗಾವಲು ಪ್ರದೇಶದಿಂದ ರೈತರಿಗೆ ಅನುಕೂಲ'



'ಹುಲ್ಲುಗಾವಲು ಪ್ರದೇಶಕ್ಕೆ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೆಚ್ಚಾಗಿರುತ್ತದೆ. ಇಂತಹ ಪ್ರದೇಶಗಳನ್ನು ಅಭಿವೃದ್ಧಿ ಹೆಸರಿನಲ್ಲಿ ನಾಶವಾಗಲು ಅವಕಾಶ ನೀಡಬಾರದು. ಅಂತರ್ಜಲ ಹೆಚ್ಚಾಗಬೇಕಾದರೆ ಅರಣ್ಯ, ಹುಲ್ಲುಗಾವಲು ಪ್ರದೇಶಗಳು ಸಮೃದ್ಧವಾಗಿರಬೇಕು. ಪಶ್ಚಿಮ ಘಟ್ಟದಲ್ಲಿ ಇಡೀ ವರ್ಷ ನೀರು ಲಭ್ಯವಾಗುತ್ತದೆ. ಕಾಡು ಹಾಳಾಗಿರುವ ಪ್ರದೇಶದಲ್ಲಿ ನಾಲ್ಕು ತಿಂಗಳು ಮಾತ್ರ ದೊರೆಯುತ್ತದೆ. ಹುಲ್ಲುಗಾವಲು ಸಂರಕ್ಷಣೆಯಿಂದ ರೈತರಿಗೂ ಅನುಕೂಲಗಳಿದ್ದು, ಕೃಷಿ ಉತ್ಪನ್ನಗಳ ಇಳುವರಿಯೂ ಹೆಚ್ಚುತ್ತದೆ. ಜತೆಗೆ, ಕೀಟಗಳು ಸಹ ಹೆಚ್ಚಾಗಿರುತ್ತವೆ. ಇಂತಹ ಕೀಟಗಳಿಂದ ಬೆಳೆಗಳ ರಕ್ಷಣೆಗೂ ಅನುಕೂಲವಾಗುತ್ತದೆ. ಪ್ರಧಾನಮಂತ್ರಿ ಅವರು ರೈತರ ಆದಾಯವನ್ನು ದ್ವಿಗುಣಗೊಳಿಸುವುದಾಗಿ ಹೇಳಿದ್ದಾರೆ. ಇಂತಹ ಹುಲ್ಲುಗಾವಲುಗಳನ್ನು ರಕ್ಷಿಸಿದರೆ ಮಾತ್ರ ರೈತರ ಬದುಕು ಹಸನುಗೊಳಿಸಲು ಸಾಧ್ಯ. ನೀರು ಮತ್ತು ಪರಾಗಸ್ಪರ್ಶದ ಕೀಟಗಳಿರುವ ಜಾಗಗಳಲ್ಲಿ ಕೃಷಿಗೆ ಪೂರಕವಾದ ವಾತಾವರಣ ಸೃಷ್ಟಿಯಾಗುತ್ತದೆ. ಹುಲ್ಲುಗಾವಲು ಇರುವ ಪ್ರದೇಶಗಳಲ್ಲಿ ಪರಾಗಸ್ಪರ್ಶ ಹೆಚ್ಚಾಗಿರುತ್ತದೆ. ಇದರಿಂದ, ರೈತರ ಬೆಳೆಗಳ ಇಳುವರಿಗೂ ದ್ವಿಗುಣವಾಗುತ್ತದೆ. ಅಭಿವೃದ್ಧಿ ಎನ್ನುವುದು ಜನಪರವಾಗಿರಬೇಕು. ಪರಿಸರ ನಾಶ ಮಾಡಿ ಯಾವ ರೀತಿ ಅಭಿವೃದ್ಧಿ ಮಾಡಲು ಸಾಧ್ಯ. ನೀರು ಇಲ್ಲದೆಯೇ ಇದ್ದಾಗ ಏನು ಮಾಡಲು ಸಾಧ್ಯ. ಕೇವಲ ಬಿಲ್ಡರ್ಸ್‌ಗೆ ಅನುಕೂಲವಾಗುವ ಯೋಜನೆಗಳಿಂದ ಉಪಯೋಗವಾಗುವುದಿಲ್ಲ. ಜನರ ಬಗ್ಗೆ ಕಾಳಜಿ ಇರುವ ಯೋಜನೆ ರೂಪಿಸಬೇಕೇ ಹೊರತು ಲೂಟಿ ಮಾಡುವ ಯೋಜನೆ ರೂಪಿಸಬಾರದು. ಅನ್ಯ ಉದ್ದೇಶಗಳಿಗೆ ಈ ಪ್ರದೇಶವನ್ನು ಬಳಸಲು ಅವಕಾಶ ನೀಡಬಾರದು'.

ಡಾ. ಟಿ.ವಿ. ರಾಮಚಂದ್ರ, ಪರಿಸರ ವಿಜ್ಞಾನಿ

'ಇದು ವಿಭಿನ್ನ ಪ್ರದೇಶ'



ಬೆಂಗಳೂರು ಈಗ ಸುಮಾರು 1.5 ಕೋಟಿ ಜನಸಂಖ್ಯೆ ಹೊಂದಿದೆ. ನಗರದ ಉತ್ತರ ಭಾಗದಲ್ಲಿ ಯಾವುದೇ ರೀತಿಯ ವಿಶಾಲ ಪ್ರದೇಶದ ಹಸಿರು ಪ್ರದೇಶ ಇಲ್ಲ. ಇದು ಅತ್ಯಂತ ವಿಭಿನ್ನ ಸ್ಥಳ. ಹೀಗಾಗಿ, ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಮೀಸಲು ಪ್ರದೇಶವನ್ನಾಗಿ ಘೋಷಿಸಬೇಕು. ಇದರಿಂದ, ಈ ಅಂತರರಾಷ್ಟ್ರೀಯ ನಗರದಲ್ಲಿ ಉತ್ತಮ ಪರಿಸರದಲ್ಲಿ ಬದುಕಲು ಸಾಧ್ಯವಾಗುತ್ತದೆ. ಜತೆಗೆ, ಪ್ರವಾಹ, ಮಾಲಿನ್ಯ ಮತ್ತು ನೀರಿನ ಕೊರತೆಯಂತಹ ಸಮಸ್ಯೆಗಳಿಂದ ಪರಿಹಾರ ಪಡೆಯಲು ಸಾಧ್ಯ. ಜನರ ಮತ್ತು ಪರಿಸರ ಹಾಗೂ ಭವಿಷ್ಯದ ಹಿತಾಸಕ್ತಿ ದೃಷ್ಟಿಯಿಂದ ಮುಖ್ಯಮಂತ್ರಿ ಅವರು ಉತ್ತಮ ನಿರ್ಧಾರ ಕೈಗೊಳ್ಳಬೇಕು.

ವಿಜಯ್ ನಿಶಾಂತ್, ವೃಕ್ಷ ಫೌಂಡೇಷನ್ ಅಧ್ಯಕ್ಷ

'ಭವಿಷ್ಯದ ಪೀಳಿಗೆಗಾಗಿ ರಕ್ಷಿಸಬೇಕು'



'ಹುಲ್ಲುಗಾವಲು ಪ್ರದೇಶದಿಂದ ರೈತರಿಗೆ ಅನುಕೂಲ. ಈ ಪ್ರದೇಶ ನಾಶವಾದರೆ ಭವಿಷ್ಯದ ಪೀಳಿಗೆಗೆ ಸಂಕಷ್ಟ ಎದುರಿಸಬೇಕಾಗುತ್ತದೆ. ನಗರದಲ್ಲಿ ಲಾಲ್‌ಬಾಗ್, ಕಬ್ಬನ್ ಪಾರ್ಕ್ ಇದೆ. ಅದೇ ರೀತಿಯಲ್ಲಿ ಹುಲ್ಲುಗಾವಲು ಪ್ರದೇಶ ಇದೆ. ಇದನ್ನು ನಾಶ ಮಾಡಿ, ಕಾಂಕ್ರೀಟ್ ಕಾಡು ನಿರ್ಮಿಸಿದರೆ ನಾವೇ ತೊಂದರೆ ಎದುರಿಸಬೇಕಾಗುತ್ತದೆ. ಈ ಪ್ರದೇಶದ ಸಂರಕ್ಷಣೆಗೆ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ಉತ್ತಮ ವಾತಾವರಣಕ್ಕಾಗಿ ಬೆಂಗಳೂರಿನಿಂದ ಇಲ್ಲಿಗೆ ಸಾವಿರಾರು ಮಂದಿ ಬರುತ್ತಾರೆ. ರಿಯಲ್ ಎಸ್ಟೇಟ್‌ನವರಿಗೆ ಅನುಕೂಲ ಕಲ್ಪಿಸಲು ಪರಿಸರ ಹಾಳು ಮಾಡುವ ಕಾರ್ಯಕ್ಕೆ ಯಾರೂ ಮುಂದಾಗಬಾರದು.

ಬಿ.ವಿ. ಅಶ್ವತ್ಥ ನಾರಾಯಣಗೌಡ, ರೈತ ಸಂಘದ ಬೆಂಗಳೂರು ಉತ್ತರ ತಾಲ್ಲೂಕು ಪ್ರಧಾನ ಕಾರ್ಯದರ್ಶಿ

ಯಥಾಸ್ಥಿತಿ ಕಾಪಾಡಬೇಕು

'ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಈಗಿರುವ ರೀತಿಯಲ್ಲೇ ಯಥಾಸ್ಥಿತಿ ಕಾಪಾಡಬೇಕು. ಬಫರ್ ಝೋನ್ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ದನ ಕರುಗಳನ್ನು ಇಲ್ಲಿ ಮೇಯಿಸಬಹುದು. ಈ ಪ್ರದೇಶಕ್ಕೆ ಬೇಲಿ ಹಾಕಿ ಎಂದು ಯಾರೂ ಹೇಳಿಲ್ಲ. ಹುಲ್ಲುಗಾವಲು ಪ್ರದೇಶವು ಇಂಗಾಲ ಅನ್ನು ಹೀರಿಕೊಳ್ಳುತ್ತದೆ ಮತ್ತು ಅಂತರ್ಜಲವೂ ಹೆಚ್ಚುತ್ತದೆ. ಭವಿಷ್ಯದ ದೃಷ್ಟಿಯಿಂದ ಈ ಪ್ರದೇಶವನ್ನು ರಕ್ಷಿಸಬೇಕು.

ಮಹೇಶ್ ಭಟ್ಟ, ಪರಿಸರವಾದಿ

ಹಣ ಡ್ರಾ ಮಾಡಿಕೊಳ್ಳಲು ನೆರವಾಗುವ ನೆಪದಲ್ಲಿ ಗ್ರಾಹಕರನ್ನು ವಂಚಿಸುತ್ತಿದ್ದ ಆರೋಪಿಗಳು

ಎಟಿಎಂ ಕಾರ್ಡ್ ಕದ್ದು ವಂಚನೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಟಿಎಂ ಘಟಕಕ್ಕೆ ಹೋಗುವ ಗ್ರಾಹಕರ ಗಮನ ಬೇರೆಡೆ ಸೆಳೆದು ಕಾರ್ಡ್ ಕದ್ದು ವಂಚಿಸುತ್ತಿದ್ದ ಐವರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಬಳ್ಳಾಪುರ ಜಿಲ್ಲೆಯ ಗುಂಡಿಬಂಡ ಅರೂರು ಗ್ರಾಮದ ಟಿ.ಎನ್. ಮೋಹನ್ ಅಲಿಯಾಸ್ ಮಧು (42), ಕೆ. ಸಂಪತ್ (29), ಅಶೋಕ ಅಲಿಯಾಸ್ ಬಸ್ಯಾ (24), ಆಂಧ್ರ ಪ್ರದೇಶದ ಕೃಷ್ಣಮೂರ್ತಿ ಹಾಗೂ ಮೋಹನ್ ವೆಂಕಟರಾಮ ಬಂಧಿತರು. ಇವರಿಂದ ₹ 1.60 ಲಕ್ಷ ಮೌಲ್ಯದ ಕಾರು, 6 ಮೊಬೈಲ್ ಹಾಗೂ 25 ಎಟಿಎಂ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಗುಜರಾತ್‌ಗಳಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ಕೆ.ಆರ್. ಪುರ ಠಾಣೆ ವ್ಯಾಪ್ತಿಯ ಎರಡು ಮನೆಗಳಲ್ಲಿ ಇತ್ತೀಚೆಗೆ ಕಳ್ಳತನ ಸಹ ಮಾಡಿದ್ದರು. ಈ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ಎಟಿಎಂ ಕಾರ್ಡ್ ವಂಚನೆ ಸಂಗತಿಯನ್ನೂ ಬಾಯ್ಬಿಟ್ಟರು' ಎಂದು ತಿಳಿಸಿದರು.

ನಕಲಿ ಕಾರ್ಡ್ ಬಳಕೆ: 'ಗ್ರಾಹಕರ ಸೋಗಿನಲ್ಲಿ ಎಟಿಎಂ ಘಟಕಗಳಿಗೆ ಆರೋಪಿಗಳು ಹೋಗುತ್ತಿದ್ದರು. ವೃದ್ಧರು ಹಾಗೂ ಎಟಿಎಂ ಬಳಸಲು ಗೊತ್ತಿಲ್ಲದ ಗ್ರಾಹಕರ ಪರಿಚಯ ಮಾಡಿಕೊಳ್ಳುತ್ತಿದ್ದರು. ಹಣ ಡ್ರಾ ಮಾಡಿಕೊಳ್ಳಲು ನೆರವಾಗುವ ನೆಪದಲ್ಲಿ ಅಸಲಿ ಕಾರ್ಡ್ ಕದ್ದು, ನಕಲಿ ಕಾರ್ಡ್ ಕೊಡುತ್ತಿದ್ದರು. ಖಾತೆಯಲ್ಲಿ ಹಣ ಬರುತ್ತಿಲ್ಲವೆಂದು ಗ್ರಾಹಕರಿಗೆ ಹೇಳಿ ಸ್ಥಳದಿಂದ ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮತ್ತೊಂದು ಎಟಿಎಂ ಘಟಕಕ್ಕೆ ಹೋಗುತ್ತಿದ್ದ ಆರೋಪಿಗಳು, ಅಸಲಿ ಎಟಿಎಂ ಕಾರ್ಡ್ ಬಳಸಿ ಹಣ ಡ್ರಾ ಮಾಡಿಕೊಳ್ಳುತ್ತಿದ್ದರು. ಇದೇ ರೀತಿಯಲ್ಲೇ ಆರೋಪಿಗಳು, ನೂರಕ್ಕೂ ಹೆಚ್ಚು ಗ್ರಾಹಕರನ್ನು ವಂಚಿಸಿರುವ ಮಾಹಿತಿ ಇದೆ' ಎಂದು ತಿಳಿಸಿದರು.

'ವಂಚನೆಯಿಂದ ಬಂದ ಹಣದಲ್ಲಿ ಆರೋಪಿಗಳು ಐಷಾರಾಮಿ ಜೀವನ ನಡೆಸುತ್ತಿದ್ದರು. ಹಣ ಖಾಲಿಯಾಗುತ್ತಿದ್ದಂತೆ ಮಹಾನಗರಗಳಲ್ಲಿ ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು' ಎಂದು ಹೇಳಿದರು.

ವಿದ್ಯುತ್ ಕಂಬಕ್ಕೆ ಲ್ಯಾಂಬೋರ್ಗಿನಿ ಡಿಕ್ಕಿ: ಚಾಲಕ ಪರಾರಿ

ಬೆಂಗಳೂರು: ಜ್ಞಾನಭಾರತಿಯ ನ್ಯಾಷನಲ್ ಕಾನೂನು ಕಾಲೇಜು ಬಳಿ ವಿದ್ಯುತ್ ಕಂಬವೊಂದಕ್ಕೆ ಲ್ಯಾಂಬೋರ್ಗಿನಿ ಕಾರು ಡಿಕ್ಕಿ ಹೊಡೆದಿದ್ದು, ಕಾರನ್ನು ಸ್ಥಳದಲ್ಲಿ ಬಿಟ್ಟು ಚಾಲಕ ಪರಾರಿಯಾಗಿದ್ದಾರೆ.

'ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಸುತ್ತಾಡುತ್ತಿದ್ದ ಎನ್ನಲಾದ ಚಾಲಕ, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದ. ಮಾರ್ಗಮಧ್ಯೆ ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಕಾರು ಗುದ್ದಿದೆ. ಇದರಿಂದ ತಂತಿ ಸಮೇತ ಕಂಬ ಉರುಳಿಬಿದ್ದಿತ್ತು. ಕಾರಿನ ಮುಂಭಾಗ ಜಖಂಗೊಂಡಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ಅಪಘಾತದಿಂದಾಗಿ ಸ್ಥಳದಲ್ಲಿ ಕೆಲ ನಿಮಿಷ ವಾಹನಗಳ ಸಂಚಾರ ಬಂದ್ ಆಗಿತ್ತು. ವಿಪರೀತ ದಟ್ಟಣೆ ಸಹ ಉಂಟಾಯಿತು. ಅಪಘಾತವಾದ ಕಾರು ಹಾಗೂ ಕಂಬವನ್ನು ತೆರವುಗೊಳಿಸಿ, ವಾಹನಗಳ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಯಿತು' ಎಂದು ತಿಳಿಸಿದರು.

'ಗ್ಲೋಬಲ್ ಟೆಕ್ ಪಾರ್ಕ್ ಕಂಪನಿ ಹೆಸರಿನಲ್ಲಿ ಕಾರು (ಕೆ.ಎ 51 ಎಂಇ 7029) ನೋಂದಣಿ ಆಗಿದೆ. ಚಾಲಕ ಪರಾರಿಯಾಗಿರುವುದರಿಂದ ಆತನ ಹೆಸರು ಗೊತ್ತಾಗಿಲ್ಲ' ಎಂದರು.



ಜ್ಞಾನಭಾರತಿಯ ರಾಷ್ಟ್ರೀಯ ಕಾನೂನು ಕಾಲೇಜು ಬಳಿ ಸಂಭವಿಸಿದ್ದ ಅಪಘಾತದಿಂದ ಉರುಳಿಬಿದ್ದಿರುವ ವಿದ್ಯುತ್ ಕಂಬ ಹಾಗೂ ಜಖಂಗೊಂಡಿರುವ ಲ್ಯಾಂಬೋರ್ಗಿನಿ ಕಾರು

ಗುಂಡು ಹಾರಿಸಿಕೊಂಡು ಯೋಧ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಕಟ್ಟಡದ ಭದ್ರತೆ ಕೆಲಸದಲ್ಲಿದ್ದ ಯೋಧ ಕರೇಗೌಡ (49) ಎಂಬುವವರು ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಬೈಯಪ್ಪನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಗಸಂದ್ರದ ಕರೇಗೌಡ, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ನಾಗಸಂದ್ರದಲ್ಲಿ ವಾಸವಿದ್ದರು. ಇವರ ಆತ್ಮಹತ್ಯೆಗೆ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದು ಬೈಯಪ್ಪನಹಳ್ಳಿ ಪೊಲೀಸರು ಹೇಳಿದರು.

'ಯೋಧ ಕರೇಗೌಡ ಅವರು ಸೋಮವಾರ ಬೆಳಿಗ್ಗೆ 6 ಗಂಟೆಗೆ ಯಥಾಪ್ರಕಾರ ಕೆಲಸಕ್ಕೆ ಹಾಜರಾಗಿದ್ದರು. ಕರ್ತವ್ಯಕ್ಕೆಂದು ನೀಡಿದ್ದ ಬಂದೂಕು (ಎಸ್‌ಎಲ್‌ಆರ್–ಸೆಲ್ಫ್ ಲೋಡಿಂಗ್ ರೈಫಲ್) ಹಿಡಿದು ಕಾವಲು ಕಾಯುತ್ತಿದ್ದರು.'

'6.30ರ ಸುಮಾರಿಗೆ ಬಂದೂಕಿನಿಂದ ಹಣೆಗೆ ಗುಂಡು ಹಾರಿಸಿಕೊಂಡಿದ್ದರು. ತೀವ್ರ ಗಾಯಗೊಂಡು ಕರೇಗೌಡ ಮೃತಪಟ್ಟರು. ಈ ಸಾವಿನ ಬಗ್ಗೆ ಸಹೋದ್ಯೋಗಿಗಳು ಹಾಗೂ ಕುಟುಂಬದವರಿಂದ ಹೇಳಿಕೆ ಪಡೆಯಲಾಗಿದ್ದು, ತನಿಖೆ ಮುಂದುವರಿಸಲಾಗಿದೆ. ತನಿಖೆ ಮುಗಿದ ಬಳಿಕವೇ ನಿಖರ ಕಾರಣ ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

ವಿಧಿವಿಜ್ಞಾನ ಪ್ರಯೋಗಾಲಯದ ಮಹಿಳಾ ಅಧಿಕಾರಿ ಆತ್ಮಹತ್ಯೆ

ಬೆಂಗಳೂರು: ವಿಧಿವಿಜ್ಞಾನ ಪ್ರಯೋಗಾಲಯದ ಮಹಿಳಾ ಅಧಿಕಾರಿ ಶ್ರುತಿ (28) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಮಡಿವಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಾಯಿ ಹಾಗೂ ಮೂರು ವರ್ಷದ ಮಗಳ ಜೊತೆ ಮಡಿವಾಳದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಶ್ರುತಿ ವಾಸವಿದ್ದರು. ತಾಯಿ–ಮಗಳು ಇತ್ತೀಚೆಗೆ ಸಂಬಂಧಿಕರ ಮನೆಗೆ ಹೋಗಿದ್ದರು. ಮನೆಯಲ್ಲಿ ಒಂಟಿಯಾಗಿದ್ದ ಶ್ರುತಿ, ಸೆ. 30ರಂದು ರಾತ್ರಿ ತಮ್ಮ ಕೊಠಡಿಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅ. 1ರಂದು ಬೆಳಿಗ್ಗೆ ಆತ್ಮಹತ್ಯೆ ವಿಷಯ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಮಡಿವಾಳದಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಕೆಲ ವರ್ಷಗಳ ಹಿಂದೆಯಷ್ಟೇ ಶ್ರುತಿ ಕೆಲಸಕ್ಕೆ ಸೇರಿದ್ದರು. ಮದುವೆಯಾಗಿದ್ದ ಶ್ರುತಿ, ಕೌಟುಂಬಿಕ ಕಲಹದಿಂದಾಗಿ ಮೂರು ತಿಂಗಳ ಹಿಂದೆಯಷ್ಟೇ ಪತಿಯಿಂದ ವಿಚ್ಛೇದನ ಪಡೆದಿದ್ದರು' ಎಂದು ತಿಳಿಸಿದರು.

'ವಿಚ್ಛೇದನ ಬಳಿಕ ಮಾನಸಿಕವಾಗಿ ಶ್ರುತಿ ನೊಂದಿದ್ದರು ಎನ್ನಲಾಗುತ್ತಿದೆ. ಇದೇ ಕಾರಣಕ್ಕೆ ಅವರು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. 'ನನ್ನ ಸಾವಿಗೆ ನಾನೇ ಕಾರಣ. ಕ್ಷಮಿಸಿ' ಎಂಬ ಬರಹವುಳ್ಳ ಮರಣಪತ್ರ ಸಿಕ್ಕಿದ್ದು, ಅದನ್ನು ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದರು.

ಚಿತ್ರಾವಳಿ



ದಸರಾ ಹಬ್ಬದ ಅಂಗವಾಗಿ ಗಿರಿನಗರದ ಸುಧಾ ನಾಗರಾಜ್ ಅವರ ಮನೆಯಲ್ಲಿ ಪ್ರತಿಷ್ಠಾಪಿಸಿರುವ ದಸರಾ ಬೊಂಬೆಗಳು



ಜೆ.ಪಿ. ನಗರದ 7 ಹಂತದಲ್ಲಿರುವ ಭುವನೇಶ್ವರಿ ರಮೇಶ್ ಅವರ ಮನೆಯಲ್ಲಿ ಕೂರಿಸಿರುವ ದಸರಾ ಬೊಂಬೆಗಳು ಎಲ್ಲರನ್ನು ಆಕರ್ಷಿಸುತ್ತಿವೆ



ಶೇಷಾದ್ರಿಪುರದ ಚಂದ್ರಶೇಖರ ಜಹಗೀರದಾರ್ ಅವರ ಮನೆಯಲ್ಲಿ ಕೂರಿಸಿರುವ ದಸರಾ ಬೊಂಬೆಗಳು



ವಿದ್ಯಾರಣ್ಯಪುರದ ಶಾಂತಲಾ ಅವರ ಮನೆಯಲ್ಲಿ ಗಮನ ಸೆಳೆದ ದಸರಾ ಬೊಂಬೆಗಳು

ಡಾ. ಮೇಘನಾ ರೆಡ್ಡಿ 'ಮಿಸೆಸ್ ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾ ಫಿನಿಕ್ಸ್ ಫ್ಯಾಶನ್ ಕಂಪನಿ ಆಯೋಜಿಸಿದ್ದ 'ಮಿಸೆಸ್ ಕರ್ನಾಟಕ–2022'ರ ಸೌಂದರ್ಯ ಸ್ಪರ್ಧೆಯಲ್ಲಿ ಡಾ.ಮೇಘನಾ ರೆಡ್ಡಿ ಚಾಂಪಿಯನ್ ಆದರು.

ಬಿಂದಿ ರಮೇಶ್ ಅವರು ಮೊದಲ ರನ್ನರ್ ಅಪ್ ಹಾಗೂ ನೌಶೀನ್ ಷರೀಫ್ ಎರಡನೇ ರನ್ನರ್ ಅಪ್ ಪ್ರಶಸ್ತಿ ಪಡೆದರು.

ಸ್ಪರ್ಧೆಯಲ್ಲಿ 70ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಅಂತಿಮ ಸುತ್ತಿಗೆ 10 ಮಹಿಳೆಯರು ಆಯ್ಕೆಯಾಗಿದ್ದರು. ವಿವಾಹಿತ ಮಹಿಳೆ ಯರನ್ನು ಸಶಕ್ತಗೊಳಿಸಲು ಈ ಸ್ಪರ್ಧೆ ಆಯೋಜಿಸಲಾಗಿತ್ತು ಎಂದು ಆಯೋಜಕರು ತಿಳಿಸಿದ್ದಾರೆ.

ನಟ ಶೈನ್‌ಶೆಟ್ಟಿ, ಫೆಮಿನಾ ಮಿಸ್ ಇಂಡಿಯಾದ ಪ್ರಾಚಿಮಿಶ್ರ, ಲೀನಾ ಸವೂರ್, ಡಾ.ಮಂಜೂಷಾ ಪಾಟೀಲ್, ಸೌತ್ ಇಂಡಿಯಾ ಗಾರ್ಮೆಂಟ್ ಉತ್ಪಾದಕರ ಸಂಘದ ಅಧ್ಯಕ್ಷ ಅನುರಾಗ್ ಸಿಂಗ್ಲಾ ಸ್ಪರ್ಧೆಗೆ ಚಾಲನೆ ನೀಡಿದರು.



ಬೆಂಗಳೂರಿನಲ್ಲಿ ಲಾಫಿನಿಕ್ಸ್ ವತಿಯಿಂದ ನಡೆದ ಮಿಸೆಸ್ ಕರ್ನಾಟಕ ಸ್ಪರ್ಧೆಯಲ್ಲಿ ಡಾ.ಮೇಘನಾ ರೆಡ್ಡಿ (ಎಡದಿಂದ ಎರಡನೆಯವರು) ಅವರು ಮಿಸಸ್ ಕರ್ನಾಟಕ ಪ್ರಶಸ್ತಿ ಗಳಿಸಿದರು. ಎರಡನೇ ರನ್ನರ್ ಅಪ್ ಬಿಂದಿ ರಮೇಶ್, ಲಾ ಫಿನಿಕ್ಸ್ ಸಿಇಒ ಲೀನಾ ಸವೂರ್ ಹಾಗೂ ಮೊದಲ ರನ್ನರ್ ಅಪ್ ನೌಶೀನ್ ಷರೀಫ್ ಇದ್ದಾರೆ

ಮೇಸ್ತ ಸಾವು: 'ಬಿ' ರಿಪೋರ್ಟ್ ಸಲ್ಲಿಕೆ

ಕಾರವಾರ: ಉತ್ತರ ಕನ್ನಡದ ಹೊನ್ನಾವರದಲ್ಲಿ 2017ರಲ್ಲಿ ಯುವಕ ಪರೇಶ ಮೇಸ್ತ ಸಾವು ಪ್ರಕರಣದ ತನಿಖೆ ನಡೆಸಿದ ಸಿ.ಬಿ.ಐ ಅಧಿಕಾರಿಗಳು, ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಕೆ ಮಾಡಿದ್ದಾರೆ. ಇದು ಕೊಲೆಯಲ್ಲ, ಆಕಸ್ಮಿಕ ಸಾವು ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾಲ್ಕು ವರ್ಷಕ್ಕೂ ಅಧಿಕ ಕಾಲ ತನಿಖೆ ನಡೆಸಿದ ಸಿ.ಬಿ.ಐ ಅಧಿಕಾರಿಗಳು, ಸುಮಾರು 1,500 ಪುಟಗಳ ವರದಿಯನ್ನು ಹೊನ್ನಾವರದ ನ್ಯಾಯಾಲಯಕ್ಕೆ ಭಾನುವಾರ ಸಲ್ಲಿಸಿದ್ದರು. ಅದನ್ನು ನ್ಯಾಯಾಲಯವು ಸೋಮವಾರ ಸ್ವೀಕೃತಗೊಳಿಸಿದೆ. ಮುಂದಿನ ವಿಚಾರಣೆಯನ್ನು ನ.16ಕ್ಕೆ ಮುಂದೂಡಿದೆ.

2017ರ ಡಿ.7ರಂದು ಮೀನುಗಾರ ಸಮುದಾಯದ ಯುವಕ ಪರೇಶ ಮೃತದೇಹ ಪತ್ತೆಯಾಗಿತ್ತು. ಬಳಿಕ ಜಿಲ್ಲೆಯ ವಿವಿಧೆಡೆಗಳಲ್ಲಿ ಭಾರಿ ಘರ್ಷಣೆಗಳು ಉಂಟಾಗಿದ್ದವು. ಪ್ರಕರಣದ ತನಿಖೆಯನ್ನು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಸಿ.ಬಿ.ಐಗೆ ವಹಿಸಿತ್ತು. ಈ ಪ್ರಕರಣದಲ್ಲಿ ಐವರನ್ನು ಬಂಧಿಸಲಾಗಿತ್ತು.



ಕೇರಳದಲ್ಲಿ ನಡೆದ 2021ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶಿರಸಿಯ ಅನುವಾದಕ ಪ್ರೊ.ಧರಣೇಂದ್ರ ಕುರಕುರಿ ಅವರಿಗೆ (ಹಿಂದಿ ಅನುವಾದ) ಅಕಾಡೆಮಿಯ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರು ಪ್ರಶಸ್ತಿ ಪ್ರದಾನ ಮಾಡಿದರು


ಸಮುದ್ರದಲ್ಲಿ ಮುಳುಗುತ್ತಿದ್ದ ಮೂವರ ರಕ್ಷಣೆ

ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಬೀಚ್‌ನಲ್ಲಿ ಅಲೆಗಳ ಸೆಳೆತಕ್ಕೆ ಸಿಲುಕಿ ಮುಳುಗುತ್ತಿದ್ದ ಮೂವರು ಪ್ರವಾಸಿಗರನ್ನು ಲೈಫ್‌ಗಾರ್ಡ್ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ.

ಬೆಂಗಳೂರಿನ ನಾಗಸಂದ್ರದ ಪ್ರದೀಪ್, ನಾಗೇಶ್ ವೆಂಕಟೇಶನ್ ಹಾಗೂ ರಮೇಶ್ ಪ್ರಾಣಾಪಾಯದಿಂದ ಪಾರಾದವರು. ಮೂವರು ಪ್ರವಾಸಕ್ಕೆ ಬಂದು ನೀರಿಗಿಳಿದು ಈಜುವಾಗ ಅಲೆಗಳ ಸೆಳೆತಕ್ಕೆ ಸಿಲುಕಿ ಮುಳುಗುತ್ತಿದ್ದರು. ಇದನ್ನು ಗಮನಿಸಿದ ಲೈಫ್ ಗಾರ್ಡ್ ಸಿಬ್ಬಂದಿ ತಕ್ಷಣ ನೆರವಿಗೆ ಧಾವಿಸಿ ರಕ್ಷಣೆ ಮಾಡಿದ್ದಾರೆ.

ಷೇರುಪೇಟೆ ವಹಿವಾಟು 638



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,094
ಇಂದಿನ ಅಂತ್ಯ	16,887
▼	207
ದಿನದ ಕನಿಷ್ಠ	16,885

ವಿನಿಮಯ ದರ

$ ಡಾಲರ್	81.82
£ ಪೌಂಡ್	91.72
€ ಯುರೊ	80.27
¥ ಯೆನ್ (100ಕ್ಕೆ)	56

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹432

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1615)
ಸೋಯಾ (ರಿಫೈನ್ಡ್)	₹1140 (1135)
ಸೂರ್ಯಕಾಂತಿ (ರಿಫೈನ್ಡ್)	₹1290 (1280)
ಪಾಮೋಲಿನ್	₹865 (875)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹146
ಆರ್ಎಸ್ಎಸ್-5	₹136
ಗುಡ್ ಲಾಟ್	₹132

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ) ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಸೆಪ್ಟೆಂಬರ್‌ನಲ್ಲಿ ತುಸು ತಗ್ಗಿದ ತಯಾರಿಕಾ ಚಟುವಟಿಕೆ



ನವದೆಹಲಿ (ಪಿಟಿಐ): ಭಾರತದಲ್ಲಿ ತಯಾರಿಕಾ ಚಟುವಟಿಕೆಯು ಸೆಪ್ಟೆಂಬರ್‌ನಲ್ಲಿ ಅಲ್ಪ ಇಳಿಕೆ ಕಂಡಿದೆ. ಹೀಗಿದ್ದರೂ ಸತತ 15ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಹಾದಿಯಲ್ಲಿಯೇ ಇದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಆಗಸ್ಟ್‌ನಲ್ಲಿ 56.2ರಷ್ಟು ಇತ್ತು. ಇದು ಸೆಪ್ಟೆಂಬರ್‌ನಲ್ಲಿ 55.1ಕ್ಕೆ ಇಳಿಕೆ ಆಗಿದೆ. ಕಂಪನಿಗಳು ಹೆಚ್ಚಿನ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದು, ಬೆಲೆ ಏರಿಕೆಯ ಒತ್ತಡ ಕಡಿಮೆ ಆಗುತ್ತಿದೆ ಎಂದು ಅದು ತಿಳಿಸಿದೆ.

ಆಗಸ್ಟ್‌ನಿಂದ ತಯಾರಿಕಾ ಚಟುಟವಟಿಕೆಯು ಇಳಿಮುಖವಾಗಿದ್ದರು ಸಹ ಬೆಳವಣಿಗೆ ದರವು ಐತಿಹಾಸಿಕ ಗರಿಷ್ಠ ಮಟ್ಟದಲ್ಲಿಯೇ ಇದೆ. ತಯಾರಿಕೆ ಹೆಚ್ಚಿಸಲು ಮತ್ತು ಮಾರಾಟದಲ್ಲಿ ಉತ್ತಮ ಪ್ರಗತಿ ಸಾಧಿಸಲು ಕಂಪನಿಗಳು ಹೆಚ್ಚುವರಿ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಿವೆ. ಬೆಲೆ ಏರಿಕೆ ಒತ್ತಡ ಕಡಿಮೆ ಆಗಿರುವುದರಿಂದ ಖರೀದಿಯು ಮತ್ತೆ ಏರಿಕೆ ಆಗುತ್ತಿದೆ ಎಂದು ವಿವರಿಸಿದೆ.

ಜಾಗತಿಕ ಅಡಚಣೆಗಳು ಮತ್ತು ಆರ್ಥಿಕ ಹಿಂಜರಿತದ ಭೀತಿಯ ನಡುವೆಯೂ ದೇಶದ ತಯಾರಿಕಾ ವಲಯವು ಉತ್ತಮ ಸ್ಥಿತಿಯಲ್ಲಿ ಇದೆ ಎನ್ನುವುದನ್ನು ಪಿಎಂಐ ಅಂಕಿ–ಅಂಶವು ಸೂಚಿಸುತ್ತಿದೆ ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ತಯಾರಿಕಾ ವೆಚ್ಚವು ಎರಡು ವರ್ಷಗಳಲ್ಲಿಯೇ ಅತ್ಯಂತ ನಿಧಾನಗತಿಯ ಏರಿಕೆ ಕಂಡಿದೆ ಎಂದು ಹೇಳಿದ್ದಾರೆ.

ಬ್ಯಾಂಕಿಂಗ್, ಎಫ್‌ಎಂಸಿಜಿ, ಆಟೊ ವಲಯದ ಷೇರುಗಳ ಮಾರಾಟ

ಮುಗ್ಗರಿಸಿದ ದೇಶಿ ಷೇರುಪೇಟೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಆಟೊ ಮತ್ತು ಎಫ್‌ಎಂಸಿಜಿ ವಲಯದ ಷೇರುಗಳನ್ನು ಹೂಡಿಕೆದಾರರು ಭಾರಿ ಪ್ರಮಾಣದಲ್ಲಿ ಮಾರಾಟ ಮಾಡಿದ ಪರಿಣಾಮವಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇಕಡ 1ಕ್ಕಿಂತ ಹೆಚ್ಚು ಕುಸಿದವು.

ಜಾಗತಿಕ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿದ್ದು ಹಾಗೂ ವಿದೇಶಿ ಬಂಡವಾಳದ ಹೊರಹರಿವು ಕೂಡ ಕುಸಿತಕ್ಕೆ ಕಾರಣವಾದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 638 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 207 ಅಂಶ ಇಳಿಕೆ ಕಂಡಿವೆ.

ಬಿಎಸ್‌ಇ ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.24ರಷ್ಟು ಹಾಗೂ ಶೇ 0.54ರಷ್ಟು ಇಳಿಕೆ ಕಂಡಿವೆ.


ಆರ್ಥಿಕ ಮುನ್ನೋಟ ಹಿತಕರವಾಗಿ ಇಲ್ಲದಿರುವುದು ಹಾಗೂ ಹೂಡಿಕೆದಾರರು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧವಿಲ್ಲದ ಕಾರಣ ಜಾಗತಿಕ ಮಾರುಕಟ್ಟೆಗಳಲ್ಲಿ ಒತ್ತಡ ಮುಂದುವರಿಯಲಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಸೆಪ್ಟೆಂಬರ್‌ನಲ್ಲಿ ತುಸು ಇಳಿಕೆ ಕಂಡಿವೆ. ಇದರಿಂದಾಗಿ ಫಾರ್ಮಾ ಮತ್ತು ತೈಲ ಹೊರತುಪಡಿಸಿ ಎಲ್ಲ ಪ್ರಮುಖ ವಲಯಗಳ ಷೇರುಗಳಲ್ಲಿ ಮಾರಾಟದ ಒತ್ತಡ ಕಂಡುಬಂತು' ಎಂದು ನಾಯರ್ ಹೇಳಿದ್ದಾರೆ.

ರೂಪಾಯಿ ಕುಸಿತ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ 42 ಪೈಸೆಯಷ್ಟು ಕುಸಿದಿದೆ. ದಿನದ ಅಂತ್ಯಕ್ಕೆ ಡಾಲರ್ ಎದುರು ರೂಪಾಯಿ ಮೌಲ್ಯವು ₹ 81.82 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಏರಿಕೆ ಕಂಡಿರುವುದು ಹಾಗೂ ಡಾಲರ್ ಮೌಲ್ಯ ಹೆಚ್ಚಿರುವುದು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣ ಎಂದು ತಜ್ಞರು ಹೇಳಿದ್ದಾರೆ.

ವಲಯವಾರು ಇಳಿಕೆ (%)



ತೈಲ ಬೆಲೆ 100 ಡಾಲರ್‌ಗೆ?

ಹಾಂಗ್‌ಕಾಂಗ್ (ಎಎಫ್‌ಪಿ): ಕಚ್ಚಾ ತೈಲ ಉತ್ಪಾದಿಸುವ ರಾಷ್ಟ್ರಗಳು ಉತ್ಪಾದನೆ ತಗ್ಗಿಸುವ ಆಲೋಚನೆ ಹೊಂದಿವೆ ಎಂಬ ವರದಿಗಳು ಬಂದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಏರಿಕೆ ಕಂಡಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇಕಡ 4.4ರಷ್ಟು ಹೆಚ್ಚಾಗಿ 88.83 ಅಮೆರಿಕನ್ ಡಾಲರ್‌ಗೆ ತಲುಪಿದೆ. ಬೆಲೆಯಲ್ಲಿ ಇನ್ನಷ್ಟು ಹೆಚ್ಚಳ ಆಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

'ವರ್ಷಾಂತ್ಯದ ಹೊತ್ತಿಗೆ ಪೂರೈಕೆಯು ತಗ್ಗಲಿದೆ. ಕಚ್ಚಾ ತೈಲದ ಬೆಲೆಯು ಮತ್ತೆ ಬ್ಯಾರೆಲ್‌ಗೆ 100 ಡಾಲರ್ ಮಟ್ಟವನ್ನು ತಲುಪಲಿದೆ' ಎಂದು ಡಿಬಿಎಸ್ ಬ್ಯಾಂಕ್‌ನ ಇಂಧನ ವಿಶ್ಲೇಷಕ ಸುವ್ರೊ ಸರ್ಕಾರ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬಿಎಸ್‌ಎನ್‌ಎಲ್ 4ಜಿ ಸೇವೆ ನವೆಂಬರ್‌ನಿಂದ ಆರಂಭ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಬಿಎಸ್‌ಎನ್‌ಎಲ್ ಕಂಪನಿಯು ನವೆಂಬರ್ ತಿಂಗಳಿನಿಂದ 4ಜಿ ಸೇವೆಗಳನ್ನು ಆರಂಭಿಸಲಿದೆ. ಮುಂದಿನ ವರ್ಷದ ಆಗಸ್ಟ್‌ಗೆ ಮೊದಲು ಸೇವೆಗಳನ್ನು ಹಂತ ಹಂತವಾಗಿ 5ಜಿಗೆ ಪರಿವರ್ತಿಸಲಿದೆ.

'ದೇಶೀಯವಾಗಿ ಅಭಿವೃದ್ಧಿಪಡಿಸಿದ 4ಜಿ ತಂತ್ರಜ್ಞಾನವನ್ನು ಅಳವಡಿಸಲು ಐ.ಟಿ. ಸೇವಾ ಕಂಪನಿ ಟಿಸಿಎಸ್, ಸರ್ಕಾರಿ ಸ್ವಾಮ್ಯದ ದೂರಸಂಪರ್ಕ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ಸಿ-ಡಾಟ್ ನೇತೃತ್ವದ ಸಂಸ್ಥೆಗಳ ಜೊತೆ ಮಾತುಕತೆ ನಡೆಯುತ್ತಿದೆ' ಎಂದು ಬಿಎಸ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಪಿ.ಕೆ. ಪುರವಾರ್ ತಿಳಿಸಿದ್ದಾರೆ.

'ನಾವು ಖರೀದಿಸುತ್ತಿರುವ 4ಜಿ ಉಪಕರಣಗಳ ಸಾಫ್ಟ್‌ವೇರ್ ಮೇಲ್ದರ್ಜೆಗೆ ಏರಿಸುವ ಮೂಲಕ 5ಜಿ ಸೇವೆಗಳನ್ನು ಆರಂಭಿಸಲು ಆಗುತ್ತದೆ' ಎಂದು ಅವರು ತಿಳಿಸಿದ್ದಾರೆ.




'ನಮ್ಮ ಕಂಪನಿಯು 2023ರ ಆಗಸ್ಟ್ 15ರ ವೇಳೆಗೆ 5ಜಿ ಸೇವೆ ಹೊಂದಿರಬೇಕು ಎಂದು ಕೇಂದ್ರವು ನಮಗೆ ಹೇಳಿದೆ. ನಾವು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

ಪೂರ್ವಿಕಾದಿಂದ ದಸರಾ ಕೊಡುಗೆ

ಬೆಂಗಳೂರು: ಪೂರ್ವಿಕಾ ಮೊಬೈಲ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ದಸರಾ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ವಿವಿಧ ರಿಯಾಯಿತಿ ಕೊಡುಗೆಗಳನ್ನು ಪ್ರಕಟಿಸಿದೆ.

ದಸರಾ ಮಾರಾಟದ ಭಾಗವಾಗಿ 'ಶೇಕಡ 100ರಷ್ಟು ಕ್ಯಾಷ್‌ಬ್ಯಾಕ್ ಫೀಡ್‌ಬ್ಯಾಕ್ ಸ್ಪರ್ಧೆ' ಆಯೋಜಿಸಿದೆ. ಗ್ರಾಹಕರು ಪೂರ್ವಿಕಾದಲ್ಲಿ ಖರೀದಿ ಮಾಡಬೇಕು. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿದ ಬಳಿಕ ತಮ್ಮ ಪ್ರತಿಕ್ರಿಯೆ ನೀಡಬೇಕು. ಹೀಗೆ ಮಾಡಿದ ನಂತರ ವಿಜೇತರಾಗುವ ಅವಕಾಶ ಪಡೆಯಬಹುದು. ಸ್ಯಾಮ್ಸಂಗ್ ಬ್ರ್ಯಾಂಡ್ ಇಷ್ಟಪಡುವವರು ಸ್ಯಾಮ್ಸಂಗ್ ಸ್ಮಾರ್ಟ್‌ಫೋನ್‌ಗಳ ಮೇಲೆ ₹ 27 ಸಾವಿರವರೆಗೆ ರಿಯಾಯಿತಿ ಪಡೆಯಬಹುದು. ಒನ್‌ಪ್ಲಸ್ ಫೋನ್ ಖರೀದಿಸಿದರೆ ₹ 11 ಸಾವಿರವರೆಗೆ ರಿಯಾಯಿತಿ ಸಿಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ₹ 1 ಡೌನ್‌ಪೇಮೆಂಟ್, ಮೆಗಾ ಎಕ್ಸ್‌ಚೇಂಜ್ ಕೊಡುಗೆ ಸೇರಿದಂತೆ ಹಲವು ಕೊಡುಗೆಗಳ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಹೇಳಿದೆ.



ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಗೊಬರಲು	17009-37299	ಕೆಂಪುಗೋಟು	
ಬಂಟ್ವಾಳ		ರಾಶಿ	45599-50599		25092-30312
ಕೋಕ	12500-25000	ಸರಕು	60009-75009	ರಾಶಿ	41099-50099
ಹೊಸತು	27500-47500	**ಸಿದ್ದಾಪುರ**		**ಯಲ್ಲಾಪುರ**	
ಹಳತು	46000-56000	ಬಿಳಿಗೋಟು	28609-33899	ಬಿಳಿಗೋಟು	28612-35169
ಕುಮಟ		ಚಾಲಿ	38299-41799	ಚಾಲಿ	37369-42120
ಚಿಪ್ಪು	28899-33009	ಕೋಕ	26699-32609	ಕೋಕ	22612-27322
ಕೋಕ	18029-31019	ಕೆಂಪುಗೋಟು		ರಾಶಿ	47879-49899
ಫ್ಯಾಕ್ಟರಿ	12069-22269		32689-32689	ತಟ್ಟಿಬೆಟ್ಟೆ	38009-49899
ಹಳೆಚಾಲಿ	41089-46090	ರಾಶಿ	48049-49499	**ಮೂಡಿಗೆರೆ ಕಾಫಿ** (50ಕೆ.ಜಿಗೆ)	
ಹೊಸಚಾಲಿ	38709-42299	ತಟ್ಟಿಬೆಟ್ಟೆ	35099-42699	**ಮುದ್ರೆಮನೆ**	
ಕಾರ್ಕಳ		**ಶಿರಸಿ**		ಎಪಿ	16200
ಹಳತು	40000-47500	ಬೆಟ್ಟೆ	18029-46669	ಎಸಿ	9100
ಶಿವಮೊಗ್ಗ		ಬಿಳಿಗೋಟು	14099-35600	ಆರ್‌ಪಿ	9800
ಬೆಟ್ಟೆ	51209-52390	ಚಾಲಿ	36366-43099	ಆರ್‌ಸಿ	4800

ಮುಂಬೈ ಧಾರಣೆ

ಶೇಂಗಾ 3–10-2022

ಜಾವಾ 70/80(ಹೊಸ)	11050-11100
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1625)
ಒಂದು ವಾರದ ಡೆಲಿವರಿ	1645 (1620)
ಸೋಯಾ ಕಚ್ಚಾ	1080 (1065)
ಪಾಮ್ ವಾರದ ಡೆಲಿವರಿ	863 (873)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,250 (50,500)
ಬೆಳ್ಳಿ ಕೆ.ಜಿ 57,500 (56,300)

ಆವರಣದಲ್ಲಿ ಶನಿವಾರದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಉಚಿತ ಕೊಡುಗೆ: ಮಿತಿ ಹೇರಲು ಎಸ್‌ಬಿಐ ಸಲಹೆ

ಮುಂಬೈ (ಪಿಟಿಐ): ರಾಜ್ಯಗಳು ನೀಡುವ ಉಚಿತ ಕೊಡುಗೆಗಳಿಗೆ ವಿನಿಯೋಗ ಆಗುವ ಮೊತ್ತವನ್ನು ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇಕಡ 1ಕ್ಕೆ ಮಿತಿಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ರಚಿಸಿರುವ ಸಮಿತಿಗೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಲಹೆ ಮಾಡಿದೆ.

ರಾಜ್ಯದ ಜಿಡಿಪಿಯ ಶೇ 1ರಷ್ಟು ಅಲ್ಲದಿದ್ದರೆ, ರಾಜ್ಯದ ತೆರಿಗೆ ವರಮಾನದ ಶೇ 1ರಷ್ಟಕ್ಕೆ ಉಚಿತ ಕೊಡುಗೆಗಳ ಮೊತ್ತವನ್ನು ಮಿತಿಗೊಳಿಸಬೇಕು ಎಂದು ಅದು ಸಲಹೆ ಇತ್ತಿದೆ. ಎಸ್‌ಬಿಐ ಮುಖ್ಯ ಆರ್ಥಿಕ ಸಲಹೆಗಾರ ಸೌಮ್ಯಕಾಂತಿ ಘೋಷ್ ಅವರು ವರದಿಯನ್ನು ಸಿದ್ಧಪಡಿಸಿದ್ದಾರೆ.

ಜಾರ್ಖಂಡ್, ರಾಜಸ್ಥಾನ ಮತ್ತು ಛತ್ತೀಸಗಡ ರಾಜ್ಯಗಳು ಪ್ರತಿ ವರ್ಷ ಪಿಂಚಣಿಗಾಗಿ ವ್ಯಯಿಸುವ ಮೊತ್ತವು ಕ್ರಮವಾಗಿ ಅವುಗಳ ತೆರಿಗೆ ವರಮಾನದ ಶೇ 217, ಶೇ 190 ಮತ್ತು ಶೇ 207ರಷ್ಟು ಇದೆ. ಇದರ ಮೊತ್ತವು ₹ 3 ಲಕ್ಷ ಕೋಟಿ ಎಂದು ವರದಿಯಲ್ಲಿ ಹೇಳಲಾಗಿದೆ.

ಅತಿಹೆಚ್ಚು ಸಾಲ ಮಾಡಿರುವ ರಾಜ್ಯಗಳ ಸಾಲಿನಲ್ಲಿ ಇರುವ ಆಂಧ್ರಪ್ರದೇಶ, ಪಂಜಾಬ್‌ನಲ್ಲಿ ಉಚಿತ ಕೊಡುಗೆಗಳಿಗೆ ವಿನಿಯೋಗ ಮಾಡಬೇಕಿರುವ ಮೊತ್ತವು ರಾಜ್ಯಗಳ ಒಟ್ಟು ಜಿಡಿಪಿಯ ಶೇ 2ಕ್ಕಿಂತ ಹೆಚ್ಚಾಗಿದೆ ಎಂದು ಎಸ್‌ಬಿಐ ತಿಳಿಸಿದೆ.

ಲಾಜಿಸ್ಟಿಕ್ ಪಾರ್ಕ್‌ನ 20 ಲಕ್ಷ ಚದರ ಅಡಿ ಪ್ರದೇಶದಲ್ಲಿ ಗೋದಾಮು

5,500 ಕನ್ನಡಿಗರಿಗೆ ಉದ್ಯೋಗ ಭರವಸೆ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): ತಾಲ್ಲೂಕಿನ ಕೈಗಾರಿಕಾ ಪ್ರದೇಶದಲ್ಲಿ ಆಲ್‌ಕಾರ್ಗೊ ಸಮೂಹ ನಿರ್ಮಿಸಿರುವ ಲಾಜಿಸ್ಟಿಕ್ ಪಾರ್ಕ್ ಅನ್ನು ಸೋಮವಾರ ಲೋಕಾರ್ಪಣೆ ಮಾಡಲಾಯಿತು.

100 ಎಕರೆ ಪ್ರದೇಶದಲ್ಲಿರುವ ಲಾಜಿಸ್ಟಿಕ್ ಪಾರ್ಕ್‌ನ 20 ಲಕ್ಷ ಚದರ ಅಡಿ ಜಾಗದಲ್ಲಿ ಗೋದಾಮು ನಿರ್ಮಿಸಲಾಗಿದೆ. ಫ್ಲಿಪ್‌ಕಾರ್ಟ್, ಅಮೆಜಾನ್, ಡೆಕಥ್ಲಾನ್ ಸೇರಿದಂತೆ ಇ-ಕಾಮರ್ಸ್ ಕಂಪನಿಗಳ ವಹಿವಾಟಿಗೆ ಸೌಲಭ್ಯ ಒದಗಿಸಿದೆ. ಫ್ಲಿಪ್‌ಕಾರ್ಟ್ ಐದು ಲಕ್ಷ ಚದರ ಅಡಿ, ಅಮೆಜಾನ್ ಮೂರು ಲಕ್ಷ ಚದರ ಅಡಿ, ಡೆಕಥ್ಲಾನ್ ಕಂಪನಿ ಒಂಬತ್ತು ಲಕ್ಷ ಚದರ ಅಡಿ ಪ್ರದೇಶದಲ್ಲಿ ಗೋದಾಮು ನಿರ್ಮಿಸಿವೆ.

'ಇ-ಕಾಮರ್ಸ್ ಕಂಪನಿಗಳಿಗೆ ಜಾಗತಿಕ ಮಟ್ಟದ ಸೌಲಭ್ಯ ಕಲ್ಪಿಸಲು ಲಾಜಿಸ್ಟಿಕ್ ಪಾರ್ಕ್ ನಿರ್ಮಿಸಲಾಗಿದೆ. 5,500 ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸಲಿದ್ದೇವೆ. ರಾಜ್ಯ ಹಾಗೂ ನೆರೆಯ ಆಂಧ್ರಪ್ರದೇಶ, ತಮಿಳುನಾಡಿಗೆ ಸುಲಭವಾಗಿ ಲಾಜಿಸ್ಟಿಕ್ ಸಂಪರ್ಕ ಸಾಧಿಸಬಹುದು' ಎಂದು ಆಲ್‌ಕಾರ್ಗೊ ಲಾಜಿಸ್ಟಿಕ್ ಕಂಪನಿಯ ಅಧ್ಯಕ್ಷ ಶಶಿಕಿರಣ್ ಶೆಟ್ಟಿ ಹೇಳಿದರು.

'ಬೆಂಗಳೂರು ಸಮೀಪದ ನೆಲಮಂಗಲ ಬಳಿ 100 ಎಕರೆ ಜಮೀನನ್ನು ಕೆಐಎಡಿಬಿಯಿಂದ ಖರೀದಿಸಿದ್ದೇವೆ. ಹೊಸಕೋಟೆಯಲ್ಲಿ 75 ಎಕರೆ ಜಮೀನು ಖರೀದಿಸಿ ಅಲ್ಲಿಗೂ ಸೌಲಭ್ಯ ವಿಸ್ತರಿಸಲಾಗುವುದು' ಎಂದರು.

ಸ್ಥಳೀಯರಿಗೆ ಉದ್ಯೋಗಕ್ಕೆ ಮನವಿ: 'ಕೈಗಾರಿಕಾ ಪ್ರದೇಶ ಸ್ಥಾಪಿಸಲು ಜಾಗ ಕಳೆದುಕೊಂಡವರಿಗೆ ಹಾಗೂ ಸ್ಥಳೀಯರಿಗೆ ಉದ್ಯೋಗ ನೀಡಬೇಕು. ಸಿಎಸ್‌ಆರ್ ನಿಧಿಯಡಿ ಜಿಲ್ಲೆಯಲ್ಲಿ ಸಾಮಾಜಿಕ ಕಾರ್ಯ ಕೈಗೊಳ್ಳಬೇಕು' ಎಂದು ಸಂಸದ ಎಸ್.ಮುನಿಸ್ವಾಮಿ ಹಾಗೂ ಶಾಸಕ ಕೆ.ವೈ.ನಂಜೇಗೌಡ ಮನವಿ ಮಾಡಿದರು.

ಸ್ವೀಡನ್ ವಿಜ್ಞಾನಿ ಸ್ವಾಂಟ್ ಪಾಬೊಗೆ ನೊಬೆಲ್ ಪ್ರಶಸ್ತಿ

ಸ್ಟಾಕ್‌ಹೋಮ್ (ಎಪಿ): ಶರೀರ ವಿಜ್ಞಾನ ಅಥವಾ ವೈದ್ಯಕೀಯ ಕ್ಷೇತ್ರದಲ್ಲಿನ ಸಾಧನೆಗಾಗಿ ಸ್ವೀಡನ್‌ನ ವಿಜ್ಞಾನಿ ಸ್ವಾಂಟ್ ಪಾಬೊ (67) ಅವರಿಗೆ ನೊಬೆಲ್ ಪುರಸ್ಕಾರ ಒಲಿದಿದೆ.


ಸ್ವಾಂಟೆ ಪಾಬೊ

'ಮಾನವ ವಿಕಸನದ ಕುರಿತು ಪಾಬೊ ನಡೆಸಿರುವ ಸಂಶೋಧನೆಯು ಮನುಷ್ಯನ ದೇಹದೊಳಗಿನ ಪ್ರತಿಕಾಯ ವ್ಯವಸ್ಥೆಯ ಕುರಿತು ಪ್ರಮುಖ ಒಳನೋಟಗಳನ್ನು ಒದಗಿಸುತ್ತದೆ' ಎಂದು ಪ್ರಶಸ್ತಿ ಆಯ್ಕೆ ಸಮಿತಿಯು ಸೋಮವಾರ ಹೇಳಿದೆ.

'ನಿಯಾಂಡರ್ತಲಸ್‌ಗಳಿಂದ ಹೋಮೋ ಸೇಪಿಯನ್ಸ್‌ಗಳಿಗೆ ವಂಶವಾಹಿಗಳ ಹರಿವು ಸಂಭವಿಸಿದೆ ಎಂಬುದನ್ನು ಪಾಬೊ ಹಾಗೂ ಅವರ ತಂಡ ಪತ್ತೆಹಚ್ಚಿದೆ. ಸಹಬಾಳ್ವೆಯ ಕಾಲಘಟ್ಟದಲ್ಲಿ ಇವರು ಒಟ್ಟಿಗೆ ಮಕ್ಕಳನ್ನು ಹೊಂದಿದ್ದರು ಎಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಟ್ಟಿದ್ದಾರೆ' ಎಂದು ನೊಬೆಲ್ ಸಮಿತಿ ಮುಖ್ಯಸ್ಥ ಆನಾ ವೆಡೆಲ್ ಹೇಳಿದ್ದಾರೆ.

ಪಾಬೊ ಅವರ ತಂದೆ ಸೂನ್ ಬರ್ಗ್‌ಸ್ಟ್ರಾಮ್ ಕೂಡ ವೈದ್ಯಕೀಯ ವಿಭಾಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದಿದ್ದರು. 1982ರಲ್ಲಿ ಅವರಿಗೆ ಈ ಪುರಸ್ಕಾರ ಒಲಿದಿತ್ತು.

'ಒಪೆಕ್+'ನಿಂದ ಅತಿದೊಡ್ಡ ಮಟ್ಟದಲ್ಲಿ ಉತ್ಪಾದನೆ ಕಡಿತ ?

ಲಂಡನ್ (ರಾಯಿಟರ್ಸ್): ಪೆಟ್ರೋಲಿಯಂ ರಫ್ತುದಾರ ರಾಷ್ಟ್ರಗಳ ಒಕ್ಕೂಟ (ಒಪೆಕ್) ಮತ್ತು ಆ ಒಕ್ಕೂಟದ ಮಿತ್ರರಾಷ್ಟ್ರಗಳ (ಒಪೆಕ್ +) ಪ್ರತಿನಿಧಿಗಳು ದಿನಕ್ಕೆ 10 ಲಕ್ಷಕ್ಕೂ ಅಧಿಕ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದನೆಯನ್ನು ತಗ್ಗಿಸುವ ಚರ್ಚೆಯಲ್ಲಿ ತೊಡಗಿದ್ದಾರೆ ಎಂದು ಮೂಲಗಳು ಹೇಳಿವೆ.

ಒಂದೊಮ್ಮೆ ಈ ಪ್ರಮಾಣದಲ್ಲಿ ಉತ್ಪಾದನೆ ತಗ್ಗಿಸಿದರೆ, 2020ರ ಬಳಿಕದ ಅತ್ಯಂತ ಗರಿಷ್ಠ ಮಟ್ಟದ್ದಾಗಿರಲಿದೆ ಎಂದೂ ತಿಳಿಸಿವೆ. ಕಚ್ಚಾ ತೈಲ ದರ ಇಳಿಮುಖವಾಗಿರುವುದರಿಂದ ಬುಧವಾರ ತೈಲ ಉತ್ಪಾದನಾ ದೇಶಗಳು ಸಭೆ ನಡೆಸಲು ನಿರ್ಧರಿಸಿವೆ.

ಅಮೆರಿಕ ಸೇರಿದಂತೆ ಪ್ರಮುಖ ಬಳಕೆದಾರ ದೇಶಗಳು ಉತ್ಪಾದನೆ ಹೆಚ್ಚಿಸುವಂತೆ ಒತ್ತಡ ಹೇರುತ್ತಿವೆ. ಆದರೆ, ಒಪೆಕ್ + ಅದಕ್ಕೆ ಕಿವಿಗೊಡುತ್ತಿಲ್ಲ.

'ಪಾರ್ಟ್ ಟೈಂ' ಉದ್ಯೋಗದ ವಂಚನೆ: ₹ 5.85 ಕೋಟಿ ವಶಕ್ಕೆ ಪಡೆದ ಇ.ಡಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾರ್ಟ್ ಟೈಂ' (ಅರೆಕಾಲಿಕ) ಉದ್ಯೋಗದ ಹೆಸರಿನಲ್ಲಿ ಜನರನ್ನು ವಂಚಿಸಿ, ಹಣ ಲಪಟಾಯಿಸುತ್ತಿದ್ದ ಆರೋಪದ ಮೇಲೆ ನಗರದ 12 ಸಂಸ್ಥೆಗಳಿಗೆ ಸೇರಿದ ಸ್ಥಳಗಳ ಮೇಲೆ ಸೋಮವಾರ ದಾಳಿಮಾಡಿ, ಶೋಧ ನಡೆಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ₹ 5.85 ಕೋಟಿ ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಆಧರಿಸಿ ಹಣದ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್‌ಎ) ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ತನಿಖೆ ಆರಂಭಿಸಿದೆ. ಈ ಪ್ರಕರಣದ ತನಿಖೆಯ ಭಾಗವಾಗಿ ಬೆಂಗಳೂರಿನ ಹಲವೆಡೆ ಶೋಧ ನಡೆಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

'ಕೀಪ್‌ಶೇರ್' ಎಂಬ ಮೊಬೈಲ್ ಅಪ್ಲಿಕೇಶನ್ ಮೂಲಕ 'ಪಾರ್ಟ್ ಟೈಂ' ಉದ್ಯೋಗದ ಆಮಿಷವೊಡ್ಡುವ ಚೀನಾದ ವಂಚಕರು ಸಾರ್ವಜನಿಕರನ್ನು, ಅದರಲ್ಲೂ ಯುವಕರನ್ನು ಆಕರ್ಷಿಸುತ್ತಿದ್ದರು. ವಾಟ್ಸ್ ಆ್ಯಪ್, ಟೆಲಿಗ್ರಾಂ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ 'ಕೀಪ್ ಶೇರ್' ಅಪ್ಲಿಕೇಷನ್ ಕುರಿತು ಜಾಹೀರಾತು ನೀಡುತ್ತಿದ್ದ ವಂಚಕರು, ಉದ್ಯೋಗ ಬಯಸಿ ಸಂಪರ್ಕಿಸಿದವರಿಂದ ಹಣ ಪಡೆದು ವಂಚಿಸುತ್ತಿದ್ದರು ಎಂದು ತನಿಖಾ ಸಂಸ್ಥೆ ತಿಳಿಸಿದೆ.

'ಭಾರತದಲ್ಲಿ ಕಂಪನಿ ತೆರೆಯುತ್ತಿದ್ದ ಚೀನಾದ ವಂಚಕರು, ಇಲ್ಲಿನ ವ್ಯಕ್ತಿಗಳನ್ನೇ ಕಂಪನಿಯ ನಿರ್ದೇಶಕರು, ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕರು, ಅನುವಾದಕರು, ಟೆಲಿ ಕಾಲರ್‌ಗಳ ಹುದ್ದೆಗಳಿಗೆ ನೇಮಿಸುತ್ತಿದ್ದರು. ಅವರ ದಾಖಲೆಗಳನ್ನು ಬಳಸಿಕೊಂಡು ಬ್ಯಾಂಕ್ ಖಾತೆ ತೆರೆಯುತ್ತಿದ್ದರು. 'ಕೀಪ್ ಶೇರ್' ಅಪ್ಲಿಕೇಷನ್ ಅನ್ನು ಹೂಡಿಕೆ ಅಪ್ಲಿಕೇಷನ್ ಜತೆ ಜೋಡಿಸಿ ಹಣ ಸಂಗ್ರಹಿಸಲಾಗುತ್ತಿತ್ತು. ಸೆಲೆಬ್ರಿಟಿಗಳ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್ಲೋಡ್ ಮಾಡುವ ಕೆಲಸವನ್ನು ನೋಂದಣಿದಾರರಿಗೆ ನೀಡಲಾಗುತ್ತಿತ್ತು. ಪ್ರತಿ ವಿಡಿಯೊಗೆ ₹ 20 ಸಂಭಾವನೆ ನೀಡಲಾಗುತ್ತಿತ್ತು. ಈ ಹಣ 'ಕೀಪ್ ಶೇರ್' ಖಾತೆಗೆ ಜಮೆಯಾಗುತ್ತಿತ್ತು. ನಂತರ ಅಪ್ಲಿಕೇಷನ್ ಅನ್ನೇ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಿ ವಂಚಿಸಲಾಗಿತ್ತು' ಎಂದು ಇ.ಡಿ ಹೇಳಿದೆ.

ಈ ಪ್ರಕರಣದಲ್ಲಿ ಪೊಲೀಸರು 92 ಆರೋಪಿಗಳ ವಿರುದ್ಧ ಪೊಲೀಸರು ಆರೋಪಪಟ್ಟಿ ಸಲ್ಲಿಸಿದ್ದಾರೆ. ಅವರಲ್ಲಿ ಆರು ಮಂದಿ ಚೀನಾ ಮತ್ತು ತೈವಾನ್‌ನವರು. ಈ ಆರೋಪಿಗಳೇ ಸಂಪೂರ್ಣ ಹಗರಣವನ್ನು ನಿಯಂತ್ರಿಸಿದ್ದಾರೆ ಎಂದು ತಿಳಿಸಿದೆ.

'ಭಗವದ್ಗೀತೆ ಉದ್ಯಾನ'ದಲ್ಲಿ ವಿಧ್ವಂಸಕ ಕೃತ್ಯ: ಭಾರತ ಖಂಡನೆ

ಟೊರೊಂಟೊ/ನವದೆಹಲಿ: ಕೆನಡಾದ ಬ್ರಾಂಪ್ಟನ್‌ನಲ್ಲಿ ಇತ್ತೀಚೆಗೆ 'ಶ್ರೀಮದ್ ಭಗವದ್ಗೀತಾ ಉದ್ಯಾನ'ವೆಂದು ಮರು ನಾಮಕರಣ ಮಾಡಿದ್ದ ಉದ್ಯಾನದಲ್ಲಿ ನಡೆದಿರುವ ಭಾರತ ವಿರೋಧಿ ವಿಧ್ವಂಸಕ ಕೃತ್ಯವನ್ನು ಭಾರತ ತೀವ್ರವಾಗಿ ಖಂಡಿಸಿದೆ. ಘಟನೆಯ ಬಗ್ಗೆ ತನಿಖೆ ನಡೆಸಿ, ಅಪರಾಧಿಗಳ ವಿರುದ್ಧ ತ್ವರಿತ ಕ್ರಮ ಕೈಗೊಳ್ಳುವಂತೆ ಕೆನಡಾ ಸರ್ಕಾರವನ್ನು ಒತ್ತಾಯಿಸಿದೆ.

'ಬ್ರಾಂಪ್ಟನ್‌ನಲ್ಲಿರುವ ಶ್ರೀ ಭಗವದ್ಗೀತಾ ಪಾರ್ಕ್‌ನಲ್ಲಿ ನಡೆದ ದ್ವೇಷದ ಅಪರಾಧ ಖಂಡನೀಯ. ಅಧಿಕಾರಿಗಳು ಮತ್ತು ಪೊಲೀಸರು ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು' ಎಂದು ಕೆನಡಾದಲ್ಲಿರುವ ಭಾರತದ ಹೈಕಮಿಷನ್ ಒತ್ತಾಯಿಸಿ, ಟ್ವೀಟ್ ಮಾಡಿದೆ.

ಆದರೆ, ಬ್ರಾಂಪ್ಟನ್‌ನಲ್ಲಿನ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ಕೃತ್ಯ ನಡೆದಿರುವುದನ್ನು ನಿರಾಕರಿಸಿದ್ದಾರೆ. ಘಟನೆ ನಡೆದಿರುವ ಬಗ್ಗೆ ಯಾವುದೇ ಪುರಾವೆಗಳಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

'ಟ್ರಾಯರ್ಸ್ ಪಾರ್ಕ್' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಉದ್ಯಾನಕ್ಕೆ ಭಗವದ್ಗೀತೆಯ ಹೆಸರು ಮರುನಾಮಕರಣ ಮಾಡಿ, ಸೆಪ್ಟೆಂಬರ್ 28ರಂದು ಅನಾವರಣಗೊಳಿಸಲಾಗಿತ್ತು. ಕೆನಡಾದಲ್ಲಿ ಮತ್ತೊಂದು ದೇವಾಲಯ ಧ್ವಂಸಗೊಳಿಸಿದ ಕೆಲ ದಿನಗಳ ಬೆನ್ನಲ್ಲೇ ಈ ದಾಳಿ ನಡೆದಿದೆ.

ಉತ್ತರ ಅಮೆರಿಕದಲ್ಲಿ ಇತ್ತೀಚೆಗೆ 'ನ್ಯಾಯಕ್ಕಾಗಿ ಸಿಖ್‌ರು' ಎಂಬ ಹೆಸರಿನಲ್ಲಿ 'ಖಲಿಸ್ತಾನ'ದ ಬೆಂಬಲಿಗರು ಹಿಂದೂ ಮೂರ್ತಿಗಳು, ದೇಗುಲಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದ್ದಾರೆ.

ಉದ್ಯಾನದಲ್ಲಿ ವಿಧ್ವಂಸಕ ಕೃತ್ಯ ನಡೆದಿರುವುದನ್ನು ಖಚಿತಪಡಿಸಿರುವ ಬ್ರಾಂಪ್ಟನ್ ಮೇಯರ್ ಪ್ಯಾಟ್ರಿಕ್ ಬ್ರೌನ್, 'ಕೆನಡಾ ಇಂತಹ ದಾಳಿಕೋರರನ್ನು ಸಹಿಸಿಕೊಳ್ಳುವುದಿಲ್ಲ. ಉದ್ಯಾನದ ಫಲಕ ಧ್ವಂಸಗೊಳಿಸಿರುವುದು ತಿಳಿದಿದೆ. ಹೆಚ್ಚಿನ ತನಿಖೆಗಾಗಿ ಪೀಲ್‌ನ ಪ್ರಾದೇಶಿಕ ಪೊಲೀಸರಿಗೆ ಸೂಚಿಸಿದ್ದೇವೆ. ಉದ್ಯಾನದ ಅಧಿಕಾರಿಗಳು ಫಲಕಗಳನ್ನು ಸರಿಪಡಿಸುತ್ತಿದ್ದಾರೆ' ಎಂದು ಭಾನುವಾರ ಟ್ವೀಟ್ ಮಾಡಿದ್ದಾರೆ.

ಸಚಿವ ಜೈಶಂಕರ್ ಆರೋಪ ಅಲ್ಲಗಳೆದ ಪಾಕ್

ಇಸ್ಲಾಮಾಬಾದ್ (ಪಿಟಿಐ): 'ಭಯೋತ್ಪಾದನೆ ಪೋಷಿಸುವಲ್ಲಿ ಪಾಕಿಸ್ತಾನವು ಇತರ ರಾಷ್ಟ್ರಗಳಿಗಿಂತಲೂ ಮುಂಚೂಣಿಯಲ್ಲಿದೆ. ಆ ದೇಶವು ಅಂತರರಾಷ್ಟ್ರೀಯ ಭಯೋತ್ಪಾದನೆಗೆ ಹೆಸರುವಾಸಿಯಾಗಿದೆ' ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ನೀಡಿದ್ದ ಹೇಳಿಕೆಯನ್ನು ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಸೋಮವಾರ ತಳ್ಳಿ ಹಾಕಿದೆ.

ವಡೋದರದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಜೈಶಂಕರ್, 'ಪಾಕಿಸ್ತಾನದಂತೆ ಬೇರೆ ಯಾವ ರಾಷ್ಟ್ರವೂ ಭಯೋತ್ಪಾದನೆ ಉತ್ತೇಜಿಸುತ್ತಿಲ್ಲ' ಎಂದಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಪಾಕ್ ವಿದೇಶಾಂಗ ಸಚಿವಾಲಯ, 'ಜೈಶಂಕರ್ ಅವರ ಹೇಳಿಕೆಯು ಬೇಜವಾಬ್ದಾರಿತನದಿಂದ ಕೂಡಿದೆ. ಅಂತರರಾಷ್ಟ್ರೀಯ ಸಮುದಾಯದ ದಾರಿ ತಪ್ಪಿಸುವಂತಿದೆ' ಎಂದು ದೂರಿದೆ.

ಸಂಕ್ಷಿಪ್ತ ಸುದ್ದಿ

ಪಾಕ್‌ಗೆ ಭೇಟಿ: ಮನೋಜ್ ಝಾಗೆ ಇಲ್ಲ ಅನುಮತಿ

ನವದೆಹಲಿ: ಆರ್‌ಜೆಡಿ ಸಂಸದ ಮನೋಜ್ ಝಾ ಅವರಿಗೆ ಪಾಕಿಸ್ತಾನಕ್ಕೆ ಭೇಟಿ ನೀಡಲು ಕೇಂದ್ರ ಗೃಹ ಸಚಿವಾಲಯ ಅನುಮತಿ ನೀಡಿದರೂ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಅವಕಾಶ ನಿರಾಕರಿಸಿದೆ.

ಅಕ್ಟೋಬರ್ 22 ಮತ್ತು 23ರಂದು ನಡೆಯಲಿರುವ 4ನೇ ಅಸ್ಮಾ ಜಹಾಂಗೀರ್ ಸಮಾವೇಶದಲ್ಲಿ ಪಾಲ್ಗೊಂಡು ಭಾಷಣ ಮಾಡಲು ಮನೋಜ್ ಅವರನ್ನು ಪಾಕಿಸ್ತಾನದ ಅಸ್ಮಾ ಜಹಾಂಗೀರ್ ಫೌಂಡೇಶನ್, ಅಲ್ಲಿನ ಸುಪ್ರೀಂ ಕೋರ್ಟ್ ವಕೀಲರ ಸಂಘ ಹಾಗೂ ಇತರ ಸಂಘಟನೆಗಳು ಆಹ್ವಾನಿಸಿದ್ದವು.

ಪಾಕಿಸ್ತಾನಕ್ಕೆ ತೆರಳಲು ಅನುಮತಿ ಕೋರಿ ಮನೋಜ್ ಅವರು ಗೃಹ ಸಚಿವಾಲಯ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯಗಳಿಗೆ ಅರ್ಜಿ ಸಲ್ಲಿಸಿದ್ದರು.

'ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಟ ನಡೆಸಿರುವ ಅಸ್ಮಾ ಜಹಾಂಗೀರ್ ಅವರ ಹೆಸರಿನಲ್ಲಿ ನಡೆಯುವ ಸಮಾವೇಶದಲ್ಲಿ ಪಾಲ್ಗೊಳ್ಳಲು ಅನುಮತಿ ನಿರಾಕರಿಸಿರುವುದು ದುರಾದೃಷ್ಟಕರ' ಎಂದು ಮನೋಜ್ ಅವರು ಹೇಳಿದ್ದಾರೆ.

ಪಾಕ್‌ನಲ್ಲಿ 57 ಲಕ್ಷ ಮಂದಿಗೆ ಆಹಾರ ಬಿಕ್ಕಟ್ಟು: ಎಚ್ಚರಿಕೆ

ಇಸ್ಲಾಮಾಬಾದ್ (ಎಪಿ): ಪಾಕಿಸ್ತಾನದ ಸುಮಾರು 57 ಲಕ್ಷ ಪ್ರವಾಹ ಸಂತ್ರಸ್ತರು ಮುಂದಿನ ಮೂರು ತಿಂಗಳಲ್ಲಿ ಗಂಭೀರವಾದ ಆಹಾರ ಸಮಸ್ಯೆ ಎದುರಿಸಲಿದ್ದಾರೆ ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ.

ಪಾಕಿಸ್ತಾನದಲ್ಲಿ ಉಂಟಾಗಿರುವ ಪ್ರವಾಹ ಪರಿಸ್ಥಿತಿ ಆಹಾರ ಅಭದ್ರತೆಗೆ ಕಾರಣವಾಗಲಿದೆ. ಪ್ರವಾಹ ಪೀಡಿತ ಸ್ಥಳಗಳ ಸುಮಾರು 57 ಲಕ್ಷ ಜನರು ಸೆಪ್ಟೆಂಬರ್ ಮತ್ತು ನವೆಂಬರ್ ವೇಳೆಗೆ ಆಹಾರ ಬಿಕ್ಕಟ್ಟು ಎದುರಿಸಲಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವೀಯ ಸಹಕಾರ ಇಲಾಖೆ ತಿಳಿಸಿದೆ.

ರಾಷ್ಟ್ರೀಯ ಕ್ರೀಡಾಕೂಟ: ಲಕ್ಷ್ಯಾ, ಮಹಿಳಾ ರಿಲೇ ತಂಡ ಕೂಟ ದಾಖಲೆ

ಈಜು ಸ್ಪರ್ಧಿಗಳ ಪದಕ ಬೇಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜು ಸ್ಪರ್ಧಿಗಳು ಗುಜರಾತ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮಿಂಚಿನ ಪ್ರದರ್ಶನ ಮುಂದುವರಿಸಿದ್ದಾರೆ. ಸೋಮವಾರ ಎರಡು ಚಿನ್ನ ಸೇರಿದಂತೆ ಆರು ಪದಕಗಳನ್ನು ಗೆದ್ದುಕೊಂಡರು.

ಮಹಿಳೆಯರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಎಸ್.ಲಕ್ಷ್ಯಾ ನೂತನ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿದರು. ಅವರು 2 ನಿಮಿಷ 42.63 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕರ್ನಾಟಕದ ಹರ್ಷಿತಾ ಜಯರಾಂ (2ನಿ. 45.27 ಸೆ.) ಇದೇ ವಿಭಾಗದಲ್ಲಿ ಕಂಚು ಪಡೆದರು.

ಮಹಿಳೆಯರ 4X100 ಮೀ. ಮೆಡ್ಲೆ ರಿಲೇನಲ್ಲಿ ರಾಜ್ಯ ತಂಡ 4 ನಿ. 27.78 ಸೆ.ಗಳಲ್ಲಿ ಗುರಿ ತಲುಪಿ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿತು. ಪುರುಷರ ತಂಡ (3 ನಿ. 53.44 ಸೆ.) ಬೆಳ್ಳಿ ಗೆದ್ದಿತು.

ಪುರುಷರ 1,500 ಮೀ. ಫ್ರೀಸ್ಟೈಲ್‌ನಲ್ಲಿ ಅನೀಶ್ ಎಸ್.ಗೌಡ (16 ನಿ. 5.94 ಸೆ.) ಬೆಳ್ಳಿ ಪಡೆದರೆ, ಮಹಿಳೆಯರ 800 ಮೀ. ಫ್ರೀಸ್ಟೈಲ್‌ನಲ್ಲಿ ಅಶ್ಮಿತಾ ಚಂದ್ರ (9 ನಿ. 27.54 ಸೆ.) ಕಂಚು ತಮ್ಮದಾಗಿಸಿಕೊಂಡರು.


ಎಸ್.ಲಕ್ಷ್ಯಾ

ಟೆನಿಸ್ ತಂಡಗಳು ಫೈನಲ್‌ಗೆ: ಅಮೋಘ ಆಟ ಮುಂದುವರಿಸಿದ ಕರ್ನಾಟಕದ ಪುರುಷ ಮತ್ತು ಮಹಿಳಾ ಟೆನಿಸ್ ಡಬಲ್ಸ್ ವಿಭಾಗದ ತಂಡಗಳು ಫೈನಲ್‌ಗೆ ಲಗ್ಗೆಯಿಟ್ಟವು.

ಅಹಮದಾಬಾದ್‌ನ ಸಾಬರಮತಿಯಲ್ಲಿ ಟೆನಿಸ್ ಸ್ಪರ್ಧೆಗಳ ನಡೆಯುತ್ತಿವೆ. ಸೋಮವಾರ ನಡೆದ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ಕರ್ನಾಟಕದ ಆದಿಲ್ ಕಲ್ಯಾಣಪುರ ಮತ್ತು ಎಸ್. ಡಿ. ಪ್ರಜ್ವಲ್ ದೇವ್ 5-7,6-3,10-6ರಿಂದ ಆಂಧ್ರಪ್ರದೇಶದ ಶಿವದೀಪ ಕೋಸರಾಜು ಮತ್ತು ಅನಂತ್ ಮಣಿ ಅವರನ್ನು ಸೋಲಿಸಿ ಪ್ರಶಸ್ತಿ ಸುತ್ತು ತಲುಪಿದರು.

ಮಾಹಿನ್‌ಗೆ ಚಿನ್ನ

ಕರ್ನಾಟಕದ ಮಾಹಿನ್ ಟಂಡನ್ ಅವರು ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಆರ್ಟಿಸ್ಟಿಕ್ ಸ್ಕೇಟಿಂಗ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಇದೇ ವಿಭಾಗದಲ್ಲಿ ಕಿರಣ್ ಕುಮಾರ್ ಮತ್ತು ಮಹಿಳೆಯರ ವಿಭಾಗದಲ್ಲಿ ಸುವರ್ಣಿಕಾ ಕಂಚಿನ ಪದಕಗಳಿಗೆ ಕೊರಳೊಡ್ಡಿದರು.

ಮಹಿಳಾ ಡಬಲ್ಸ್‌ನಲ್ಲಿ ಸೋಹಾ ಸಾದಿಕ್ ಮತ್ತು ಶರ್ಮದಾ ಬಾಲು ಜೋಡಿಯು 6-2, 6-1ರಿಂದ ಹರಿಯಾಣದ ಸಂದೀಪ್ತಿ ಸಿಂಗ್ ಮತ್ತು ರಿತು ಒಹಲ್ಯಾನ್ ಅವರನ್ನು ಪರಾಭವಗೊಳಿಸಿದರು.

ಪ್ರಜ್ವಲ್, ಮನೀಷ್ ಜಿ. ಮತ್ತು ಶರ್ಮದಾ ಬಾಲು ಅವರು ಸಿಂಗಲ್ಸ್ ವಿಭಾಗಗಳಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸಿದರು. ಪುರುಷರ ವಿಭಾಗದಲ್ಲಿ ಪ್ರಜ್ವಲ್ 6-4, 6-2ರಿಂದ ತಮಿಳುನಾಡಿನ ಅಭಿನವ್ ಸಂಜೀವ್ ಎದುರು, ಮನೀಷ್ 3-6, 7-5, 6-2ರಿಂದ ಹರಿಯಾಣದ ಕರಣ್ ಸಿಂಗ್ ವಿರುದ್ಧ ಗೆದ್ದರು. ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಶರ್ಮದಾ 1-6, 6-3, 6-1ರಿಂದ ತೆಲಂಗಾಣದ ಪಾವನಿ ಪಾಠಕ್ ಸವಾಲು ಮೀರಿದರು.


ಸೋಹಾ ಮತ್ತು ಶರ್ಮದಾ ಬಾಲು

ಕರ್ನಾಟಕ ಫುಟ್‌ಬಾಲ್ ತಂಡಕ್ಕೆ ಜಯ: ಶ್ರೀಧರ್ ಕೋಟಿಕೇಲ (4ನೇ ನಿಮಿಷ) ಮತ್ತು ಸತೀಶ್ ಕುಮಾರ್ (10ನೇ ನಿ.) ಅವರ ಕಾಲ್ಚಳಕದ ಬಲದಿಂದ ಕರ್ನಾಟಕ ಪುರುಷರ ಫುಟ್‌ಬಾಲ್ ತಂಡವು 2–1ರಿಂದ ಆತಿಥೇಯ ಗುಜರಾತ್ ತಂಡಕ್ಕೆ ಸೋಲುಣಿಸಿತು.

ಗುಜರಾತ್ ತಂಡಕ್ಕಾಗಿ ಪರ್ಮಾರ್ ಧರ್ಮೇಶ್ 52ನೇ ನಿಮಿಷದಲ್ಲಿ ಒಂದು ಗೋಲು ಹೊಡೆದರು.

ಮೇಘನಾ ಮಿಂಚು

ಸಿಲ್ಹೆಟ್, ಬಾಂಗ್ಲಾದೇಶ (ಪಿಟಿಐ): ಆರಂಭಿಕ ಬ್ಯಾಟರ್ ಎಸ್. ಮೇಘನಾ (69 ರನ್, 53 ಎ., 4X11, 6X1) ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಭಾರತ ತಂಡವು ಏಷ್ಯಾ ಕಪ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ 2ನೇ ಗೆಲುವು ಸಾಧಿಸಿತು.

ಸಿಲ್ಹೆಟ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ ಡಕ್ವರ್ಥ್ ಲೂಯಿಸ್ ನಿಯಮದ ಆಧಾರದಲ್ಲಿ ಮಲೇಷ್ಯಾ ತಂಡವನ್ನು 30 ರನ್‌ಗಳಿಂದ ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ ತಂಡ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 181 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಮಲೇಷ್ಯಾ 5.2 ಓವರ್‌ಗಳಲ್ಲಿ 2 ವಿಕೆಟ್‌ಗೆ 16 ರನ್ ಗಳಿಸಿದ್ದಾಗ ಮಳೆ ಬಂದು ಆಟ ನಿಂತಿತು. ಆ ಬಳಿಕ ಆಟ ಮುಂದುವರಿಯದ ಕಾರಣ ಡಕ್ವರ್ಥ್ ಲೂಯಿಸ್ ನಿಯಮದಂತೆ ಭಾರತವನ್ನು ವಿಜಯಿ ಎಂದು ಘೋಷಿಸಲಾಯಿತು.

ಹಾಕಿ: ಭಾರತ–ಆಸ್ಟ್ರೇಲಿಯಾ ಸರಣಿ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡ ನವೆಂಬರ್– ಡಿಸೆಂಬರ್ ತಿಂಗಳಲ್ಲಿ ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಲಿದ್ದು, ಐದು ಪಂದ್ಯಗಳ ಸರಣಿಯಲ್ಲಿ ಆಡಲಿದೆ.

ಅಡಿಲೇಡ್‌ನ ಕ್ರೀಡಾಂಗಣದಲ್ಲಿ ನ.26 ರಂದು ಮೊದಲ ಪಂದ್ಯ ನಡೆಯಲಿದೆ.

ಕಾಲ್ತುಳಿತ: ಸತ್ತವರಲ್ಲಿ 32 ಮಕ್ಕಳು

ಮಾಲಾಂಗ್, ಇಂಡೊನೇಷ್ಯಾ (ರಾಯಿಟರ್ಸ್/ಎಪಿ): ಇಲ್ಲಿಯ ಸ್ಥಳೀಯ ಫುಟ್‌ಬಾಲ್ ಪಂದ್ಯದ ವೇಳೆ ನಡೆದ ಹಿಂಸಾಚಾರ ಮತ್ತು ಕಾಲ್ತುಳಿತ ಘಟನೆಯ ತನಿಖೆಗೆ ಇಂಡೊನೇಷ್ಯಾ ಸರ್ಕಾರವು ಸ್ವತಂತ್ರ ತಂಡವನ್ನು ರಚಿಸಿದೆ. ಭೀಕರ ದುರಂತದಲ್ಲಿ ಸಾವಿಗೀಡಾದ 125 ಮಂದಿಯಲ್ಲಿ 32 ಮಕ್ಕಳೂ ಸೇರಿದ್ದಾರೆ.

ಶನಿವಾರ ತಡರಾತ್ರಿ ಇಲ್ಲಿಯ ಕಂಜುರುಹಾನ್ ಕ್ರೀಡಾಂಗಣದಲ್ಲಿ ನಡೆದ ಬಿಆರ್‌ಐ ಲೀಗ್ ಪಂದ್ಯದಲ್ಲಿ ಸ್ಥಳೀಯ ಅರೆಮಾ ಎಫ್‌ಸಿ ತಂಡವು 2–3 ಗೋಲುಗಳಿಂದ ಪರ್ಸೆಬಾಯಾ ಸುರಬಯಾ ಎದುರು ಸೋತಿತ್ತು. ಇದರಿಂದ ರೊಚ್ಚಿಗೆದ್ದ ಅರೆಮಾ ಎಫ್‌ಸಿ ಅಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗಿದ್ದರು. ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಷೆಲ್ ಸಿಡಿಸಿದಾಗ ಉಂಟಾದ ಕಾಲ್ತುಳಿತದಿಂದಾಗಿ ದುರಂತ ಸಂಭವಿಸಿತ್ತು. 320ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದ್ದನ್ನು ದೇಶದ ಮಾನವ ಹಕ್ಕುಗಳ ಆಯೋಗ ಪ್ರಶ್ನಿಸಿದೆ.

‘ಅಶ್ರುವಾಯು ಪ್ರಯೋಗಿಸಿದ 12ಕ್ಕೂ ಹೆಚ್ಚಿನ ಸಿಬ್ಬಂದಿ ವಿರುದ್ಧ ತನಿಖೆ ನಡೆಸಲಾಗುತ್ತಿದೆ’ ಎಂದು ಇಂಡೊನೇಷ್ಯಾ ಪೊಲೀಸರು ತಿಳಿಸಿದ್ದಾರೆ.

‘ದುರಂತದಲ್ಲಿ ಸಾವಿಗೀಡಾದವರಲ್ಲಿ ಮೂರರಿಂದ 17 ವರ್ಷದೊಳಗಿನ 32 ಮಕ್ಕಳು ಇದ್ದರು’ ಎಂದು ಇಂಡೊನೇಷ್ಯಾದ ಮಹಿಳಾ ಸಬಲೀಕರಣ ಮತ್ತು ಮಕ್ಕಳ ರಕ್ಷಣಾ ಅಧಿಕಾರಿ ನಹರ್ ತಿಳಿಸಿದ್ದಾರೆ.

ಅಶ್ರುವಾಯು ಪ್ರಯೋಗಿಸಿದ ಸಂಬಂಧ ಇಂಡೊನೇಷ್ಯಾದ ಪೊಲೀಸ್ ಮುಖ್ಯಸ್ಥರೊಬ್ಬರು ಮತ್ತು ಒಂಬತ್ತು ಪ್ರಮುಖ ಅಧಿಕಾರಿಗಳನ್ನು ಹುದ್ದೆಯಿಂದ ತೆಗೆದುಹಾಕಲಾಗಿದೆ.

‘ಘಟನೆಯ ಕುರಿತು ತನಿಖೆ ನಡೆಸುತ್ತಿರುವ ತಂಡದಲ್ಲಿ ಫುಟ್‌ಬಾಲ್ ಪರಿಣತರು, ಸರ್ಕಾರಿ ಅಧಿಕಾರಿಗಳು ಇದ್ದಾರೆ’ ಎಂದು ದೇಶದ ಭದ್ರತಾ ಸಚಿವ ಮಹಫೂದ್ ತಿಳಿಸಿದ್ದಾರೆ.

ಕ್ಷಮೆಯಾಚನೆ: ‘ಫುಟ್‌ಬಾಲ್ ಕ್ಲಬ್‌ನ ಅಧ್ಯಕ್ಷನಾಗಿ ಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಸಂತ್ರಸ್ತರ ಕ್ಷಮೆಯಾಚಿಸುತ್ತೇನೆ’ ಎಂದು ಅರೆಮಾ ಎಫ್‌ಸಿ ಅಧ್ಯಕ್ಷ ಗಿಲಾಂಗ್ ವಿಡ್ಯಾ ಪ್ರಮಾನಾ ಅವರು ಲೈವ್ ವಿಡಿಯೊದಲ್ಲಿ ಕಣ್ಣೀರು ಸುರಿಸುತ್ತಲೇ ನುಡಿದರು.


ದುರಂತದಲ್ಲಿ ಮಡಿದವರಿಗಾಗಿ ಸೋಮವಾರ ಅರೆಮಾ ಎಫ್‌ಸಿ ತಂಡದ ಆಟಗಾರರು ಮತ್ತು ಸಿಬ್ಬಂದಿ ಪ್ರಾರ್ಥನೆ ಸಲ್ಲಿಸಿದರು— ಎಎಫ್‌ಪಿ ಚಿತ್ರ

ಮೊದಲ ಬಾರಿ ಪಂದ್ಯ ವೀಕ್ಷಣೆಗೆ ಬಂದಿದ್ದರು

‘ನನ್ನ ತಮ್ಮಂದಿರಾದ ಅಹ್ಮದ್ ಕಾಯ್‌ಹೊ (15) ಮತ್ತು ಮುಹಮ್ಮದ್ ಫರೆಲ್ (14) ಅರೆಮಾ ಎಫ್‌ಸಿಯ ಪಂದ್ಯ ವೀಕ್ಷಣೆಗೆ ಮೊದಲ ಬಾರಿಗೆ ಕಂಜುರುಹಾನ್ ಕ್ರೀಡಾಂಗಣಕ್ಕೆ ಬಂದಿದ್ದರು. ಇಷ್ಟು ದೊಡ್ಡ ದುರಂತವಾಗುತ್ತದೆ ಎಂದು ಗೊತ್ತಿರಲಿಲ್ಲ ಎಂದು ತನ್ನ ತಮ್ಮಂದಿರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಎಂದಾಹ್ ವಾಯುನಿ ಕಣ್ಣೀರಾದರು.

ಅಹ್ಮದ್ ಮತ್ತು ಫರೆಲ್ ದುರಂತದಲ್ಲಿ ಸಾವನ್ನಪ್ಪಿದ್ದರು.

ದಕ್ಷಿಣ ಆಫ್ರಿಕಾ ವಿರುದ್ಧದ ಕೊನೆಯ ಟಿ20 ಇಂದು

ಭಾರತಕ್ಕೆ ‘ಕ್ಲೀನ್‌ಸ್ವೀಪ್’ ಗುರಿ

ಇಂದೋರ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ 3 ಪಂದ್ಯಗಳ ಟಿ20 ಸರಣಿಯನ್ನು ಈಗಾಗಲೇ ಕೈವಶ ಮಾಡಿಕೊಂಡಿರುವ ಭಾರತ ತಂಡ, ‘ಕ್ಲೀನ್‌ಸ್ವೀಪ್’ ಸಾಧನೆಯ ಗುರಿಯೊಂದಿಗೆ ಮಂಗಳವಾರ ಕಣಕ್ಕಿಳಿಯಲಿದೆ.

ಗುವಾಹಟಿಯಲ್ಲಿ ಭಾನುವಾರ ನಡೆದಿದ್ದ ಪಂದ್ಯವನ್ನು ಭಾರತ 16 ರನ್‌ಗಳಿಂದ ಗೆದ್ದಿತ್ತು. ಈ ಮೂಲಕ ದಕ್ಷಿಣ ಆಫ್ರಿಕಾ ಎದುರು ತವರಿನಲ್ಲಿ ಮೊದಲ ಬಾರಿ ಟಿ20 ಸರಣಿ ಗೆದ್ದ ಸಾಧನೆ ಮಾಡಿತ್ತು.

ಇಲ್ಲಿನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯಲಿರುವ ಅಂತಿಮ ಪಂದ್ಯದಲ್ಲಿ ರೋಹಿತ್ ಶರ್ಮ ಬಳಗ ಕೆಲವೊಂದು ಬದಲಾವಣೆಗಳೊಂದಿಗೆ ಕಣಕ್ಕಿಳಿಯಲಿದೆ. ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಮತ್ತು ವಿರಾಟ್ ಕೊಹ್ಲಿ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ವಿಶ್ವಕಪ್‌ಗೆ ಮುನ್ನ ಭಾರತ ಆಡಲಿರುವ ಕೊನೆಯ ಟಿ20 ಪಂದ್ಯ ಇದಾಗಿದ್ದು, ಲೋಪಗಳನ್ನು ಸರಿಪಡಿಸಲು ಸಿಗುವ ಅಂತಿಮ ಅವಕಾಶವೂ ಹೌದು. ಕಳೆದ ಪಂದ್ಯದಲ್ಲಿ ಪೂರ್ಣ ವೈಫಲ್ಯ ಅನುಭವಿಸಿದ್ದ ಬೌಲರ್‌ಗಳು ಈ ಪಂದ್ಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ.

ಏಷ್ಯಾ ಕಪ್ ಬಳಿಕ ಭಾರತ ಐದು ಟಿ20 ಪಂದ್ಯಗಳನ್ನು ಆಡಿದ್ದು, ಎಲ್ಲ ಬ್ಯಾಟ್ಸ್‌ಮನ್‌ಗಳು ತಮ್ಮ ಸಾಮರ್ಥ್ಯ ತೋರಿದ್ದಾರೆ. ಸೂರ್ಯಕುಮಾರ್ ಯಾದವ್ ಅವರು ಬಿರುಸಿನ ಆಟದ ಮೂಲಕ ಇತರ ಬ್ಯಾಟ್ಸ್‌ಮನ್‌ಗಳಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ.


ಸೂರ್ಯಕುಮಾರ್ ಯಾದವ್

ಕೊಹ್ಲಿಗೆ ವಿಶ್ರಾಂತಿ ನೀಡಿರುವುದರಿಂದ ಅವರ ಜಾಗದಲ್ಲಿ ಶ್ರೇಯಸ್ ಅಯ್ಯರ್ ಆಡಲಿದ್ದಾರೆ. ರಾಹುಲ್ ಜಾಗದಲ್ಲಿ ಸೂರ್ಯಕುಮಾರ್ ಅಥವಾ ರಿಷಭ್ ಪಂತ್ ಅವರು ರೋಹಿತ್ ಜತೆ ಇನಿಂಗ್ಸ್ ಆರಂಭಿಸಲಿದ್ದಾರೆ.

ಬೌಲರ್‌ಗಳು ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಳ್ಳಲು ವಿಫಲರಾಗಿರುವುದು ಭಾರತಕ್ಕೆ ಚಿಂತೆ ಉಂಟುಮಾಡಿದೆ. ಬೂಮ್ರಾ ಅನುಪಸ್ಥಿತಿಯಲ್ಲಿ ವೇಗದ ಬೌಲಿಂಗ್‌ನ ನೇತೃತ್ವ ವಹಿಸಿರುವ ಅರ್ಷದೀಪ್ ಸಿಂಗ್ ಮೊದಲ ಪಂದ್ಯದಲ್ಲಿ ಪ್ರಭಾವಿ ಎನಿಸಿದ್ದರೂ ಭಾನುವಾರ 4 ಓವರ್‌ಗಳಲ್ಲಿ 62 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಹರ್ಷಲ್ ಪಟೇಲ್ ಮತ್ತು ಆರ್.ಅಶ್ವಿನ್ ಕೂಡಾ ಇನ್ನಷ್ಟು ಪರಿಣಾ ಮಕಾರಿಯಾಗಬೇಕಿದೆ. ಬೂಮ್ರಾ ಬದಲು ತಂಡದಲ್ಲಿ ಸ್ಥಾನ ಪಡೆದಿರುವ ಮೊಹಮ್ಮದ್ ಸಿರಾಜ್ ಆಡುವ ಸಾಧ್ಯತೆಯಿದೆ. ದಕ್ಷಿಣ ಆಫ್ರಿಕಾ ತಂಡ ‘ಕ್ಲೀನ್‌ಸ್ವೀಪ್’ ಮುಖಭಂಗ ತಪ್ಪಿಸಿಕೊಳ್ಳಲು ಈ ಪಂದ್ಯ ಗೆಲ್ಲುವುದು ಅನಿವಾರ್ಯ.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಟಿ20 ವಿಶ್ವಕಪ್‌ಗೆ ಬೂಮ್ರಾ ಅಲಭ್ಯ

ನವದೆಹಲಿ (ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ, ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಆಡುವುದಿಲ್ಲ ಎಂದು ಬಿಸಿಸಿಐ ಅಧಿಕೃತವಾಗಿ ಪ್ರಕಟಿಸಿದೆ.


ಬೂಮ್ರಾ

ಬೆನ್ನುನೋವಿನಿಂದ ಬಳಲುತ್ತಿರುವ ಬೂಮ್ರಾ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ಬಿಸಿಸಿಐ ಮೂಲಗಳು ಈ ಹಿಂದೆಯೇ ತಿಳಿಸಿದ್ದವು. ಆದರೆ ಮಂಡಳಿ ಅಧಿಕೃತವಾಗಿ ಏನೂ ಹೇಳಿರಲಿಲ್ಲ.

‘ಬೂಮ್ರಾ ವಿಶ್ವಕಪ್‌ಗೆ ತೆರಳುತ್ತಿಲ್ಲ ಎಂದು ವೈದ್ಯರ ತಂಡ ಹೇಳಿದೆ. ವೇಗಿಯ ವೈದ್ಯಕೀಯ ವರದಿ ಆಧರಿಸಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಿಟಿ: ಭಾರತ ತಂಡಗಳಿಗೆ ಗೆಲುವು

ಚೆಂಗ್ಡು, ಚೀನಾ (ಪಿಟಿಐ): ಭಾರತ ಮಹಿಳಾ ತಂಡದವರು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ಮಹಿಳೆಯರು 3–1 ರಲ್ಲಿ ಈಜಿಪ್ಟ್ ತಂಡವನ್ನು ಮಣಿಸಿದರೆ, ಪುರುಷರು 3–2ರಲ್ಲಿ ಕಜಕಸ್ತಾನ ತಂಡವನ್ನು ಸೋಲಿಸಿದರು. ಪುರುಷರ ತಂಡ ಕೊನೆಯ ಪಂದ್ಯದಲ್ಲಿ ಫ್ರಾನ್ಸ್ ವಿರುದ್ಧ ಗೆದ್ದರೆ 16ರ ಘಟ್ಟ ಪ್ರವೇಶಿಸಲಿದೆ.

ಮೊದಲ ಸಿಂಗಲ್ಸ್‌ನಲ್ಲಿ ಜಿ.ಸತ್ಯನ್ 11-1, 11-9, 11-5 ರಲ್ಲಿ ಡೆನಿಸ್ ಜೊಲಡೆವ್ ವಿರುದ್ಧ ಗೆದ್ದು ಉತ್ತಮ ಆರಂಭ ನೀಡಿದರು. ಆದರೆ ಹರ್ಮೀತ್ ದೇಸಾಯಿ 6-11, 8-11, 9-11 ರಲ್ಲಿ ಕಿರಿಲ್ ಗೆರಸಿಮೆಂಕೊ ಎದುರು ಆಘಾತ ಅನುಭವಿಸಿದರು.

ಮಾನವ್ ಠಾಕರ್ 12-10, 11-1, 11-8 ರಲ್ಲಿ ಅಲನ್ ಕರ್ಮನ್‌ಗಲಿಯೆವ್ ವಿರುದ್ಧ ಗೆದ್ದು ಭಾರತಕ್ಕೆ 2–1 ಮುನ್ನಡೆ ತಂದಿತ್ತರು. ಸತ್ಯನ್ 2ನೇ ಪಂದ್ಯದಲ್ಲಿ ಕಿರಿಲ್ ಎದುರು ಸೋತರು. ನಿರ್ಣಾಯಕ ಸಿಂಗಲ್ಸ್‌ನಲ್ಲಿ ಹರ್ಮೀತ್, ಜೊಲಡೆವ್ ಅವರನ್ನು ಮಣಿಸಿ ಭಾರತದ ಜಯಕ್ಕೆ ಕಾರಣರಾದರು. ಮಹಿಳೆಯರ ವಿಭಾಗದಲ್ಲಿ ಶ್ರೀಜಾ ಅಕುಲಾ ಎರಡೂ ಸಿಂಗಲ್ಸ್ ಪಂದ್ಯಗಳನ್ನು ಗೆದ್ದರು. ಮಣಿಕಾ ಬಾತ್ರಾ ಕೂಡಾ ಗೆಲುವು ಸಾಧಿಸಿದರೆ, ದಿಯಾ ಚಿತಾಳೆ ಸೋತರು.

ಸಂಕ್ಷಿಪ್ತ ಸುದ್ದಿ

ಟೆನಿಸ್: ಬೋಪಣ್ಣ ಜೋಡಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮಟ್ವೆ ಮಿಡ್ಲ್‌ಕೂಪ್ ಜೋಡಿ ಟೆಲ್ ಅವೀವ್‌ನಲ್ಲಿ ನಡೆದ ಎಟಿಪಿ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಬೋಪಣ್ಣ– ಮಿಡ್ಲ್‌ಕೂಪ್ 6-2, 6-4 ರಲ್ಲಿ ಮೆಕ್ಸಿಕೊದ ಸಾಂಟಿಯಾಗೊ ಗೊನ್ಸಾಲೆಸ್ ಮತ್ತು ಅರ್ಜೆಂಟೀನಾದ ಆಂಡ್ರೆಸ್ ಮಲ್ಟೆನಿ ಅವರನ್ನು ಮಣಿಸಿದರು. ಒಂದು ಗಂಟೆ 12 ನಿಮಿಷಗಳಲ್ಲಿ ಗೆದ್ದರು.

ಮುಖ್ಯ ಸುತ್ತಿಗೆ ನಿಕ್ಷೇಪ್

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರು ಮೊಜಾಂಬಿಕ್‌ನಲ್ಲಿ ನಡೆಯುತ್ತಿರುವ ಐಟಿಎಫ್ ಎಂ15 ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಮುಖ್ಯ ಸುತ್ತಿಗೆ ಪ್ರವೇಶಿಸಿದ್ದಾರೆ.

ಸಿಂಗಲ್ಸ್ ವಿಭಾಗದ ಅರ್ಹತಾ ಸುತ್ತಿನ ಮೊದಲ ಹಣಾಹಣಿಯಲ್ಲಿ ನಿಕ್ಷೇಪ್ 6-4,6-1ರಿಂದ ರಷ್ಯಾದ ಅಲೆಕ್ಸಿ ಡಬ್ಲಿನ್ ಎದುರು ಗೆದ್ದರೆ, ಎರಡನೇ ಪಂದ್ಯದಲ್ಲಿ 6-1,6-1ರಿಂದ ಮೊಜಾಂಬಿಕ್‌ನ ಲೂಕಾ ಸ್ಯಾಂಟಿಯಾಗೊ ಎದುರು ಜಯ ಸಾಧಿಸಿದ್ದರು.

ಫೈನಲ್‌ಗೆ ಭಿಲವಾಡಾ ಇಂಡಿಯಾ ಕ್ಯಾಪಿಟಲ್ಸ್

ಜೋಧ್‌ಪುರ: ವಿಲಿಯಮ್ ಪೋಟರ್‌ಫೀಲ್ಡ್ (60, 43ಎ, 4X6, 6X3) ಹಾಗೂ ಶೇನ್ ವಾಟ್ಸನ್ (ಔಟಾಗದೆ 48, 24ಎ 4X2, 6X5) ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಭಿಲವಾಡಾ ಕಿಂಗ್ಸ್ ತಂಡವು ಲೆಜೆಂಡ್ಸ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ಸೋಮವಾರ ಎಲಿಮಿನೇಟರ್ ಪಂದ್ಯದಲ್ಲಿ ಭಿಲವಾಡಾ 6 ವಿಕೆಟ್‌ಗಳಿಂದ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 194 ರನ್ ಗಳಿಸಿತು. ಭಿಲವಾಡಾ 18.3 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ಬುಧವಾರ ನಡೆಯುವ ಫೈನಲ್ ಸೆಣಸಾಟದಲ್ಲಿ ಇಂಡಿಯಾ ಕ್ಯಾಪಿಟಲ್ಸ್ ಮತ್ತು ಭಿಲವಾಡಾ ಕಿಂಗ್ಸ್ ಮುಖಾಮುಖಿಯಾಗುವವು. ರಾತ್ರಿ 7.30ಕ್ಕೆ ಈ ಪಂದ್ಯ ಆರಂಭವಾಗಲಿದೆ.

ಸೌರಾಷ್ಟ್ರ ಹೋರಾಟ

ರಾಜ್‌ಕೋಟ್ (ಪಿಟಿಐ): ಮಧ್ಯಮ ಮತ್ತು ಕೊನೆಯ ಕ್ರಮಾಂಕದ ಬ್ಯಾಟರ್‌ಗಳ ಛಲದ ಆಟದ ನೆರವಿನಿಂದ ಸೌರಾಷ್ಟ್ರ ತಂಡ, ಇರಾನಿ ಕಪ್ ಕ್ರಿಕೆಟ್ ಪಂದ್ಯದಲ್ಲಿ ರೆಸ್ಟ್ ಆಫ್ ಇಂಡಿಯಾ ವಿರುದ್ಧ ಮರುಹೋರಾಟ ನಡೆಸಿದೆ.

ಮೂರನೇ ದಿನವಾದ ಸೋಮವಾರದ ಆಟದ ಅಂತ್ಯಕ್ಕೆ ಸೌರಾಷ್ಟ್ರ ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್‌ಗೆ 368 ರನ್ ಗಳಿಸಿದೆ. ಜಯದೇವ್ ಉನದ್ಕತ್ ಬಳಗ ಇದೀಗ 92 ರನ್‌ಗಳ ಮುನ್ನಡೆಯಲ್ಲಿದೆ.